ಜನತಾ ವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಸೋಮವಾರ, ಮೇ 02, 2022

ಸಂಪುಟ : 48 ಸಂಚಿಕೆ : 351 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com




# ಕಾರ್ಮಿಕರ ಕ್ಷೇಮಾಭ್ಯುದಯಕ್ಕೆ ಕೊಡುಗೆ ನೀಡದ ಡಬಲ್ ಇಂಜಿನ್ ಸರ್ಕಾರಗಳು



## ಮೇ ದಿನಾಚರಣೆಯಲ್ಲಿ ಪಿ.ವಿ. ಲೋಕೇಶ್ ಕಿಡಿ

ದಾವಣಗೆರೆ, ಮೇ 1- ಪ್ರಸ್ತುತ ನಮ್ಮನ್ನಾಳುತ್ತಿರುವ ಡಬಲ್ ಇಂಜಿನ್ ಸರ್ಕಾರಗಳು ಕಾರ್ಮಿಕ ವರ್ಗದ ಕ್ಷೇಮಾಭ್ಯುದಯಕ್ಕಾಗಿ ಯಾವುದೇ ಕೊಡುಗೆ ನೀಡಿಲ್ಲ. ಕಾರ್ಮಿಕರ ಎಲ್ಲಾ ಹಕ್ಕುಗಳನ್ನು ಕಸಿದುಕೊಳ್ಳುವ ತವಕದಲ್ಲಿವೆ ಎಂದು ಸಿಪಿಐ ರಾಷ್ಟ್ರೀಯ ಮಂಡಳಿ ಸದಸ್ಯ ಪಿ.ವಿ. ಲೋಕೇಶ್ ಕಿಡಿಕಾರಿದರು.

ಅವರು, ಇಂದು ನಗರದ ಜಯದೇವ ವೃತ್ತದಲ್ಲಿ ಭಾರತ ಕಮ್ಯೂನಿಸ್ಟ್ ಪಕ್ಷ ಮತ್ತು ಎಐಟಿಯುಸಿ ಜಿಲ್ಲಾ ಮಂಡಳಿ ಸಂಯುಕ್ತಾಶ್ರಯದಲ್ಲಿ ನಡೆದ ಮೇ ದಿನಾಚರಣೆ ಹಾಗೂ ಹುತಾತ್ಮರ 52ನೇ ವಾರ್ಷಿಕೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ರೈತರು, ಕಾರ್ಮಿಕರು ದೇಶದ ಆರ್ಥಿಕತೆ ಹೆಚ್ಚಿಸುವವರು. ಕಾರ್ಮಿಕರಿಗೆ ಸಿಗಬೇಕಾದ ಎಲ್ಲಾ ಸೌಲಭ್ಯಗಳನ್ನು ಅಧಿಕಾರದಲ್ಲಿರುವ ಯಾವುದೇ ಪಕ್ಷವಾಗಲೀ ನೀಡಬೇಕು. ಆದರೆ, ಪ್ರಸ್ತುತ ಕೇಂದ್ರ ಮತ್ತು ರಾಜ್ಯದಲ್ಲಿರುವ ಬಿಜೆಪಿ ಪಕ್ಷಗಳು ಕಾರ್ಮಿಕರಿಗೆ ಯಾವುದೇ ರೀತಿಯ ಅನುಕೂಲ ಮಾಡಿ ಕೊಡುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕಾರ್ಮಿಕರ, ರೈತರ, ಜನಸಾಮಾನ್ಯರ ಪರವಾಗಿ ಆಡಳಿತ ನಡೆಸದೇ ಉಳ್ಳವರ ಆರ್ಥಿಕ ಮಟ್ಟ ಮತ್ತಷ್ಟು ಹೆಚ್ಚಾಗುವಂತೆ ಕಾರ್ಯನಿರ್ವಹಿಸುತ್ತಿವೆ. ಇಡೀ ಏಷ್ಯಾ ಖಂಡದಲ್ಲಿ ಬಂಡವಾಳಶಾಹಿಗಳಿಂದ ಕಡ್ಡಾಯವಾಗಿ (5ನೇ ಪುಟಕ್ಕೆ)

# ಜಿಎಸ್‌ಟಿ ಸಂಗ್ರಹ ದಾಖಲೆಯ 1.68 ಲಕ್ಷ ಕೋಟಿ ರೂ.

ನವದೆಹಲಿ, ಮೇ 1 - ಏಪ್ರಿಲ್ ತಿಂಗಳಲ್ಲಿ ಜಿ.ಎಸ್.ಟಿ. ಸಂಗ್ರಹ 1.68 ಲಕ್ಷ ಕೋಟಿ ರೂ. ಹಂತಕ್ಕೆ ತಲುಪಿದೆ. ಜಿಎಸ್‌ಟಿ ಸಂಗ್ರಹದಲ್ಲಿ ಇದು ದಾಖಲೆಯಾಗಿದೆ. ಕಳೆದ ವರ್ಷ ಇದೇ ತಿಂಗಳಿಗೆ ಹೋಲಿಸಿದರೆ ತೆರಿಗೆ ಸಂಗ್ರಹ ಶೇ.20ರಷ್ಟು ಏರಿಕೆಯಾಗಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯ ತಿಳಿಸಿದೆ.

ಕಳೆದ ವರ್ಷ ಇದೇ ತಿಂಗಳಲ್ಲಿ 1.06 ಲಕ್ಷ ಕೋಟಿ ರೂ.ಗಳ ತೆರಿಗೆ ಸಂಗ್ರಹವಾಗಿತ್ತು. ಮಾರ್ಚ್ 2022ರಲ್ಲಿ 97 ಲಕ್ಷ ಕೋಟಿ ರೂ. ತೆರಿಗೆ ಸಂಗ್ರಹಿಸಲಾಗಿತ್ತು.

ಈ ವರ್ಷದ ಏಪ್ರಿಲ್‌ನಲ್ಲಿ 1,67,540 ಕೋಟಿ ರೂ. ತೆರಿಗೆ ಸಂಗ್ರಹವಾಗಿದೆ. ಇದರಲ್ಲಿ ಸಿ.ಜಿ.ಎಸ್.ಟಿ. ಪಾಲು 33,159 ಕೋಟಿ ರೂ., ಎಸ್.ಜಿ.ಎಸ್.ಟಿ. ಪಾಲು 41,793 ಕೋಟಿ ರೂ., ಐ.ಜಿ.ಎಸ್.ಟಿ. 81,939 ಕೋಟಿ ರೂ. ಮತ್ತು ಸೆಸ್ 10,649 ಕೋಟಿ ರೂ. ಆಗಿದೆ.

ಜಿ.ಎಸ್.ಟಿ. ಸಂಗ್ರಹ ಏಪ್ರಿಲ್ ತಿಂಗಳಲ್ಲಿ ಸಾರ್ವಕಾಲಿಕ ದಾಖಲೆಯಾಗಿದೆ. ಇದು ಹಿಂದಿನ ದಾಖಲೆಗಿಂತ 25 ಸಾವಿರ ಕೋಟಿ ರೂ. ಹೆಚ್ಚಾಗಿದೆ. ಕಳೆದ (2ನೇ ಪುಟಕ್ಕೆ)

# ಎಲೆಕ್ಟ್ರಿಕ್ ವಾಹನದ ಬೆಂಕಿಯ ಪ್ರತಿಯೊಂದು ಘಟನೆ ತನಿಖೆ

## ಸುರಕ್ಷತಾ ಕ್ರಮ, ಗುಣಮಟ್ಟ ಸುಧಾರಣೆಯಿಂದ ಉದ್ಯಮ ಕಲ್ಪನೆ ಮೀರಿ ಬೆಳೆಯಲಿದೆ - ಕೇಂದ್ರ ಸಾರಿಗೆ ಅಧಿಕಾರಿ

ನವದೆಹಲಿ, ಮೇ 1 - ದ್ವಿಚಕ್ರ ಎಲೆಕ್ಟ್ರಿಕ್ ವಾಹನಗಳಲ್ಲಿ ಬೆಂಕಿ ಹತ್ತಿಕೊಳ್ಳುವ ಪ್ರಕರಣಗಳು ಹೆಚ್ಚಾಗುತ್ತಿರುವ ನಡುವೆ ಹೇಳಿಕೆ ನೀಡಿರುವ ಕೇಂದ್ರ ಸಾರಿಗೆ ಸಚಿವ ಗಿರಿಧರ್ ಅರಮನೆ, ಪ್ರತಿಯೊಂದು ಘಟನೆಯ ತನಿಖೆ ನಡೆಸಲಾಗುವುದು ಎಂದಿದ್ದಾರೆ.

ಎಲೆಕ್ಟ್ರಿಕ್ ವಾಹನಗಳಿಗೆ ಬೆಂಕಿ ಹತ್ತಿಕೊಳ್ಳುವ ಹಲವಾರು ಘಟನೆಗಳು ಇತ್ತೀಚೆಗೆ ವರದಿಯಾಗಿವೆ. ಕೆಲ ಪ್ರಕರಣಗಳಲ್ಲಿ ಸಾವುಗಳೂ ಸಂಭವಿಸಿವೆ.

ಇಂತಹ ಪ್ರಕರಣಗಳಿಂದಾಗಿ ಎಲೆಕ್ಟ್ರಿಕ್ ವಾಹನಗಳ ಬೆಳವಣಿಗೆಗೆ ಧಕ್ಕೆಯಾಗಲಿದೆಯೇ? ಎಂಬ ಪ್ರಶ್ನೆಗೆ ಉತ್ತರಿಸಿರುವ ಅರಮನೆ, ಉತ್ಪಾದಕರು ತ್ವರಿತವಾಗಿ ಸುರಕ್ಷತಾ ಕ್ರಮಗಳನ್ನು ತೆಗೆದುಕೊಂಡರೆ, ಗುಣಮಟ್ಟ ನಿಯಂತ್ರಿಸಿದರೆ ಹಾಗೂ ಗುಣಟ್ಟದ ಭರವಸೆಯ ವ್ಯವಸ್ಥೆ ರೂಪಿಸಿದರೆ ಉದ್ಯಮ ನಮ್ಮ ಕಲ್ಪನೆ ಮೀರಿ ಬೆಳೆಯಲಿದೆ ಎಂದಿದ್ದಾರೆ.

ಈ ರೀತಿಯ ಘಟನೆಗಳ ತನಿಖೆಗಾಗಿ ಪರಿಣಿತರ ಸಮಿತಿಯನ್ನು ರಚಿಸಲಾಗಿದೆ. ಸಮಿತಿ ಇನ್ನೂ ವರದಿ ಸಲ್ಲಿಸಿಲ್ಲ ಎಂದವರು ಹೇಳಿದ್ದಾರೆ.

ವಿನ್ಯಾಸ, ನಿರ್ವಹಣೆ, ಉತ್ಪಾದನೆ ಕುರಿತ ಎಲ್ಲ ಸಮಸ್ಯೆಗಳನ್ನು ಪರಿಶೀಲಿಸಲಾಗುವುದು. ನಂತರದಲ್ಲಿ ಸೂಕ್ತ ಶಿಫಾರಸ್ಸು ಸಲ್ಲಿಸಲಾಗುವುದು ಎಂದವರು ಹೇಳಿದ್ದಾರೆ. ಎಲೆಕ್ಟ್ರಿಕ್ ವಾಹನಗಳ ಉತ್ಪಾದನೆಯಲ್ಲಿ ನಿರ್ಲಕ್ಷ್ಯ ಉಂಟಾಗಿರುವುದು ಕಂಡು ಬಂದರೆ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಕೇಂದ್ರ ಸಾರಿಗೆ ಸಚಿವ ನಿತಿನ್ ಗಡ್ಕರಿ ಹೇಳಿದ್ದರು.

ಇದುವರೆಗೂ ಪ್ಯೂರ್ ಇವಿ.ಯ ಮೂರು, ಓಲಾದ ಒಂದು, ಒಕಿನಾವಾದ ಎರಡು ಹಾಗೂ ಜಿತೇಂದ್ರ ಇ.ವಿ. ಸ್ಕೂಟರ್‌ಗಳ 20 ವಾಹನಗಳಿಗೆ ಬೆಂಕಿ ಹತ್ತಿದ್ದು ಕಂಡು ಬಂದಿದೆ.

ಆಸ್ತಿಗಳ ನಗದೀಕರಣದ ಪ್ರಶ್ನೆಗೆ ಉತ್ತರಿಸಿರುವ ಅರಮನೆ, ನಾವು 15 ಸಾವಿರ ಕೋಟಿ ರೂ.ಗಳಿಗೂ ಹೆಚ್ಚಿನ ಮೊತ್ತದ ಆಸ್ತಿ ನಗದೀಕರಣ ಮಾಡಿದ್ದೇವೆ. ಸೆಕ್ಯುರಿಟೈಜೇಷನ್ ಮೂಲಕ 5,000 ಕೋಟಿ ರೂ.ಗಳೂ ದೊರೆತಿವೆ ಎಂದಿದ್ದಾರೆ.

ಮುಂದಿನ ನಾಲ್ಕು ವರ್ಷಗಳಲ್ಲಿ 6 ಲಕ್ಷ ಕೋಟಿ ರೂ.ಗಳ ರಾಷ್ಟ್ರೀಯ ನಗದೀಕರಣ ಯೋಜನೆ ಹೊಂದಿರುವುದಾಗಿ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ (2ನೇ ಪುಟಕ್ಕೆ)

# ಅಂಚೆ ಅಧೀಕ್ಷಕರ ಕಚೇರಿ ಕಟ್ಟಡ ನಿರ್ಮಾಣಕ್ಕೆ ಕ್ರಮ: ಸಿದ್ದೇಶ್ವರ

## ದಾವಣಗೆರೆ ಅಂಚೆ ವಿಭಾಗ ಉದ್ಘಾಟನಾ ಸಮಾರಂಭದಲ್ಲಿ ಭರವಸೆ

ದಾವಣಗೆರೆ, ಮೇ 1 – ನಗರದಲ್ಲಿ ಅಂಚೆ ಅಧೀಕ್ಷಕರ ಕಚೇರಿ ಕಟ್ಟಡ ನಿರ್ಮಾಣಕ್ಕೆ ಕೇಂದ್ರ ಸಚಿವರನ್ನು ಸಂಪರ್ಕಿಸಿ ಕ್ರಮ ತೆಗೆದುಕೊಳ್ಳುವುದಾಗಿ ಸಂಸದ ಜಿ.ಎಂ. ಸಿದ್ದೇಶ್ವರ ತಿಳಿಸಿದ್ದಾರೆ.

ದಾವಣಗೆರೆ ಅಂಚೆ ವಿಭಾಗವನ್ನು ಉದ್ಘಾಟಿಸಿ ಮಾತನಾಡುತ್ತಿದ್ದ ಅವರು, ನಗರದಲ್ಲಿ ಅಂಚೆ ಇಲಾಖೆ ಮೂರು ಕಡೆ ನಿವೇಶನ ಹೊಂದಿದೆ. ಇವುಗಳ ಪೈಕಿ ಒಂದರಲ್ಲಿ 2-3 ಕೋಟಿ ರೂ. ವೆಚ್ಚದಲ್ಲಿ ಕಟ್ಟಡ ನಿರ್ಮಿಸಲು ಕೇಂದ್ರ ಸಂಪರ್ಕ ಸಚಿವ ಅಶ್ವನಿ ವೈಷ್ಣವ್ ಅವರನ್ನು ಕೋರಲಾಗುವುದು. ಇದರ ಜೊತೆ ನೌಕರರ ವಸತಿ ಸೌಲಭ್ಯಕ್ಕೂ ಕ್ರಮ ತೆಗೆದುಕೊಳ್ಳಲಾಗುವುದು ಎಂದವರು ಹೇಳಿದರು.

ಗ್ರಾಮಾಂತರ ಭಾಗದಲ್ಲಿ ಅಂಚೆ ಇಲಾಖೆ ಸಾಕಷ್ಟು ನಿವೇಶಗಳನ್ನು ಹೊಂದಿದೆ. ಆದರೂ, ಹಲವು ಕಡೆ ಸ್ವಂತ ಕಟ್ಟಡ (2ನೇ ಪುಟಕ್ಕೆ)

# ಉರಿ ಬಿಸಿಲು : ವೈದ್ಯಕೀಯ ಸೌಲಭ್ಯಕ್ಕಾಗಿ ರಾಜ್ಯಗಳಿಗೆ ಸೂಚನೆ

ನವದೆಹಲಿ, ಮೇ 1 – ದೇಶದ ಹಲವೆಡೆ ತಾಪಮಾನ ಹೆಚ್ಚಾಗುತ್ತಿರುವ ಹಾಗೂ ಬಿಸಿ ಅಲೆಗಳು ಕಂಡು ಬರುತ್ತಿರುವ ಹಿನ್ನೆಲೆಯಲ್ಲಿ ರಾಜ್ಯಗಳು ಅಗತ್ಯ ವೈದ್ಯಕೀಯ ಸೌಲಭ್ಯಗಳನ್ನು ಹೊಂದಬೇಕು ಎಂದು ತಿಳಿಸಿದೆ.

ರಾಜ್ಯಗಳಿಗೆ ಪತ್ರ ಬರೆದಿರುವ ಕೇಂದ್ರ ಆರೋಗ್ಯ ಕಾರ್ಯದರ್ಶಿ ರಾಜೇಶ್ ಭೂಷಣ್, ತಾಪಮಾನಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ಕ್ರಿಯಾ ಯೋಜನೆಯನ್ನು ಎಲ್ಲಾ ಜಿಲ್ಲೆಗಳಲ್ಲಿ ಜಾರಿಗೆ ತರಬೇಕು ಎಂದು ತಿಳಿಸಿದ್ದಾರೆ.

ಮುಂದಿನ ಮೂರ್ನಾಲ್ಕು ದಿನ ಬಿಸಿ ಗಾಳಿಯ ಪ್ರಕೋಪ ಇರಲಿದೆ ಎಂದು (2ನೇ ಪುಟಕ್ಕೆ)

# 7ರಂದು ಹರಿಹರದಲ್ಲಿ ಜೆಡಿಎಸ್ ಜಲಧಾರೆ ಸಮಾವೇಶ

ಹರಿಹರ, ಮೇ 1 - ಬರುವ ಮೇ 7ರಂದು ಹರಿಹರದಲ್ಲಿ ಜೆಡಿಎಸ್ ಪಕ್ಷದಿಂದ ಜನತಾ ಜಲಧಾರೆಯ ಬೃಹತ್ ಮೆರವಣಿಗೆ ಹಾಗೂ ಸಮಾವೇಶವನ್ನು ಹಮ್ಮಿಕೊಳ್ಳಲಾಗಿದೆ ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್ ತಿಳಿಸಿದರು.



ನಗರದ ಜೆಡಿಎಸ್ ಕಛೇರಿಯಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು. ರಾಜ್ಯದ ನೆಲ, ಜಲ ಸಂರಕ್ಷಣೆಗೋಸ್ಕರ ಜೆಡಿಎಸ್ ಪಕ್ಷ ರಾಜ್ಯಕ್ಕೆ ಹೊಸ ಆಯಾಮ ನೀಡಿದೆ. ರೈತರ ಬದುಕನ್ನು ಹಸನು ಮಾಡುವ ಸದುದ್ದೇಶದಿಂದ ರಾಜ್ಯಾದ್ಯಂತ ಜನತಾ ಜಲಧಾರೆ ರಥ ಯಾತ್ರೆ ಸಾಗುತ್ತಿದೆ ಎಂದರು.

ಮೇ 7ರ ಮಧ್ಯಾಹ್ನ 3ಕ್ಕೆ ಹರಿಹರದ ಹೊರವಲಯದ ಬೈಪಾಸ್‌ನಿಂದ ಮಾಜಿ ಪ್ರಧಾನಿ ಹೆಚ್. (5ನೇ ಪುಟಕ್ಕೆ)

|| ಶ್ರೀ ಉಜ್ಜನಿ ಮರುಳಸಿದ್ದೇಶ್ವರ ಪ್ರಸನ್ನ ||

ಕೈಲಾಸ ಶಿವಗಣಾರಾಧನೆಯ ಆಹ್ವಾನ ಪತ್ರಿಕೆ



ದಾವಣಗೆರೆ ಜಿಲ್ಲೆ ಹರಿಹರ ಹಳ್ಳದಕೇರಿ ವಾಸಿ

ಶ್ರೀಮತಿ ಶಾಂತಮ್ಮ ದಿ|| ಶ್ರೀ ಡಿ.ಸಂಗಪ್ಪ ಮತ್ತು ಮಕ್ಕಳು ಮಾಡುವ ವಿಜ್ಞಾಪನೆಗಳು
ದಿನಾಂಕ 29.04.2022ರ ಶುಕ್ರವಾರ ಬೆಳಿಗ್ಗೆ 5 ಗಂಟೆಗೆ ನಮ್ಮ ಪುತ್ರ

ಶ್ರೀ ಮಿಠಾಯಿ ಡಿ.ಉಜ್ಜೇಶ್

ಇವರು ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ ಕೈಲಾಸ ಶಿವಗಣಾರಾಧನೆಯನ್ನು ದಿನಾಂಕ 3.5.2022ರ ಮಂಗಳವಾರ ಬೆಳಿಗ್ಗೆ 10.30ಕ್ಕೆ ಹರಿಹರ ನಗರದ ಹಳ್ಳದಕೇರಿಯ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು: ಮೃತರ ಧರ್ಮಪತ್ನಿ: ಶ್ರೀಮತಿ ಮಿಠಾಯಿ ರತ್ನಮ್ಮ, ನಗರಸಭಾ ಮಾಜಿ ಅಧ್ಯಕ್ಷರು, ಹಾಲಿ ನಗರಸಭೆ ಸದಸ್ಯರು ಮತ್ತು ಮಕ್ಕಳು. ಮೃತರ ಸಹೋದರರು, ಸಹೋದರಿಯರು, ಅಳಿಯಂದಿರು, ಮೊಮ್ಮಕ್ಕಳು ಮಿಠಾಯಿ ವಂಶಸ್ಥರು ಹಾಗೂ ಸಕಲ ಬಂಧು-ಮಿತ್ರರು.

ಮೊ: 98455 67067, 91641 08001



## ಕೋಲ್ಕುಂಟೆಯಲ್ಲಿ ಇಂದು ಶಿಲಾ ಶಾಸನ ಪ್ರತಿಕೃತಿ ಅನಾವರಣ

**ಕಾರ್ಯಕ್ರಮಕ್ಕೆ ಮೈಸೂರು ಮಹಾರಾಜ ಯದುವೀರ**

ದಾವಣಗೆರೆ, ಏ.26- ತಾಲ್ಲೂಕಿನ ಕೋಲ್ಕುಂಟೆ ಗ್ರಾಮಾಭ್ಯುದಯ ಸಂಘದ ವತಿಯಿಂದ ಮೇ 2ರಂದು ಬೆಳಗ್ಗೆ 8ಕ್ಕೆ ಕೋಲ್ಕುಂಟೆ ಗ್ರಾಮದ ಆಂಜನೇಯ ಸ್ವಾಮಿ ದೇವಸ್ಥಾನದ ಆವರಣದಲ್ಲಿ ಗ್ರಾಮದ ಶಿಲಾ ಶಾಸನ ಪ್ರತಿಕೃತಿ ಅನಾವರಣ ಹಮ್ಮಿಕೊಳ್ಳಲಾಗಿದೆ.

ಅಂದು ನಡೆಯುವ ಸಮಾರಂಭದಲ್ಲಿ ಮೈಸೂರು ಮಹಾರಾಜ ಯದುವೀರ ಕೃಷ್ಣ ದತ್ತ ಚಾಮರಾಜ ಒಡೆಯರ್ ಭಾಗವಹಿಸಲಿದ್ದಾರೆ. ಚಲನಚಿತ್ರ ನಟ ಹಾಗೂ ಕೋಲ್ಕುಂಟೆ ಗ್ರಾಮಾಭ್ಯುದಯ ಸಂಘದ ಗೌರವಾಧ್ಯಕ್ಷ ಸುಚೇಂದ್ರ ಪ್ರಸಾದ್ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಗ್ರಾಮದ ಮುಖಂಡ ಬಸವರಾಜ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಸಂಸದ ಜಿ.ಎಂ. ಸಿದ್ದೇಶ್ವರ್, ಶಾಸಕರಾದ ಎಂ.ಪಿ. ರೇಣುಕಾಚಾರ್ಯ, ಪ್ರೊ. ಎನ್. ಲಿಂಗಣ್ಣ, ಬಯಲು ಸೀಮೆ ಪ್ರದೇಶಾಭಿವೃದ್ಧಿ ಮಂಡಳಿ ಅಧ್ಯಕ್ಷ ಎನ್.ಇ. ಜೀವನಮೂರ್ತಿ, ಪರಿಷತ್ ಸದಸ್ಯ ಕೆ.ಎಸ್. ನವೀನ್, ಮಾಜಿ ಶಾಸಕ ಎಂ. ಬಸವರಾಜ್ ನಾಯ್ಕ್, ಮಾಜಿ ಮೇಯರ್ ಬಿ.ಜಿ. ಅಜಯ್ ಕುಮಾರ್ ಆಗಮಿಸಲಿದ್ದಾರೆ ಎಂದು ಹೇಳಿದರು. ಗೋಷ್ಠಿಯಲ್ಲಿ ಗಿರಿರಾಜ್ ಇದ್ದರು.

## ಗುತ್ತೂರಿನಲ್ಲಿ ಆಂಜನೇಯ ತೇರು



ಹರಿಹರ, ಮೇ 1- ನಗರದ ಹೊರವಲಯದ ಗುತ್ತೂರು ಗ್ರಾಮದಲ್ಲಿ ಶ್ರೀ ಆಂಜನೇಯ ಸ್ವಾಮಿ ದೇವರ ರಥೋತ್ಸವವನ್ನು ಅದ್ದೂರಿಯಾಗಿ ಸಡಗರ, ಸಂಭ್ರಮದಿಂದ ಆಚರಿಸಲಾಯಿತು. ಬೆಳಗ್ಗೆ ದೇವಸ್ಥಾನದಲ್ಲಿ ಶ್ರೀ ಆಂಜನೇಯ ಸ್ವಾಮಿಗೆ ಅಭಿಷೇಕ, ಅಲಂಕಾರ, ವಿಶೇಷ ಪೂಜೆ ಮಹಾಮಂಗಳಾರತಿ ಮಾಡಿ, ತದನಂತರ ದೇವರನ್ನು ರಥದಲ್ಲಿರಿಸಿ ಡೊಳ್ಳು, ಸಮಾಳ ಸೇರಿದಂತೆ ವಿವಿಧ ಕಲಾ ತಂಡಗಳೊಂದಿಗೆ ರಥವನ್ನು ಎಳೆಯಲಾಯಿತು.

# ಸ್ತ್ರೀ ಗೋಡೆಗಳ ನಡುವೆ ಕಾಲಕಳೆಯುವ ಕಾಲವೀಗ ಕಣ್ಮರೆ



**ಸಿಎಂ ರಾಜಕೀಯ ಕಾರ್ಯದರ್ಶಿ ಎಂ.ಪಿ. ರೇಣುಕಾಚಾರ್ಯ**

ಹೊನ್ನಾಳಿ, ಮೇ 1- ಮಹಿಳೆಯರು ಒಂದೇ ಕ್ಷೇತ್ರಕ್ಕೆ ಮೀಸಲಿರದೆ ಆರ್ಥಿಕ, ರಾಜಕೀಯ, ರಕ್ಷಣೆ ಸೇರಿದಂತೆ ಪ್ರತಿಯೊಂದು ಕ್ಷೇತ್ರಗಳಲ್ಲಿಯೂ ತಮ್ಮದೇ ಆದ ಛಾಪು ಮೂಡಿಸಿದ್ದು, ಮಹಿಳೆಯ ಪಾತ್ರ ದೊಡ್ಡದು ಎಂದು ಸಿಎಂ ರಾಜಕೀಯ ಕಾರ್ಯದರ್ಶಿ ಎಂ.ಪಿ.ರೇಣುಕಾಚಾರ್ಯ ಹೇಳಿದರು.

ತಾಲ್ಲೂಕಿನ ಕೋನಾಯ್ಕನಹಳ್ಳಿ ಗ್ರಾಮದಲ್ಲಿ ವಿಶ್ವ ಮಹಿಳಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಮಹಿಳೆಯರು ಪುರುಷರಿಗಿಂತ ನಾವೇನು ಕಮ್ಮಿ ಇಲ್ಲಾ ಎಂದು ನಿರೂಪಿಸಿದ್ದಾರೆ ಎಂದ ರೇಣುಕಾಚಾರ್ಯ, ಸ್ತ್ರೀ ನಾಲ್ಕು ಗೋಡೆಗಳ ನಡುವೆ ಕಾಲಕಳೆಯುವ ಕಾಲವೀಗ ಕಣ್ಮರೆಯಾಗಿ, ಎಲ್ಲಾ ಕ್ಷೇತ್ರಗಳಲ್ಲೂ ಮುನ್ನಡೆಯುತ್ತಾ ಜಗತ್ತಿನ ದೃಷ್ಟಿಯನ್ನು ತನ್ನೆಡೆ ಸೆಳೆದಿದ್ದಾಳೆ ಎಂದರು.

ತೊಟ್ಟಿಲು ತೂಗುವ ಕೈ ದೇಶವನ್ನು ಆಳಿ ಅದರಲ್ಲಿ ಯಶಸ್ವಿಯಾಗಿದೆ ಎಂದು ಹೇಳಿದ ಅವರು, ದೇಶದಲ್ಲಿ ಸ್ತ್ರೀಯರಿಗೆ ದೊಡ್ಡ ಸ್ಥಾನವಿದೆ ಎಂದು ವಿವರಿಸಿದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದ ರಾಜ್ಯ ಸರ್ಕಾರ ಕೂಡ ಮಹಿಳೆಯರ ಪರವಾಗಿದ್ದು, ಮಹಿಳೆಯರ ಸಬಲೀಕರಣಕ್ಕೆ 75 ನೇ ಸ್ವಾತಂತ್ರ್ಯ ಅಮೃತ ಮಹೋತ್ಸವದ ಹಿನ್ನೆಲೆಯಲ್ಲಿ ಹೊನ್ನಾಳಿ - ನ್ಯಾಮತಿ ಅವಳಿ ತಾಲ್ಲೂಕಿನ 64 ಸಂಘಗಳಿಗೆ ತಲಾ ಒಂದು ಲಕ್ಷ ಹಣ ನೀಡಿದ್ದಾರೆ ಎಂದು ತಿಳಿಸಿದರು.

ತಾಯಿಯನ್ನು ನೆನೆದು ಭಾವುಕರಾದ ರೇಣುಕಾಚಾರ್ಯ, ದೇಶದಲ್ಲಿ ತಾಯಿಗೆ ಮೊದಲ ಸ್ಥಾನವಿದೆ. ನನ್ನ ತಾಯಿ ನಾನು ಶಾಸಕನಾಗುತ್ತೇನೆಂದು ಹೇಳಿದ್ದಳು. ಆಕೆ ಹೇಳಿದಂತೆ ನಾನು ಶಾಸಕನಾಗಿದ್ದೇನೆ ಎಂದ ರೇಣುಕಾಚಾರ್ಯ, ಸಾಮಾನ್ಯ ಶಿಕ್ಷಕನ ಮಗನನ್ನು ಮೂರು ಬಾರಿ ಶಾಸಕನನ್ನಾಗಿ ಮಾಡಿದ್ದು ಮತದಾರರಿಗೆ ನಾನು ಚಿರಋಣಿ ಎಂದರು.

ಗ್ರಾ.ಪಂ ಅಧ್ಯಕ್ಷರಾದ ಬಸಮ್ಮ, ಉಪಾಧ್ಯಕ್ಷರಾದ ಶೃತಿ ಮಂಜುನಾಥ್, ಸದಸ್ಯರಾದ ಸುಭಾಷ್, ನಾಗರಾಜ್ ನಾಯ್ಕ, ಭಾರತಿ ಬಾಯಿ, ಎಲ್. ಮಂಜಪ್ಪ, ರಫೀಕ್ ಸಾಬ್, ಹನುಮಂತಪ್ಪ ಗೌಡ್ರು, ಮಂಜುಳಮ್ಮ, ಸತ್ತಿಬಾಯಿ, ರಂಜಿತಾ ಮತ್ತು ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಮುಸ್ಲಿಂ ಬಾಂಧವರು ಆರ್ಥಿಕ, ಶೈಕ್ಷಣಿಕ, ರಾಜಕೀಯವಾಗಿ ಮುಖ್ಯವಾಹಿನಿಗೆ ಬರಬೇಕು



**ಹರಪನಹಳ್ಳಿಯ ರಂಜಾನ್ ಹಬ್ಬದ ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಮುಸ್ಲಿಂ ನೌಕರರ ಸಂಘದ ತಾಲ್ಲೂಕು ಘಟಕದ ಅಧ್ಯಕ್ಷ ಕೆ.ಎಸ್. ಉಸ್ಮಾನ್ ಆಶಯ**

ಹರಪನಹಳ್ಳಿ, ಮೇ 1- ತಾವು ದುಡಿದ ಹಣದಲ್ಲಿ ಬಡವರಿಗೆ, ನಿರ್ಗತಿಕರಿಗೆ, ಕೈಲಾಗದವರಿಗೆ ಸಹಾಯ ಮಾಡುವ ಗುಣವನ್ನು ಬೆಳೆಸಿಕೊಳ್ಳಬೇಕು ಎಂದು ಕರ್ನಾಟಕ ರಾಜ್ಯ ಮುಸ್ಲಿಂ ನೌಕರರ ಸಂಘದ ತಾಲ್ಲೂಕು ಘಟಕದ ಅಧ್ಯಕ್ಷ ಕೆ. ಎಸ್. ಉಸ್ಮಾನ್ ಹೇಳಿದರು.

ಪಟ್ಟಣದ ಅಂಜುಮನ್ ಶಾದಿಮಹಲ್‌ನಲ್ಲಿ ಕರ್ನಾಟಕ ರಾಜ್ಯ ಮುಸ್ಲಿಂ ನೌಕರರ ಸಂಘದ ತಾಲ್ಲೂಕು ಘಟಕದ ವತಿಯಿಂದ ಬಡ ವಿಧವೆಯರ ಕುಟುಂಬಗಳಿಗೆ ರಂಜಾನ್ ಹಬ್ಬದ ಪ್ರಯುಕ್ತ ಈದ್ ಕಿಟ್‌ಗಳನ್ನು ವಿತರಿಸಿ ಅವರು ಮಾತನಾಡಿದರು.

ಮುಸ್ಲಿಂ ಬಾಂಧವರು ಆರ್ಥಿಕ, ಶೈಕ್ಷಣಿಕ, ರಾಜಕೀಯವಾಗಿ ಮುಖ್ಯವಾಹಿನಿಗೆ ಬರಬೇಕು. ಆ ನಿಟ್ಟಿನಲ್ಲಿ ಪೋಷಕರು ತಮ್ಮ ಮಕ್ಕಳಿಗೆ ಕಡ್ಡಾಯವಾಗಿ ಶಿಕ್ಷಣ ಕೊಡಿಸುವ ಮೂಲಕ ಪ್ರಜ್ಞಾವಂತರನ್ನಾಗಿ ಮಾಡಬೇಕು ಎಂದರು.

ಕನ್ನಡ ಸಾಹಿತ್ಯ ಪರಿಷತ್ ತಾಲ್ಲೂಕು ಅಧ್ಯಕ್ಷ ಕೆ.ಉಚ್ಚೆಂಗೆಪ್ಪ ಮಾತನಾಡಿ, ಮುಸ್ಲಿಂ ಬಾಂಧವರು ಪರಿಶ್ರಮ ಜೀವಿಗಳಾಗಿದ್ದು, ಪ್ರತಿಯೊಬ್ಬರಿಗೂ ಶಿಕ್ಷಣ ಕಲಿಸಬೇಕಿದೆ. ಸಹೋದರ ಸಮಾಜಗಳ ಜೊತೆಯಲ್ಲಿ ಸಾಮರಸ್ಯದ ಜೀವನ ಮಾಡುತ್ತಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಈ ವೇಳೆ ಕರ್ನಾಟಕ ರಾಜ್ಯ ಮುಸ್ಲಿಂ ನೌಕರರ ಸಂಘದ ಜಿಲ್ಲಾ ಖಜಾಂಚಿ ಎಂ.ಷರೀಫ್, ಶಫಿವುಲ್ಲಾ ಸವಣೂರು, ಎಸ್. ಮುಸ್ತಾಪ್, ಮನ್ನೂರು ಅಹಮದ್, ಅರ್ಜುಮುನ್ನೀಸ್, ಮಹಬೂಬ್ ಬಡಗಿ, ಯಾಹ್ಯ, ಸಲಾಂ ಸಾಹೇಬ್, ಡಿ.ಶಫಿ, ಮಕ್ಬೂಲ್ ಬಾಷ, ಅತಾವುಲ್ಲಾ, ಪೀರಾ ಸಾಬ್, ನೂರುಲ್ಲಾ, ಅಮಾನುಲ್ಲಾ, ಅಬ್ದುಲ್ ಸಲಾಂ, ದಾದಾಪೀರ್, ಅಲ್ಲಾಭಕ್ಷಿ, ಅಸ್ಲಾಂ ಭಾಷ, ಸಲೀಂ ಎಚ್. ಸೇರಿದಂತೆ ಇತರರು ಇದ್ದರು.

## ಪಿಯು ವಿದ್ಯಾರ್ಥಿಗಳಿಗೆ ಉಚಿತ ತರಬೇತಿ

ದಾವಣಗೆರೆ, ಮೇ 1- ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ವತಿಯಿಂದ ಗ್ರಾಮೀಣ ಬಡ ಹಾಗೂ ಪ್ರತಿಭಾವಂತ ದ್ವಿತೀಯ ಪಿ.ಯು.ಸಿ. ವಿದ್ಯಾರ್ಥಿಗಳಿಗೆ ಉಚಿತ ಸಿಇಟಿ/ನೀಟ್ ತರಬೇತಿ ಶಿಬಿರವನ್ನು ಇದೇ ದಿನಾಂಕ 20ರಿಂದ 15 ದಿನಗಳ ಕಾಲ ನಡೆಸಲಾಗುವುದು. ಗ್ರಾಮೀಣ ವಿದ್ಯಾರ್ಥಿಗಳಿಗೆ ಉಚಿತ ಹಾಸ್ಟೆಲ್ ಸೌಲಭ್ಯ ಒದಗಿಸಿಕೊಡಲಾಗುವುದು. ಆಸಕ್ತ ವಿದ್ಯಾರ್ಥಿಗಳು ಇದೇ ದಿನಾಂಕ 18 ರೊಳಗೆ ನೋಂದಣಿ ಮಾಡಿಸಬೇಕು.

ಹೆಚ್ಚಿನ ಮಾಹಿತಿಗೆ ಭದ್ರಾ ಪದವಿ ಪೂರ್ವ ಕಾಲೇಜು, 10ನೇ ಕ್ರಾಸ್, ಬಿ.ಐ.ಇ.ಟಿ. ರಸ್ತೆ, ಸಿದ್ಧವೀರಪ್ಪ ಬಡಾವಣೆ, ದಾವಣಗೆರೆ. ವಿವರಕ್ಕೆ ಸಂಪರ್ಕಿಸಿ ಮೊ: 9880544153, 8553644926, 9380932630. ಕೊಟ್ರೇಶ್, ಸಿಇಟಿ ಸಂಚಾಲಕ ಮೊ: 8553644928, ವರುಣಕೌಟಿ, ಸಿಇಟಿ ಸಹ ಸಂಚಾಲಕ ಮೊ: 9380932630, ಆಕಾಶ್, ಎಬಿವಿಪಿ ನಗರ ಕಾರ್ಯದರ್ಶಿ, ಮೊ: 9738497386.

## ಜಿಎಸ್‌ಟಿ ಸಂಗ್ರಹ

(1ನೇ ಪುಟದಿಂದ) ವರ್ಷ ಏಪ್ರಿಲ್‌ನಲ್ಲಿ 1.42 ಲಕ್ಷ ಕೋಟಿ ರೂ. ಸಂಗ್ರಹಿಸಿದ್ದು ಇದುವರೆಗಿನ ದಾಖಲೆಯಾಗಿತ್ತು. ತೆರಿಗೆ ಪಾವತಿಯಲ್ಲಿ ಸುಧಾರಣೆಯಾಗಿರುವುದರಿಂದ ಉತ್ತಮ ಫಲಿತಾಂಶ ಸಿಗುತ್ತಿದೆ. ತೆರಿಗೆ ಆಡಳಿತದಲ್ಲಿ ಹಲವಾರು ಬದಲಾವಣೆ ತರಲಾಗಿದೆ. ತೆರಿಗೆ ಪಾವತಿ ಪ್ರಕ್ರಿಯೆ ಸರಳ ಮಾಡಲಾಗಿದೆ ಹಾಗೂ ತಪ್ಪು ಮಾಡುವ ತೆರಿಗೆದಾರರ ವಿರುದ್ಧ ಕ್ರಮ ತೆಗೆದುಕೊಳ್ಳಲಾಗುತ್ತಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

# ಕಚೇರಿ ಕಟ್ಟಡ ನಿರ್ಮಾಣಕ್ಕೆ ಕ್ರಮ



(1ನೇ ಪುಟದಿಂದ) ಹೊಂದಿಲ್ಲ. ಉದ್ಯೋಗ ಖಾತ್ರಿ ಯೋಜನೆಯಲ್ಲೂ ಅಂಚೆ ಕಚೇರಿ ಕಟ್ಟಿಕೊಳ್ಳಬಹುದು. ಅಂಚೆ ಕಚೇರಿಗಳ ನಿರ್ಮಾಣಕ್ಕೆ ಸಂಸದರ ಅನುದಾನ ಸಹ ನೀಡುವುದಾಗಿ ಅವರು ಭರವಸೆ ನೀಡಿದರು.

ಶಾಸಕ ಎಸ್.ಎ. ರವೀಂದ್ರನಾಥ್ ಮಾತ ನಾಡಿ, ಅಂಚೆ ಅಧೀಕ್ಷಕರ ಕಟ್ಟಡ ಅಗತ್ಯವಿದೆ. ಈ ಬಗ್ಗೆ ಅಧಿಕಾರಿಗಳು ಚುರುಕಾಗಿ ಕಾರ್ಯನಿ ರ್ವಹಿಸಬೇಕು ಎಂದು ಕಿವಿಮಾತು ಹೇಳಿದರು.

ಕರ್ನಾಟಕ ವೃತ್ತದ ಮುಖ್ಯ ಪೋಸ್ಟ್ ಮಾಸ್ಟರ್ ಜನರಲ್ ಎಸ್. ರಾಜೇಂದ್ರ ಕುಮಾರ್ ಮಾತನಾಡಿ, ದಾವಣಗೆರೆ ಕೇಂದ್ರ ಅಂಚೆ ಕಚೇರಿಯಲ್ಲಿ ಮೊದಲು ಎಟಿಎಂ ಹಾಗೂ ಪಾಸ್‌ಪೋರ್ಟ್ ಸೇವೆ ಲಭ್ಯವಿದ್ದವು. ಪ್ರತ್ಯೇಕ ವಿಭಾಗವಾಗುವ ಮೂಲಕ ಹೆಚ್ಚಿನ ಸೌಲಭ್ಯಗಳು ಲಭ್ಯವಾಗಲಿವೆ ಎಂದರು.

ದಕ್ಷಿಣ ಕರ್ನಾಟಕ ವಲಯದ ಡೈರೆಕ್ಟರ್ ಪೋಸ್ಟಲ್ ಸರ್ವೀಸಸ್ ವಿ.ಕೆ. ಮೋಹನ್ ಮಾತನಾಡಿ, ಬದಲಾದ ತಂತ್ರಜ್ಞಾನ ಹಾಗೂ ಜನರ ಮನೋಭಾವದ ರೀತಿ ಅಂಚೆ ಇಲಾಖೆಯೂ ಬದಲಾಗಿ ಪ್ರಗತಿಯ ಹಾದಿಯಲ್ಲಿದೆ ಎಂದರು.

ದಕ್ಷಿಣ ಕರ್ನಾಟಕ ವಲಯದ ಪೋಸ್ಟ್ ಮಾಸ್ಟರ್ ಜನರಲ್ ಡಿಎಸ್.ವಿ.ಆರ್.ಮೂರ್ತಿ ಮಾತನಾಡಿ, ಇಲಾಖೆ ಕೇವಲ ಅಂಚೆ ತಲುಪಿಸುವುದಕ್ಕೆ ಸೀಮಿತವಾಗಿಲ್ಲ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಸೇವೆಗಳನ್ನು ತಲುಪಿಸುವಲ್ಲಿ ತನ್ನ 1.2 ಲಕ್ಷ ಅಂಚೆ ಕಚೇರಿಗಳ ಬೃಹತ್ ಜಾಲದ ಮೂಲಕ ಕಾರ್ಯನಿರ್ವಹಿಸುತ್ತಿದೆ ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಚಿತ್ರದುರ್ಗ ವಿಭಾಗದ ಅಂಚೆ ಅಧೀಕ್ಷಕ ಓ. ವಿರೂಪಾಕ್ಷಪ್ಪ, ಅಂಚೆ ವಿಭಾಗದ ಸುದೀರ್ಘ ಕಾಲದ ಕನಸು ನನಸಾಗಿದೆ. ಈ ಹಿಂದೆ ಚಿತ್ರದುರ್ಗ ಹಾಗೂ ಶಿವಮೊಗ್ಗಗಳಲ್ಲಿ ಇದ್ದ ಅಂಚೆ ಕಚೇರಿಗಳನ್ನು ಪ್ರತ್ಯೇಕಿಸಿ ದಾವಣಗೆರೆ ವಿಭಾಗ ರೂಪಿಸಲಾಗಿದೆ. ಈ ವಿಭಾಗದಿಂದ 17 ಕೋಟಿ ರೂ. ಆದಾಯ ಬರುವ ನಿರೀಕ್ಷೆ ಇದೆ ಎಂದರು.

ಈ ಸಂದರ್ಭದಲ್ಲಿ ಮೇಯರ್ ಜಯಮ್ಮ ಗೋಪಿನಾಯ್ಕ, ಉಪ ಮೇಯರ್ ಗಾಯತ್ರಿ ಬಾಯಿ ಖಂಡೋಜಿರಾವ್, ದೂಡಾ ಅಧ್ಯಕ್ಷ ಕೆ.ಎಂ. ಸುರೇಶ್, ಪಾಲಿಕೆ ಸದಸ್ಯ ಸೋಗಿ ಶಾಂತಕುಮಾರ್ ಉಪಸ್ಥಿತರಿದ್ದರು.

ಅನಿಲ್ ಕುಮಾರ್ ಸ್ವಾಗತಿಸಿದರೆ, ರವಿ ನಾಯಕ್ ನಿರೂಪಿಸಿದರು.


# ಪ್ರಕಾಶ್ ತಾರಾಚಂದ್‌ಜೀ ಓಸ್ವಾಲ್ ನಿಧನ



ದಾವಣಗೆರೆ ಹಾಸಬಾವಿ ಸರ್ಕಲ್ ವಾಸಿ,
ಸಂಭವ್ ಜ್ಯೂಯಲರ್ಸ್ ಮಾಲೀಕರಾದ

**ಪ್ರಕಾಶ್ ತಾರಾಚಂದ್ ಜೀ ಓಸ್ವಾಲ್**

ಅವರು ದಿನಾಂಕ 01.05.2022ರ ಭಾನುವಾರ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 63 ವರ್ಷ ವಯಸ್ಸಾಗಿತ್ತು. ಪತ್ನಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 01.05.2022ರ ಭಾನುವಾರ ಸಂಜೆ 5 ಗಂಟೆಗೆ ನಗರದ ಜೈನ್ ರುದ್ರಭೂಮಿಯಲ್ಲಿ ನೆರವೇರಿತು.

ಇಂತಿ ದುಃಖತಪ್ತರು

- **ಮಣಿಲಾಲ್ ಜೀ ಅಂಡ್ ಬ್ರದರ್ಸ್**, ಬೆಳ್ಳೂಡಿ ಗಲ್ಲಿ, ದಾವಣಗೆರೆ.
- **ಮೀರಜ್‌ಕರ್ ಟೆಕ್ಸ್ ಟೈಲ್ಸ್**, ದಾವಣಗೆರೆ
- **ಖಂಡೇರಾವ್ ಟೆಕ್ಸ್‌ಟೈಲ್ಸ್**, ದಾವಣಗೆರೆ
- **ಪ್ರಿನ್ಸ್ ಕಲೆಕ್ಷನ್ಸ್**, ದಾವಣಗೆರೆ
- **ಊರ್ವಶಿ ಟೆಕ್ಸ್‌ಟೈಲ್ಸ್**, ದಾವಣಗೆರೆ


## ಸೌಲಭ್ಯಕ್ಕಾಗಿ ರಾಜ್ಯಗಳಿಗೆ ಸೂಚನೆ

(1ನೇ ಪುಟದಿಂದ) ಹವಾಮಾನ ಇಲಾಖೆ ತಿಳಿಸಿದೆ. ಆರೋಗ್ಯ ಕೇಂದ್ರಗಳಲ್ಲಿ ನಿರಂತರ ವಿದ್ಯುತ್ ಪೂರೈಕೆ ಇರಬೇಕು. ಅಲ್ಲಿ ಹವಾನುಕೂಲಿ ವ್ಯವಸ್ಥೆ ಅಳವಡಿಸಬೇಕು. ಒಳಾಂಗಣದ ತಾಪಮಾನ ಕಡಿಮೆ ಮಾಡಲು ನೆರಳಿನ ವ್ಯವಸ್ಥೆ ಮಾಡಬೇಕು ಎಂದು ರಾಜ್ಯಗಳಿಗೆ ತಿಳಿಸಲಾಗಿದೆ.


## ಚಿರಸ್ಮರಣೆ



**ದಿ|| ಬಿ.ಎಸ್ ಗುಂಡೇಶ್**
ದೀಪದ ಬತ್ತಿ ವ್ಯಾಪಾರಸ್ಥರು
ನೀವು ನಮ್ಮನಗಲಿ ಇಂದಿಗೆ ಒಂದು ವರ್ಷವಾಯಿತು
**ಸದಾ ನಿಮ್ಮ ಸ್ಮರಣೆಯಲ್ಲಿರುವ**
ಪತ್ನಿ, ಮಕ್ಕಳು, ಮೊಮ್ಮಕ್ಕಳು, ಒಡಹುಟ್ಟಿದವರು,
ಬಂಧುಗಳು ಹಾಗೂ ಮಿತ್ರರು. ಬಸವರಾಜಪೇಟೆ, ದಾವಣಗೆರೆ

## ಸವಿನೆನಪು



**ದಿ|| ಶ್ರೀಮತಿ ಆರ್. ರೇಣುಕಾ**
ನಿಧನ : 02.05.2018
ನೀವು ನಮ್ಮನ್ನಗಲಿ ಇಂದಿಗೆ ನಾಲ್ಕು ವರ್ಷಗಳಾದವು.
ಸದಾ ನಿಮ್ಮ ಸ್ಮರಣೆಯಲ್ಲಿರುವ,
**ಪತಿ : ಎಸ್. ಸಿದ್ದಪ್ಪ ಮತ್ತು ಮಕ್ಕಳು,**
**ಕೊಡಗನೂರು.**


## ಉತ್ತರ ಪ್ರದೇಶದಲ್ಲಿ 54 ಸಾವಿರ ಅನಧಿಕೃತ ಲೌಡ್‌ಸ್ಪೀಕರ್ ತೆರವು

ಲಖ್ನೌ, ಮೇ 1 - ಉತ್ತರ ಪ್ರದೇಶದ ಧಾರ್ಮಿಕ ಕೇಂದ್ರಗಳಲ್ಲಿ ಲೌಡ್ ಸ್ಪೀಕರ್‌ಗಳ ಪರಿಶೀಲನೆ ನಡೆಸಲಾಗಿದ್ದು, 54 ಸಾವಿರಕ್ಕೂ ಹೆಚ್ಚು ಅನಧಿಕೃತ ಲೌಡ್ ಸ್ಪೀಕರ್‌ಗಳನ್ನು ತೆಗೆದು ಹಾಕಲಾಗಿದೆ. ಏಪ್ರಿಲ್ 25ರಿಂದ ರಾಜ್ಯವ್ಯಾಪಿ ನಡೆಸಲಾದ ಅಭಿಯಾನದ ವೇಳೆ 60 ಸಾವಿರದಷ್ಟು ಲೌಡ್‌ಸ್ಪೀಕರ್‌ಗಳ ಸ್ಥರವನ್ನು ಅನುಮತಿಯ ಮಟ್ಟಕ್ಕೆ ತರಲಾಗಿದೆ ಎಂದಿದ್ದಾರೆ.ಈ ಅಭಿಯಾನ ಇನ್ನೂ ಮುಂದುವರೆಯಲಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

## ಎಲೆಕ್ಟ್ರಿಕ್ ವಾಹನ : ಘಟನೆ ತನಿಖೆ

(1ನೇ ಪುಟದಿಂದ) 2021ರ ಆಗಸ್ಟ್‌ನಲ್ಲಿ ತಿಳಿಸಿದ್ದರು.

ಭಾರತ ಮಾಲಾ ಪರಿಯೋಜನೆ 2022-23ರ ಒಳಗೆ ಪೂರ್ಣಗೊಳ್ಳಲಿದೆಯೇ? ಎಂಬ ಪ್ರಶ್ನೆಗೆ ಉತ್ತರಿಸಿರುವ ಅರಮನೆ, ಈ ಯೋಜನೆ ಒಂದು ವರ್ಷ ತಡವಾಗಿ 2018-19ರಲ್ಲಿ ಆರಂಭವಾಗಿತ್ತು. ಹೀಗಾಗಿ 2023-24ರ ವೇಳೆಗೆ ಮುಗಿಯಲಿದೆ ಎಂದರು. ಭಾರತ ಮಾಲಾ ಪರಿಯೋಜನೆ ಮೊದಲ ಹಂತದಲ್ಲಿ 24,800 ಕಿ.ಮೀ. ರಾಷ್ಟ್ರೀಯ ಹೆದ್ದಾರಿ ಜಾಲ ರೂಪಿಸಲು ಉದ್ದೇಶಿಸಲಾಗಿದೆ.

## ನಗರದ ಕಾಯಿಪೇಟೆಯ ಬಸವೇಶ್ವರ ದೇವಸ್ಥಾನದಲ್ಲಿ ಇಂದು - ನಾಳೆ ಬಸವ ಜಯಂತಿ

ಕಾಯಿಪೇಟೆಯ ಶ್ರೀ ಬಸವೇಶ್ವರ ನಗರದಲ್ಲಿರುವ ಶ್ರೀ ಬಸವೇಶ್ವರ ದೇವಸ್ಥಾನದಲ್ಲಿ ನಾಡಿದ್ದು ದಿನಾಂಕ 3ರ ಮಂಗಳವಾರ ಬಸವ ಜಯಂತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಇಂದು ಪ್ರಾತಃಕಾಲ ಶ್ರೀ ಬಸವೇಶ್ವರ ಪಾದಕ್ಕೆ ಮಹಾರುದ್ರಾಭಿಷೇಕ, ನಾಳೆ ಮಂಗಳವಾರ ಮುಂಜಾನೆ 8 ರಿಂದ 9ರವರೆಗೆ ತೊಟ್ಟಿಲು ಪೂಜೆ, ಸಂಜೆ 5 ಗಂಟೆಗೆ ಶ್ರೀ ಬಸವೇಶ್ವರ ಮೂರ್ತಿಯ ಭವ್ಯ ಮೆರವಣಿಗೆಯು ರಾಜಬೀದಿಗಳಲ್ಲಿ ಸಂಚರಿಸಲಿದೆ. ದಿನಾಂಕ 4ರ ಬುಧವಾರ ಅನ್ನ ಸಂತರ್ಪಣೆಯನ್ನು ಏರ್ಪಡಿಸಲಾಗಿದೆ ಎಂದು ದೇವಸ್ಥಾನದ ಸೇವಾ ಸಂಘದ ಪದಾಧಿಕಾರಿಗಳು ತಿಳಿಸಿದ್ದಾರೆ.

## ನಗರದಲ್ಲಿ ಇಂದು ಗೀತಗಾಯನ ಯಾನ

ವಿರಕ್ತಮಠ ಹಾಗೂ ಕಲಾ ಕುಂಚ ಸಾಂಸ್ಕೃತಿಕ ಸಂಸ್ಥೆಯ ಸಂಯುಕ್ತಾಶ್ರಯದಲ್ಲಿ 110ನೇ ವರ್ಷದ ಶ್ರೀ ಬಸವ ಜಯಂತ್ಯೋತ್ಸವದ ಅಂಗವಾಗಿ ಇಂದು ರಾತ್ರಿ 8 ಗಂಟೆಗೆ ಶಿವಯೋಗ ಮಂದಿರದಲ್ಲಿ ಕಲಾಕುಂಚ ಕಲಾವಿದರಿಂದ ಗೀತಗಾಯನ ಯಾನ ಸಂಗೀತಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಬಿ.ಜಿ. ಲೋಕೇಶ್ ತಿಳಿಸಿದ್ದಾರೆ.

ದಿವ್ಯ ಸಾನ್ನಿಧ್ಯವನ್ನು ಶ್ರೀ ಬಸವಪ್ರಭು ಸ್ವಾಮೀಜಿ ವಹಿಸಲಿದ್ದು, ಅಧ್ಯಕ್ಷತೆಯನ್ನು ಬಿ.ಜೆ.ಅಜಯ್‌ಕುಮಾರ್ ವಹಿಸಿಕೊಳ್ಳಲಿದ್ದಾರೆ. ಉಪಸ್ಥಿತಿ: ಸಾಲಿಗ್ರಾಮ ಗಣೇಶ್ ಶೆಣೈ, ಕೆ.ಹೆಚ್. ಮಂಜುನಾಥ್, ಶ್ರೀಮತಿ ಜ್ಯೋತಿ ಗಣೇಶ್‌ಶೆಣೈ ವೇದಿಕೆಯಲ್ಲಿರುತ್ತಾರೆ.

ಕಲಾಕುಂಚ ಗಾಯಕ-ಗಾಯಕಿಯರಾದ ಟಿ.ಆರ್.ಹೇಮಂತ್‌ಕುಮಾರ್, ಪ.ವಿಶ್ವನಾಥ್, ಶ್ರೀಮತಿ ಅನಿತಾ ಕಲ್ಯಾಣರಾವ್, ಆರ್. ಪರಮೇಶ್ವರಪ್ಪ ಶ್ರೀಮತಿ ಟಿ. ನಿರ್ಮಲಾ ವಿಶ್ವನಾಥ್, ಶ್ರೀಮತಿ ಶಾಂತಲಾ ಸುಧೀರ್, ಬಾಲ ಪ್ರತಿಭೆ ಕುಮಾರಿ ನಿಹಾರಿಕಾ ಹೆಚ್.ಎನ್. ಮುಂತಾದವರು ಗೀತಗಾಯನ ಯಾನ ಸಂಗೀತ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ.

## ಹರಿಹರದಲ್ಲಿ ನಾಳೆ ಬಸವ ಜಯಂತಿ

ಹರಿಹರ, ಮೇ 1 - ನಗರದಲ್ಲಿ ನಾಡಿದ್ದು ದಿನಾಂಕ 3 ರ ಮಂಗಳವಾರ ಜಗಜ್ಯೋತಿ ಬಸವೇಶ್ವರ ಜಯಂತಿ ಆಚರಣೆಯನ್ನು ಸಡಗರ ಸಂಭ್ರಮದಿಂದ ಆಚರಿಸಲಾಗುತ್ತದೆ ಎಂದು ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ ತಿಳಿಸಿದರು.

# ಎಟಿಎಂನಲ್ಲಿ ಕೇಳಿದ್ದು 500 ರೂ., ಕೊಟ್ಟಿದ್ದು 2500 !

ದಾವಣಗೆರೆ, ಮೇ 1- ಈ ಶೀರ್ಷಿಕೆ ನೋಡಿ ಅಚ್ಚರಿಯಾಗಬಹುದು. ಆದರೂ ನಡೆದ ಘಟನೆ ನಿಜ. ದಿನಾಂಕ 28 ರಂದು ಸಂಜೆ ನಗರದ ಸರಸ್ವತಿ ಬಡಾವಣೆಯ ಕೆನರಾ ಬ್ಯಾಂಕ್ ಎಟಿಎಂ (ಕೆಎಸ್‌ಎಸ್ ಕಾಲೇಜು ಹತ್ತಿರ) ನಲ್ಲಿ ಹಣ ಡ್ರಾ ಮಾಡಲು ಕಾರ್ಡ್ ಬಳಸಿ 500 ಕೇಳಲಾಗಿತ್ತು. ಆದರೆ ಕೇಳಿದ ಹಣಕ್ಕಿಂತ 2000 ರೂ. ಹೆಚ್ಚಿಗೆ ಒಟ್ಟು 2500 ರೂ. ಬಂದಿದೆ ಎಂದು ಹಿರಿಯ ಪತ್ರಕರ್ತ ಸಾಂ.ಹಿ. ಉಮಾಶಂಕರ್ ಹೇಳಿದ್ದಾರೆ.

ಕ್ಷಣ ಕಾಲ ಏನು ಮಾಡುವುದು ಎಂದು ಯೋಚಿಸಿ, ತಕ್ಷಣ ಮಂಡಿಪೇಟೆಯ ಕೆನರಾ ಬ್ಯಾಂಕಿಗೆ ಹೋಗಿ ಈ ಮಾಹಿತಿಯನ್ನು ಸಂಬಂಧಿಸಿದ ಅಧಿಕಾರಿಗಳಿಗೆ ತಿಳಿಸಿದಾಗ, ಎಟಿಎಂ ತಮ್ಮ ವ್ಯಾಪ್ತಿಗೆ ಬರುವುದಿಲ್ಲ. ವಿದ್ಯಾನಗರ ಶಾಖೆಗೆ ಹೋಗಿ ವಿಚಾರಿಸಿ ಎಂದಾಗ, ಈ ಬಗ್ಗೆ ಅವರಿಗೂ ಮಾಹಿತಿ ತಿಳಿಸಿದಾಗ ತಕ್ಷಣ ಬ್ಯಾಂಕಿನ ತಂತ್ರಜ್ಞರನ್ನು ಕರೆಯಿಸಿ ಎಟಿಎಂ ಪರಿಶೀಲಿಸಿದಾಗ ಆದ ನ್ಯೂನತೆ ಸರಿಪಡಿಸಲಾಯಿತು.

ಆದರೂ ಅಷ್ಟರೊಳಗಾಗಿ 23 ಸಾವಿರ ಹಣ ಡ್ರಾ ಮಾಡಲಾಗಿತ್ತು. ಆಗ ಬ್ಯಾಂಕಿನವರಿಗೆ ಹಣದ ವ್ಯತ್ಯಾಸ ಗೊತ್ತಾಗಿದೆ. ನಾನು ಕೂಡ ವಿದ್ಯಾನಗರ ಶಾಖೆಗೆ ಮರುದಿನ ಹೋಗಿ 2000 ರೂ. ಗಳನ್ನು ಅಧಿಕಾರಿಗೆ ವಾಪಸ್ ಮಾಡಿದ್ದೇನೆ. ಆಗ ಅಧಿಕಾರಿಯು ನೀವು ತಕ್ಷಣ ಮಾಹಿತಿ ನೀಡಿದ್ದರಿಂದ ಹೆಚ್ಚಿನ ಹಣ ಡ್ರಾ ಆಗುವುದು ತಪ್ಪಿದೆ, ನಿಮ್ಮಿಂದ ಸಹಾಯವಾಗಿದೆ ಎಂದು ಉಮಾಶಂಕರ್ ಅವರ ಪ್ರಾಮಾಣಿಕತೆಯನ್ನು ಮೆಚ್ಚಿಕೊಂಡಿದ್ದಾರೆ.

ಉಳಿದವರು ಯಾರಿಗಾದರೂ ಈ ರೀತಿ ಹಣ ಬಂದಿದ್ದರೆ ತಕ್ಷಣ ಹೋಗಿ ಬ್ಯಾಂಕಿಗೆ ವಾಪಾಸ್ ಕೊಡುವಂತೆ ಉಮಾಶಂಕರ್ ಮನವಿ ಮಾಡಿದ್ದಾರೆ.

# ಶಿವಶರಣರ ವಚನ ಸಂಪುಟ ಜಾಲತಾಣ ಮತ್ತು ಬಸವಣ್ಣನವರ ವಚನಗಳ ಹಿಂದಿ - ತೆಲುಗು ಅನುವಾದ ಕೃತಿಗಳ ಲೋಕಾರ್ಪಣೆ

ನಾಗರಾಜ ಸಿರಿಗೆರೆ

ಹನ್ನೆರಡನೆಯ ಶತಮಾನದಲ್ಲಿ ಕರ್ನಾಟಕದಲ್ಲಿ ಭೋರ್ಗರೆದು ಹರಿದ ಕ್ರಾಂತಿ ಪ್ರವಾಹವು ಭಾರತೀಯ ಇತಿಹಾಸದಲ್ಲಿ "ನಭೋತೋ ನಭವಿಷ್ಯತಿ" ಎಂಬಂತಹ ರೀತಿಯದ್ದು. ಈ ಕ್ರಾಂತಿಯು ಆಗಿನ ರೂಢಮೂಲ ಸಾಮಾಜಿಕ ಸ್ಥಿತಿಯ ಬಗ್ಗೆ ಪ್ರತಿಕ್ರಿಯೆ ಯಾಗಿ ಮೂಡಿ ಬಂದಿತು. ಆದುದರಿಂದ ಆ ಆಂದೋಲನದಲ್ಲಿ ಒಂದು ಹೊಸ ಬಗೆಯ ಸಾಹಿತ್ಯಿಕ, ಸಾಮಾಜಿಕ, ಧಾರ್ಮಿಕ ಆಲೋಚನಾ ಕ್ರಮ ಕಂಡು ಬಂದಿತು. ಸಕಲ ಜೀವಾತ್ಮರಿಗೆ ಲೇಸನೇ ಬಯಸುವ ಈ ಚಳವಳಿ ನಿಜವಾದ ಅರ್ಥದಲ್ಲಿ ಸಮಾಜ ವಾದಿ ನೆಲೆಯದು. ಬಸವ ಕಲ್ಯಾಣದಲ್ಲಿ ಜರುಗಿದ ಕ್ರಾಂತಿಯು ಜಾಗತಿಕ ಇತಿಹಾಸದ ಪುಟಗಳಲ್ಲಿ ಸುವರ್ಣಾಕ್ಷರಗಳಲ್ಲಿ ಬರೆದಿಡುವಂತಹದ್ದು. ಯುಗಪುರುಷ ಬಸವಣ್ಣನವರ ನೇತೃತ್ವದಲ್ಲಿ ರೂಪುಗೊಂಡ ಸಮಾಜೋಧಾರ್ಮಿಕ ಈ ಆಂದೋಲನವು ಸಾಮಾಜಿಕ ನ್ಯಾಯವನ್ನು ಜಗತ್ತಿನಲ್ಲಿ ಮೊಟ್ಟಮೊದಲು ಎತ್ತಿ ಹಿಡಿಯಿತೆಂದರೆ ಉತ್ಪ್ರೇಕ್ಷೆಯಾಗಲಾರದು. ಈ ಚಳವಳಿಯ ಉಪ ಉತ್ಪನ್ನವೇ ವಚನ ಸಾಹಿತ್ಯ. ಬಸವಾದಿ ಶಿವಶರಣರು ಜಾತಿ, ಲಿಂಗ, ವಯಸ್ಸಿನ ಭೇದವಿಲ್ಲದೆ ಅನುಭವ ಮಂಟಪದಲ್ಲಿ ಕೂಡಿ ತಮ್ಮ ಅನುಭವ-ಅನುಭಾವಗಳಿಗೆ ಅಕ್ಷರ ರೂಪ ನೀಡಿದರು. ಇದು ಮುಂದೊಂದು ದಿನ ಸಾಹಿತ್ಯಿಕವಾಗಿ ಮೌಲ್ಯ ಪಡೆಯುತ್ತದೆ ಎಂಬ ಪರಿಕಲ್ಪನೆ ಅಂದಿಗೆ ಅವರಿಗಿರಲಾರದು.

ಆದರೆ, ಈ ವಚನ ಸಾಹಿತ್ಯವು ವಿಶ್ವಸಾಹಿತ್ಯಕ್ಕೆ ಕನ್ನಡ ನೀಡಿದ ಅಪೂರ್ವ





ಕೊಡುಗೆಯಾಗಿದೆ. ಜಗತ್ತಿನ ಯಾವ ಭಾಷೆಯಲ್ಲಿಯೂ ಈ ವಿಧದ ಸಾಹಿತ್ಯ ರಚನೆಯಾಗಿಲ್ಲ ಎಂಬುದು ವಿದ್ವಾಂಸರ ಅಂಬೋಣ. ಇಂತಹ ಅಪೂರ್ವ ವಚನ ಸಾಹಿತ್ಯವನ್ನು 20ನೇಯ ಶತಮಾನದಲ್ಲಿ ಮೊಟ್ಟ ಮೊದಲ ಸಲ ಬೆಳಕಿಗೆ ತಂದ ಕೀರ್ತಿ ಫ. ಗು. ಹಳಕಟ್ಟಿಯವರದು. ಹಾಗೆಯೇ ಈ ಸಾಹಿತ್ಯದ ಪ್ರಚಾರ ಮತ್ತು ಪ್ರಸಾರಕ್ಕಾಗಿ ಬಹುಮುಖದಲ್ಲಿ ಶ್ರಮಿಸಿದವರು ಹಿರಿಯ ಶ್ರೀ ತರಳಬಾಳು ಜಗದ್ಗುರು ಶ್ರೀ ಶಿವಕುಮಾರ ಶಿವಾಚಾರ್ಯ ಮಹಾ ಸ್ವಾಮಿಗಳು. ಪರಮಪೂಜ್ಯರು ವಚನ ಸಾಹಿತ್ಯದ ಪರಿಮಳವನ್ನು ರಂಗಭೂಮಿ, ಉಪನ್ಯಾಸ, ಸಂಗೀತ, ಪುಸ್ತಕ ಪ್ರಕಟಣೆ ಮುಂತಾದ ಬಹುಮಾಧ್ಯಮಗಳ ಮೂಲಕ ನಾಡಿನ ತುಂಬೆಲ್ಲಾ ಪಸರಿಸುವಂತೆ ಮಾಡಿದರು. ಅದಕ್ಕಾಗಿ ಅಣ್ಣನ ಬಳಗ, ಅಕ್ಕನ ಬಳಗ, ತರಳಬಾಳು ಪ್ರಕಾಶನ, ತರಳಬಾಳು ಕಲಾ ಸಂಘ ಗಳನ್ನು ಪ್ರಾರಂಭಿಸಿದರು. ಪ್ರಪ್ರಥಮ ವಾಗಿ ವಚನ ಸಾಹಿತ್ಯವನ್ನು ಹಿಂದಿ, ಇಂಗ್ಲಿಷ್ ಮತ್ತು ತೆಲುಗು ಭಾಷೆಗಳಿಗೆ ಅನುವಾದ ಮಾಡಿಸಿದ್ದು ಸಹ ಪೂಜ್ಯರ ಸಂಕಲ್ಪ ಶಕ್ತಿಯ ಫಲ. ಪೂಜ್ಯರು ವಚನ ಸಾಹಿತ್ಯದ ಪ್ರಚಾರದ ಬಗ್ಗೆ ಕಂಡ ಇನ್ನಷ್ಟು ಕನಸುಗಳನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ನನಸು ಮಾಡುತ್ತಿರುವುದು ಪ್ರಸ್ತುತ ಶ್ರೀ ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳು.

60ರ ದಶಕದಲ್ಲಿಯೇ ಆಧುನಿಕ ತಂತ್ರಜ್ಞಾನದ ಸಹಾಯದಿಂದ ಇಡೀ ವಚನ ಸಾಹಿತ್ಯವನ್ನು ಬೆರಳತುದಿಯಲ್ಲಿ ನಿಲುಕುವಂತೆ ಮಾಡಿದ ಏಕಮಾತ್ರರು. 'ಗಣಕ ಋಷಿ' ಎಂಬ ಬಿರುದಿಗೆ ಭಾಜನರಾದ ಪೂಜ್ಯರು, ಭಾರತದಲ್ಲಿ ಆಗಿನ್ನೂ ಕಂಪ್ಯೂಟರ್ ಕಣ್ಣು ಬಿಡುತ್ತಿದ್ದ ಕಾಲ. ಕ್ರಿಸ್ತ ಪೂರ್ವದ ಸಂಸ್ಕೃತದ ವೈಯ್ಯಾಕರಣಿ ಪಾಣಿನಿ ಮಹರ್ಷಿಯ 'ಅಷ್ಟಾಧ್ಯಾಯಿ' ಎಂಬ ವ್ಯಾಕರಣ ಗ್ರಂಥವನ್ನು ಮತ್ತು ಬಸವಾದಿ ಶಿವಶರಣರ ವಚನಗಳನ್ನು ಕಂಪ್ಯೂಟರೀಕರಣ ಮಾಡಿ, 'ಗಣಕಾಷ್ಟಾಧ್ಯಾಯಿ' ಮತ್ತು 'ಗಣಕ ವಚನ ಸಂಪುಟ' ಎಂಬ ಸಾಫ್ಟ್ ವೇರ್ ಸಿದ್ಧಮಾಡಿದ್ದು ಪೂಜ್ಯರ ತಂತ್ರಜ್ಞಾನದ ಆಸಕ್ತಿಯ ಫಲ. ಎರಡೂವರೆ ದಶಕಗಳ ಹಿಂದೆ ಆಡಳಿತ, ಮುದ್ರಣ, ವ್ಯವಹಾರ ನಿರ್ವಹಣೆಗೆ ಮಾತ್ರ ಕಂಪ್ಯೂಟರ್ ತಂತ್ರಜ್ಞಾನ ಬಳಕೆಯಾಗುತಿತ್ತು. (5ನೇ ಪುಟಕ್ಕೆ)

**ಬೆಂಗಳೂರು ತರಳಬಾಳು ಕೇಂದ್ರದಲ್ಲಿ ಬಸವ ಜಯಂತಿ**

## ಬಸವ ಜಯಂತಿಯಲ್ಲಿ ಲೋಕಾರ್ಪಣೆ

ಬೆಂಗಳೂರಿನ ತರಳಬಾಳು ಕೇಂದ್ರವು ಅಂತರರಾಷ್ಟ್ರೀಯ ಮಟ್ಟದ ಧಾರ್ಮಿಕ, ಸಾಂಸ್ಕೃತಿಕ ಸಮುಚ್ಚಯವಾಗಿದೆ. ವಿಶ್ವ 10ನೆಯ ಸಂಸ್ಕೃತ ಸಮ್ಮೇಳನ, ಬೆಳದಿಂಗಳ ಕವಿಗೋಷ್ಠಿ, ವಿಚಾರ ಸಂಕಿರಣ ಮೊದಲಾದ ಚಟುವಟಿಕೆಗಳ ಮೂಲಕ ಸಾರಸ್ವತ ಲೋಕದಲ್ಲಿ ಹೆಗ್ಗುರುತಾಗಿದೆ. ಈಗ ಪರಿಷ್ಕೃತ ವಚನ ಗಣಕ ಸಂಪುಟ ಮತ್ತು ಬಸವಣ್ಣನವರ ವಚನಗಳ ತೆಲುಗು ಮತ್ತು ಹಿಂದಿ ಭಾಷೆಗಳ ಅನುವಾದದ ಕೃತಿಗಳ ಲೋಕಾರ್ಪಣೆಯ ಮೂಲಕ ಹೊಸದೊಂದು ಶಕೆಗೆ ನಾಂದಿಯಾಗುತ್ತಿದೆ.


ಮೇ 3 ರ ಮಂಗಳವಾರ ಸಂಜೆ 6-30ಕ್ಕೆ ಶ್ರೀ ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ಬಸವ ಜಯಂತಿ ಕಾರ್ಯಕ್ರಮ ಏರ್ಪಾಡಾಗಿದೆ. ಮುಖ್ಯ ಅತಿಥಿಗಳಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಚಿವ ಮಾಧುಸ್ವಾಮಿ, ಆಂಧ್ರಪ್ರದೇಶ ಸರ್ಕಾರದ ಸಚಿವೆ ಶರಣೆ ಉಷಾ ಶ್ರೀಚರಣ್, ವಿಶ್ರಾಂತ ನ್ಯಾಯಮೂರ್ತಿ ಶಿವರಾಜ ಪಾಟೀಲ್, ನ್ಯಾಯವಾದಿ ಅಶೋಕ ಹಾರನಹಳ್ಳಿ, ಶಾಸಕರಾದ ಬಿ.ಎಸ್. ಸುರೇಶ್, ವೈ ಎ ನಾರಾಯಣಸ್ವಾಮಿ ಭಾಗವಹಿಸುತ್ತಿದ್ದಾರೆ. ಅತಿಥಿಗಳಾಗಿ ಸಾಹಿತಿಗಳಾದ ಡಾ. ಹಂಪನಾ ಮತ್ತು ವೀರಣ್ಣ ರಾಜೂರ, ಆಂಧ್ರದ ರಾಯದುರ್ಗ ಶಾಸಕ ರಾಮಚಂದ್ರ ರೆಡ್ಡಿ, ಕರ್ನಾಟಕ ರೇಷ್ಮೆ ಮಂಡಳಿ ಆಯುಕ್ತೆ ವಿ. ವಿ. ಜೋತ್ಸ್ನಾ, ವಿಪ್ರೊ ಸಂಸ್ಥೆಯ ಹಿರಿಯ ಉಪಾಧ್ಯಕ್ಷ ಸುಬ್ರಹ್ಮಣ್ಯ ಪಾಲ್ಗೊಳ್ಳುತ್ತಿದ್ದಾರೆ.

ಈ ಸಂದರ್ಭದಲ್ಲಿ ಕೊಟ್ಟೂರಿನ ಹಿಂದಿ ಭಾಷಾ ಸಾಹಿತ್ಯ ವಿದ್ವಾನ್ ಬಣಕಾರ್ ಕೆ ಗೌಡಪ್ಪ ಹಿಂದಿ ಭಾಷೆಗೆ ಅನುವಾದಿಸಿದ ಬಸವಣ್ಣನವರ 'ಷಟ್‌ಸ್ಥಲ ವಚನಗಳು' ಕೃತಿ, ಮೈಸೂರು (5ನೇ ಪುಟಕ್ಕೆ)

## ವಚನ ಸಾಹಿತ್ಯ ಪ್ರಸಾರದ ಕ್ರಾಂತಿಯೋಗಿ ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳು

ಬಸವ ಜಯಂತಿಯಂದೇ ಜನಿಸಿ, ಬಸವ ಜಯಂತಿಯಂದೇ (1940) ಶ್ರೀ ತರಳಬಾಳು ಜಗದ್ಗುರು ಬೃಹನ್ಮಠದ ಪಟ್ಟವೇರಿದ ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳು ವಚನಕಾರರ ಆದರ್ಶಕ್ಕೆ ಮನಸೋತಿದ್ದರು. ಹಾಗಾಗಿ ವಚನಕಾರರ ಜೀವನ ಸಂದೇಶವನ್ನು ನಾಡಿನಲ್ಲಿ ಪ್ರಪ್ರಥಮವಾಗಿ ಬಹುರೂಪದಲ್ಲಿ ಪ್ರಚಾರಕ್ಕೆ ತಂದ ಕೀರ್ತಿ ಅವರದು. ಶರಣರ ತತ್ತ್ವಾದರ್ಶಗಳನ್ನಾಧರಿಸಿದ ನಾಟಕಗಳನ್ನು ರಚಿಸಿ, ಸ್ವತಃ ನಿರ್ದೇಶಿಸಿ, ಕನ್ಯಾಕುಮಾರಿಯಿಂದ ಕಾಶಿಯವರೆಗೂ ಅಭಿನಯಿಸುವಂತೆ ಮಾಡಿದ್ದು ಈಗ ಇತಿಹಾಸ. ವಚನಗಳಿಗೆ ರಾಗ ಸಂಯೋಜನೆ ಮಾಡಿಸಿ, ಹಾಡಲು ಗುಬ್ಬಿ ವೀರಣ್ಣ ನಾಟಕ ಮಂಡಳಿಯಲ್ಲಿದ್ದ ಬಿ.ಸಿ.ಎಸ್.ರಾಜು ಅವರನ್ನು ಸಿರಿಗೆರೆಗೆ ಕರೆಸಿದ್ದರು. ರಾಜು ರಾಗ ಸಂಯೋಜನೆ ಮಾಡಿದ ವಚನಗೀತೆಗಳನ್ನು ನಾಡಿನಾದ್ಯಂತ ಅಕ್ಕನ ಬಳಗದ ಕಲಾವಿದರು ಹಾಡಿದರು. ಇದರೊಂದಿಗೆ ವಚನ ಸಾಹಿತ್ಯ ವಿಶೇಷವಾಗಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರಚಾರವಾಗಬೇಕೆಂಬ ಹಂಬಲ (5ನೇ ಪುಟಕ್ಕೆ)

### ಶಿವಶರಣರ ವಚನ ಸಂಪುಟದ ಜಾಲತಾಣದಲ್ಲಿ ಏನೇನಿದೆ ?




ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪ್ರಕಟಿಸಿದ ಸಮಗ್ರ ವಚನ ಸಂಪುಟಗಳನ್ನು ಆಧರಿಸಿ, 1994ರಲ್ಲಿ ಮೊಟ್ಟಮೊದಲ ಸಲ ಶ್ರೀ ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳು. 'ವಚನ ಗಣಕ ಸಂಪುಟ'ದ ತಂತ್ರಾಂಶವನ್ನು ರೂಪಿಸಿದ್ದರು. ಅಂದಿನ ತಂತ್ರಜ್ಞಾನವನ್ನು ಅವಲಂಬಿಸಿ ರೂಪಿಸಿದ ಈ ತಂತ್ರಾಂಶದಲ್ಲಿ ವಚನದ ಯಾವುದಾದರು ಪದವನ್ನು ಟೈಪಿಸಿದರೆ ಸಾಕು, ಆ ಪದ ಬಳಕೆಯಾಗಿರುವ ಎಲ್ಲಾ ವಚನಗಳನ್ನು ಪರದೆಯ ಮೇಲೆ ತೋರಿಸುತ್ತಿತ್ತು. ವಚನ ಸಾಹಿತ್ಯವನ್ನು ಆಧರಿಸಿದ ಶಬ್ದಕೋಶ ಲಭ್ಯವಿತ್ತು. ಆದರೆ, ಈ ತಂತ್ರಾಂಶವನ್ನು ಸಾರ್ವತ್ರಿಕವಾಗಿ ಬಳಸಲು ಬರುತ್ತಿರಲಿಲ್ಲ. ವೆಬ್ ಸೈಟಿನಲ್ಲಿ ನೋಂದಾಯಿಸಲ್ಪಟ್ಟವರು ಮಾತ್ರ ಬಳಸಬೇಕಾಗಿತ್ತು. ಈ ನಡುವಿನ ಎರಡೂವರೆ ದಶಕಗಳ ಅಂತರದಲ್ಲಿ ತಂತ್ರಜ್ಞಾನದಲ್ಲಿ ಸಾಕಷ್ಟು ಸುಧಾರಣೆಗಳಾಗಿವೆ. ಮೊಬೈಲ್ ಫೋನ್ ಮಾಡಿರುವ ಕ್ರಾಂತಿಯಿಂದ ಜಗತ್ತೇ ಬೆರಳ ತುದಿಯಲ್ಲಿದೆ. ಅಲ್ಲದೇ ಸಮಗ್ರ ವಚನ ಸಂಪುಟಗಳೂ ಸಹ ಈಗಾಗಲೇ ನಾಲ್ಕನೆಯ ಮುದ್ರಣಗಳನ್ನು ಕಂಡು ಸಾಕಷ್ಟು ಪರಿಷ್ಕರಣೆಗೊಂಡಿವೆ. ಹಾಗಾಗಿ ಈ ಎಲ್ಲಾ ಕಾರಣಗಳಿಂದ ಈಗಿನ ತಂತ್ರಜ್ಞಾನಕ್ಕೆ ಹೊಂದಿಕೊಳ್ಳುವಂತೆ ತಂತ್ರಾಂಶ ಈಗ ರೂಪಿಸಲಾಗಿದೆ. ಈಗ ಸಿದ್ಧವಾಗಿರುವ ತಂತ್ರಾಂಶದಲ್ಲಿ 200ಕ್ಕೂ (5ನೇ ಪುಟಕ್ಕೆ)

## ನಗರದಲ್ಲಿ ಇಂದು ಮಕ್ಕಳಿಗಾಗಿ ವಚನ ಸ್ಪರ್ಧೆ

ಬಸವ ಜಯಂತಿ ಅಂಗವಾಗಿ ವಿರಕ್ತಮಠದಲ್ಲಿ ಹಮ್ಮಿಕೊಂಡಿರುವ ಕಾರ್ಯಕ್ರಮದಲ್ಲಿ ಇಂದು ಸಂಜೆ 4 ಗಂಟೆಗೆ ಮಕ್ಕಳಿಗಾಗಿ ವಚನ ಸ್ಪರ್ಧೆ ಏರ್ಪಡಿಸಲಾಗಿದೆ. ಮುಖ್ಯ ಅತಿಥಿಗಳಾಗಿ ಕಣಕುಪ್ಪಿ ಮುರುಗೇಶಪ್ಪ, ಶ್ರೀ ವಿಭೂತಿ ಬಸವಾನಂದ ಶರಣರು, ಶ್ರೀಮತಿ ವೀಣಾ ಮಂಜುನಾಥ್ ಆಗಮಿಸುವರು.

ಸಂಜೆ 6.30 ಕ್ಕೆ ಶಿವಯೋಗಾಶ್ರಮದಲ್ಲಿ ಜಮುರಾ ನಾಟಕೋ ತ್ಸವ ಹಮ್ಮಿಕೊಳ್ಳಲಾಗಿದೆ. ಶಾಸಕ ಮಾಡಾಳ್ ವಿರೂಪಾಕ್ಷಪ್ಪ ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ಅಣಬೇರು ರಾಜಣ್ಣ, ಕೆ. ಏಕಾಂತಪ್ಪ, ಮಹೇಶ್ವರಪ್ಪ ಆಗಮಿಸುವರು. ಪ್ರಸಾದ ಸೇವೆ ಶ್ರೀ ವಿಭೂತಿ ಬಸವಾನಂದ ಶರಣರು, ಶ್ರೀಮತಿ ಮಂದಾಕಿನಿ ಸ್ವಾಮಿ ಅವ ರಿಂದ ನಡೆಯುವುದು. ಮಹಾಂತೇಶ ರಾಮದುರ್ಗ ರಚಿಸಿ, ನಿರ್ದೇ ಶಿಸಿರುವ 'ಸೋರುತಿಹುದು ಸಂಬಂಧ' ನಾಟಕ ಇಂದು ಪ್ರದರ್ಶನ ಗೊಳ್ಳಲಿದೆ. ಜಮುರಾ ಸುತ್ತಾಟದ ಕಲಾವಿದರು ಅಭಿನಯಿಸುವರು.

## ಸಿಲಿಂಡರ್ ಬೆಲೆ ಏರಿಕೆಗೆ ಕಾಂಗ್ರೆಸ್ ಖಂಡನೆ

ನವದೆಹಲಿ, ಮೇ 1 - ವಾಣಿಜ್ಯ ಅಡುಗೆ ಅನಿಲ ಸಿಲಿಂಡರ್ ಬೆಲೆ ಏರಿಕೆಯನ್ನು ತೀವ್ರವಾಗಿ ಖಂಡಿಸಿರುವ ಕಾಂಗ್ರೆಸ್, ಬೆಲೆ ಏರಿಕೆ ವಾಪಸ್ ಪಡೆಯುವಂತೆ ಒತ್ತಾಯಿಸಿದೆ.

ಎ.ಐ.ಸಿ.ಸಿ. ಕೇಂದ್ರ ಕಚೇರಿಯಲ್ಲಿ ಮಾತನಾಡಿರುವ ಕಾಂಗ್ರೆಸ್ ನಾಯಕಿ ಅಲ್ಕಾ ಲಂಬ, ಮಾರ್ಚ್ 1ರಂದು ವಾಣಿಜ್ಯ ಅಡುಗೆ ಅನಿಲ 19 ಕೆಜಿ ಸಿಲಿಂಡರ್ ಬೆಲೆಯನ್ನು 105 ರೂ. ಹೆಚ್ಚಿಸಲಾಗಿತ್ತು. ಏಪ್ರಿಲ್ 1ರಂದು 250 ರೂ. ಹೆಚ್ಚಿಸಲಾಗಿದೆ. ಮೇ 1ರಂದು ಅನಿಲ ಬೆಲೆಯನ್ನು ಮತ್ತೆ 102.5 ರೂ.ಗೆ ಹೆಚ್ಚಿಸಲಾಗಿದೆ ಎಂದಿದ್ದಾರೆ.

ಕಳೆದ ಎಂಟು ತಿಂಗಳಲ್ಲಿ ವಾಣಿಜ್ಯ ಅಡುಗೆ ಅನಿಲ ಸಿಲಿಂಡರ್ ಬೆಲೆ 618.50 ರೂ. ಹೆಚ್ಚಾಗಿದೆ. ಬಡವರು ಹಾಗೂ ದುಡಿಯುವ ವರ್ಗದ ಮೇಲೆ ಪದೇ ಪದೇ ಬೆಲೆ ಏರಿಕೆಯ ಪ್ರಹಾರ ನಡೆಸಲಾಗುತ್ತಿದೆ ಎಂದವರು ತಿಳಿಸಿದ್ದಾರೆ.

## 22,900 ಕೋಟಿ ರೂ.ಗಳ ಸೆಮಿಕಂಡಕ್ಟರ್ ಘಟಕ

ಬೆಂಗಳೂರು, ಮೇ 1 – ಕರ್ನಾಟಕದಲ್ಲಿ 22,900 ಕೋಟಿ ರೂ. ವೆಚ್ಚದಲ್ಲಿ ಸೆಮಿಕಂಡಕ್ಟರ್ ಫ್ಯಾಬ್ರಿಕೇಷನ್ ಘಟಕ ಸ್ಥಾಪಿಸಲು ಇಸ್ರೇಲ್‌ನ ಐ.ಎಸ್.ಎಂ.ಸಿ. ಅನಲಾಗ್ ಫ್ಯಾಬ್ ಕಂಪನಿ ಆಸಕ್ತಿ ತೋರಿದೆ.

ಏಳು ವರ್ಷಗಳಲ್ಲಿ ಈ ಯೋಜನೆ ಜಾರಿಗೆ ತರಲಾಗುವುದು. ಈ ಯೋಜನೆಯಿಂದ 1,500 ಜನರಿಗೆ ಉದ್ಯೋಗ ಸಿಗಲಿದೆ ಎಂದು ರಾಜ್ಯ ಸರ್ಕಾರದ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಐ.ಟಿ. - ಬಿ.ಟಿ. ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಡಾ. ಇ.ವಿ. ರಮಣ ರೆಡ್ಡಿ ಹಾಗೂ ಐ. ಎಸ್‌ಎಂ.ಸಿ. ನಿರ್ದೇಶಕ ಅಜಯ್ ಜಲನ್ ಅವರು ಒಡಂಬಡಿಕೆಗೆ ಸಹಿ ಹಾಕಿದ್ದಾರೆ. ಈ ಸಂದರ್ಭದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಉಪಸ್ಥಿತರಿದ್ದರು.

ಒಪ್ಪಂದವನ್ನು ಸ್ವಾಗತಿಸಿರುವ ಬೊಮ್ಮಾಯಿ, ಸೆಮಿಕಂಡಕ್ಟರ್ ಫ್ಯಾಬ್ ಘಟಕಕ್ಕಾಗಿ ಹಲವು ರಾಜ್ಯಗಳು ಸ್ಪರ್ಧಿಸಿದ್ದವು. ಈ ವಿಷಯ ಕೇವಲ ಹಣಕಾಸು ಉತ್ತೇಜನಕ್ಕೆ ಸಂಬಂಧಿಸಿದ್ದಲ್ಲ. ಇದು ಅಗತ್ಯವಾದ ಸೌಲಭ್ಯಗಳು ಹಾಗೂ ಒಟ್ಟಾರೆ ಕಾರ್ಯ ನಿರ್ವಹಣೆ ಸುಗಮಗೊಳಿಸುವುದಕ್ಕೆ ಸಂಬಂಧಿಸಿದ್ದು ಎಂದಿದ್ದಾರೆ.

ಕರ್ನಾಟಕ ದೇಶದಲ್ಲೇ ಅತ್ಯುತ್ತಮ ಮೂಲಭೂತ ಸೌಲಭ್ಯ ಹೊಂದಿದೆ. ಇಲ್ಲಿ ಸಾಕಷ್ಟು ಕುಶಲಿಗಳು ಲಭ್ಯವಿದ್ದಾರೆ. ಸರ್ಕಾರ ಉದ್ಯಮಗಳ ಆರಂಭಕ್ಕೆ ಇರುವ ಅಡ್ಡಿಗಳನ್ನು ನಿವಾರಿಸುವ ಜೊತೆಗೆ, ಈಗಿರುವ ಉದ್ಯಮಗಳ ಕಾರ್ಯ ನಿರ್ವಹಣೆ ಸುಗಮಗೊಳಿಸಲು ಕ್ರಮ ತೆಗೆದುಕೊಳ್ಳುತ್ತಿದೆ ಎಂದಿದ್ದಾರೆ.

### ವಟುಗಳಿಗೆ ಧರ್ಮೋಪನಯನ

ದಾವಣಗೆರೆ, ಮೇ 1- ಶ್ರೀ ಶಂಕರ ಸೇವಾ ಸಂಘದಿಂದ ಇದೇ ದಿನಾಂಕ 6 ರಂದು ತ್ರಿಮತಸ್ತ ಬ್ರಾಹ್ಮಣ ವಟುಗಳಿಗೆ ಧರ್ಮೋಪನಯನ ನಗರದ ಶ್ರೀ ಶಂಕರ ಸಮುದಾಯ ಭವನದಲ್ಲಿ ನಡೆಯಲಿದೆ. ವಿವರಕ್ಕೆ ಇದೇ ದಿನಾಂಕ 20 ರೊಳಗಾಗಿ ದೂರವಾಣಿ : 08192-221680, ಮೊ: 8296408068, 9480710858ರಲ್ಲಿ ಸಂಪರ್ಕಿಸಿ.

## ಚದುರಂಗವಾಡಿ ಚತುರರಾಗಲು ಕರೆ




ದಾವಣಗೆರೆ, ಮೇ 1- ನಗರದ ಡಾ.ಶಾಮನೂರು ಶಿವಶಂಕರಪ್ಪ ಭವನದಲ್ಲಿ ಇಂದು ಏರ್ಪಡಿಸಲಾಗಿದ್ದ ಬೇಸಿಗೆ ತರಬೇತಿ ಶಿಬಿರದ ಸಮಾರೋಪ ಸಮಾರಂಭದಲ್ಲಿ ಜಿಲ್ಲಾ ಕ್ರೀಡಾಪಟುಗಳ ಸಂಘದ ಅಧ್ಯಕ್ಷರೂ ಆದ ದಾವಣಗೆರೆ ಚೆಸ್ ಕ್ಲಬ್ ಅಧ್ಯಕ್ಷ ದಿನೇಶ್ ಕೆ.ಶೆಟ್ಟಿ ಮಾತನಾಡಿ, ಶಾಲಾ ಮಕ್ಕಳ ಬುದ್ಧಿಶಕ್ತಿ, ನೆನಪಿನ ಶಕ್ತಿ, ಬೆಳವಣಿಗೆ ಹೆಚ್ಚಾಗಲು ಮಕ್ಕಳಿಗೆ ಚದುರಂಗವಾಡಿ ಚತುರರಾಗಿ ಎಂದು ಮಕ್ಕಳಿಗೆ ಕಿವಿಮಾತು ತಿಳಿಸಿದರು.

ತರಬೇತಿಯಲ್ಲಿ ಪಾಲ್ಗೊಂಡಿದ್ದ ಮಕ್ಕಳಲ್ಲಿ ಗೌರಿಕಾ ಮತ್ತು ಸಾನ್ನಿಧ್ಯ ಹಿರೇಮಠ ಅವರು ಪ್ರಥಮ ಸ್ಥಾನವನ್ನು ಹಂಚಿಕೊಂಡರು. ದ್ವಿತೀಯ ಸ್ಥಾನವನ್ನು ಬಿ.ಕೆ. ಲಕ್ಷಯ್ ಮನೋಜ್ ನಂತರದ ಸ್ಥಾನದಲ್ಲಿ ಅಭಿನವ್ ಅಜೀಬ್ ಹಾಗೂ 8 ವರ್ಷದ ವಿಭಾಗದಲ್ಲಿ ಪ್ರಥಮ ಪ್ರಾಣ ಯಶಸ್ಸು, ದ್ವಿತೀಯ ಸ್ಥಾನ ಸಾಧ್ಯ ತಾಹಿರಾ, ತೃತೀಯ ಸ್ಥಾನ ಕೃಪಾ ಮಸಗಿ ನಂತರದ ಸ್ಥಾನದಲ್ಲಿ ಚಂದನ್ ಪೃಥ್ವಿ, ಅಭಿನವ್, ಸನ್ಮಯ್, ಸೃಜನ್, ಮನೋಜ್, ಹರ್ಷ, ಷಣ್ಮುಖಾರಾಧ್ಯ, ಪ್ರಚಿತಾ, ಅಮಿ, ನಿರಂಜನ್, ಶ್ರೇಯಸ್, ಅಭಿಲಾಷ್, ವೈಭವ್, ಅನುಶ್ರೀ ಇನ್ನು ಮುಂತಾದ ಮಕ್ಕಳು ಭಾಗವಹಿಸಿದ್ದರು

ಎರಡನೇ ಶಿಬಿರವು ಇಂದಿನಿಂದ ಇದೇ ದಿನಾಂಕ 14 ರವರೆಗೆ ಡಾ.ಶಾಮನೂರು ಶಿವಶಂಕರಪ್ಪ ಭವನದಲ್ಲಿ ಏರ್ಪಡಿಸಲಾಗಿದೆ. ವಿವರಕ್ಕೆ ಸಂಘದ ಕಾರ್ಯದರ್ಶಿ ಯುವರಾಜ್ (9945613469) ಅವರನ್ನು ಸಂಪರ್ಕಿಸಬಹುದು.

ಇದೇ ದಿನಾಂಕ 15 ರ ಭಾನುವಾರ ಜಿಲ್ಲಾ ಮಟ್ಟದ ಚದುರಂಗ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ. ಈ ಸ್ಪರ್ಧೆಯಲ್ಲಿ ಹದಿನಾರು ವರ್ಷದ ಒಳಗಿನ ಮಕ್ಕಳಿಗೆ ಮಾತ್ರ. ಈ ಸಂದರ್ಭದಲ್ಲಿ ಸಹ ಕಾರ್ಯದರ್ಶಿ ಮಂಜುಳಾ ತರುಣ್ ಮತ್ತು ಇತರರು ಭಾಗವಹಿಸಿದ್ದರು.

### ರಾಣೇಬೆನ್ನೂರಿನಲ್ಲಿ ಇಂದು ವಿದ್ಯುತ್ ಇಲ್ಲ

ರಾಜೇಶ್ವರಿ ನಗರದಲ್ಲಿ ಇಂದು ಬೆಳಿಗ್ಗೆ 10ರಿಂದ ಸಂಜೆ 6ರವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ. ರಾಜೇಶ್ವರಿ ನಗರದ ಗ್ರಾಹಕರು ಸಹಕರಿಸುವಂತೆ ಕೋರಲಾಗಿದೆ.

# ಜಗಜ್ಯೋತಿ ಬಸವೇಶ್ವರ : ಪ್ರಸ್ತುತತೆ

ಡಾ. ಹೆಚ್.ಎಸ್. ಮಂಜುನಾಥ ಕುರ್ಕಿ

12ನೇ ಶತಮಾನದಲ್ಲಿ ವರ್ಗ, ವರ್ಣ, ಜಾತಿ-ಭೇದ ರಹಿತ ಸಮಾಜ ನಿರ್ಮಾಣಕ್ಕಾಗಿ ಶೋಷಿತ ಸಮುದಾಯದ ನೇತಾರನಾಗಿ, ಶೋಷಣೆಯ ವಿರುದ್ಧ ಹೋರಾಡಿ ಸಮಾನತೆಯ ಸಂದೇಶವನ್ನು ಸಾರಿ, ಮನುಕುಲದ ಒಳಿತಿಗಾಗಿ, ಕರ್ಮ ಸಿದ್ಧಾಂತದ ಬದಲು ಕಾಯಕ ಸಿದ್ಧಾಂತ, ದಾನದ ಬದಲು ದಾಸೋಹ, ಸ್ಥಾವರ ಲಿಂಗದ ಬದಲು ಇಷ್ಟಲಿಂಗ, ಬಹುದೇವೋಪಾಸನೆ ಬದಲು ಏಕದೇವೋಪಾಸನೆ, ಸಂಸ್ಕೃತದ ಬದಲು ಕನ್ನಡ, ಉಳ್ಳವರ ಬದಲು ದುಡಿಯುವ ವರ್ಗ, ಮಂದಿರದ ಬದಲು ಅನುಭವ ಮಂಟಪ ಹೀಗೆ ಪರ್ಯಾಯ ಸಮಾಜಕ್ಕೆ ಭದ್ರ ಬುನಾದಿ ಹಾಕಿ 'ಹೊಸ ನೈತಿಕ ಜಗತ್ತಿನ ಸಮ-ಸಮಾಜದ' ನಿರ್ಮಾಣದ ಆಶಯ, ಅರಿವಿನ ಜ್ಯೋತಿ ಬಸವಣ್ಣನವರದು.

ಅರಿವು, ಆಚಾರ, ಅನುಭವದ ಚಿಂತನೆಗಳ ಮೂಲಕ ಸತ್ಯದ ಸಾಕ್ಷಾತ್ಕಾರ ಪಡೆಯುವುದು ಮಾತ್ರವಲ್ಲ, ಆತ್ಮೋದ್ಧಾರದ ಜೊತೆಗೆ ಮನುಕುಲದ ಉದ್ಧಾರ ಅವರ ಮನದ ಆಶಯವಾಗಿತ್ತು. 'ಸತ್ಯದ ಹಂಬಲವೇ ಸಾಹಿತ್ಯವಾಗಿ, ಸತ್ಯಾನ್ವೇಷಣೆಯೇ ಸಿದ್ಧಾಂತವಾಗಿ, ಸತ್ಯದ ಸಾಕ್ಷಾತ್ಕಾರ ದರ್ಶನವಾಗಿ' ಬಸವಣ್ಣನವರ ವಚನಗಳು ಪರಮಾನಂದ ನೀಡುತ್ತವೆ. ಅಂತರಂಗವನ್ನು ಶುದ್ಧಗೊಳಿಸಿ ಮಾನವನನ್ನು ದೈವ ಮಾನವನನ್ನಾಗಿಸುತ್ತವೆ. ಅಣ್ಣನವರ ವಚನಗಳಲ್ಲಿ ಎಲ್ಲಿಯೂ ಉಪದೇಶಗಳಿಲ್ಲ, ಆತ್ಮ ವಿಮರ್ಶೆಯಿದೆ. ನಡೆ-ನುಡಿಗಳಲ್ಲಿನ ಸರಿ-ತಪ್ಪುಗಳ ಪರಾಮರ್ಶೆಯಿದೆ. ಜ್ಞಾನದ ಕೈದೀವಿಗೆಯನ್ನಿಡಿದು ಅನುಭವ ಪಥದಲ್ಲಿ ಮುನ್ನೆಡೆಯಬಲ್ಲ ಸಾಧಕನ ಸಾಧನೆಯ ಸಾಧ್ಯತೆ ಹೆಜ್ಜೆ ಗುರುತುಗಳಿವೆ.

ಬಸವಣ್ಣ ಲಿಂಗವಂತದ ಧರ್ಮದ ಆಚಾರ, ವಿಚಾರಗಳ ಬಗ್ಗೆ ಅರಿವು ಮೂಡಿಸಿ, ಶರಣ ಪರಂಪರೆಗೆ ರೂಪ ಕೊಟ್ಟವರು. ಕತ್ತಲಿನಿಂದ ಬೆಳಕಿನಕಡೆಗೆ, ಅಸತ್ಯದಿಂದ ಸತ್ಯದ ಕಡೆಗೆ, ಅಧರ್ಮದಿಂದ ಧರ್ಮದೆಡೆಗೆ, ದುರ್ಗುಣದಿಂದ ಸುಗುಣದೆಡೆಗೆ, ದ್ವೇಷದಿಂದ ದಯೆ ಕಡೆಗೆ, ಮೃಗತ್ವದಿಂದ ಮನುಷ್ಯತ್ವದಕಡೆಗೆ



ಕೊಂಡೊಯ್ದ ಮಹಾಮಾನವತಾವಾದಿ.

"ಅಜ್ಞಾನದ ಹಾಸಿಗೆ ಹಾಸಿಕೊಂಡು, ಮೌಢ್ಯದ ಹೊದಿಕೆ ಹೊತ್ತುಕೊಂಡು ನುಡಿಗಲಿಸಿದವರು, ನಡೆಗಲಿಸಿದವರು, ಉಣಗಲಿಸಿದವರು, ಉಡಗಲಿಸಿದವರು, ಬದುಕು ಕಲಿಸಿದವರು.

ಆದರ್ಶ ಸಮಾಜ ನಿರ್ಮಾಣಕ್ಕೆ ಅವಶ್ಯವಿದ್ದ ವೈಚಾರಿಕತೆ, ಆತ್ಮಶೋಧನೆ, ಸಾಮಾಜಿಕ ಪ್ರಜ್ಞೆ, ಕಾಯಕ ಮತ್ತು ದಾಸೋಹಗಳ ಮಹತ್ವ, ಸಾಮಾಜಿಕ ಜವಾಬ್ದಾರಿ ಹಾಗೂ ಎಲ್ಲಾ ಧಾರ್ಮಿಕ ಬಂಧನಗಳಿಂದ ಜನತೆಯನ್ನು ಮುಕ್ತಗೊಳಿಸಿ ಸಮಾನತೆಯ ಬಾಳ್ವೆ ಅವರ ಆಶಯವಾಗಿತ್ತು.

ಸ್ವರ್ಗದ ಮೋಹ ನರಕದ ಭೀತಿಯನ್ನು ಹೋಗಲಾಡಿಸದೆ ಮಾನವರ ಬೌದ್ಧಿಕ ವಿಕಾಸ ಅಸಾಧ್ಯವೆಂದು ತಿಳಿದು 'ಸತ್ಯವ ನುಡಿಯುವುದೇ ದೇವಲೋಕ, ಮಿಥ್ಯವ ನುಡಿಯುವುದೇ ಮರ್ತ್ಯ ಲೋಕ', 'ಆಚಾರವೇ ಸ್ವರ್ಗ, ಅನಾಚಾರವೇ ನರಕ', 'ದಯವೇ ಧರ್ಮದ ಮೂಲ' ಎಂದು ಹೇಳುವ ಬಸವಣ್ಣ, 'ಎನಗಿಂತ ಕಿರಿಯರಿಲ್ಲ, ಶಿವಭಕ್ತರಿಗಿಂತ ಹಿರಿಯರಿಲ್ಲ' ಎಂಬ ಮನೋಭಾವವೇ ಅವರು ಸಮಾಜೋಧಾರ್ಮಿಕ ಚಳುವಳಿಯ ನೇತಾರರಾಗಲು ಕಾರಣವಾಯಿತು.

ಇಂದು ಪ್ರತಿಯೊಬ್ಬ ಮಾನವ ಸ್ವಾರ್ಥದ ಬದುಕು ಮತ್ತು ವೈಯಕ್ತಿಕ ದ್ವೇಷ ಮರೆತು ಒಬ್ಬರನ್ನೊಬ್ಬರು ಗೌರವಿಸಬೇಕು, ಇವನಾರವ-ಎನ್ನದೆ ಇವನಮ್ಮವ ನೆಂದೆನಿಸಿರಯ್ಯ, ಇದರಿಂದ ವ್ಯಕ್ತಿ ಬಾಂಧವ್ಯ ಹಾಗೂ ವಿಶ್ವಶಾಂತಿಗೆ ನಾಂದಿಯಾಗುತ್ತದೆ ಎಂದರು.

'ಲೋಕದ ಡೊಂಕ ನೀವೇಕೆ ತಿದ್ದುವಿರಿ, ನಿಮ್ಮ ತನುವ, ಮನವ ಸಂತೈಸಿಕೊಳ್ಳಿ' ಇದರಿಂದ ವೈಯಕ್ತಿಕ ಸುಧಾರಣೆಯಾಗುತ್ತದೆ. 'ಬೇರೆಯವರನ್ನು ಪಾಪಿ ಎನ್ನುವ ಮೊದಲು ತಾನೆಷ್ಟು ಪುಣ್ಯವಂತ' ಎಂಬುದನ್ನು ಸ್ವವಿಮರ್ಶೆ ಮಾಡಿಕೊಳ್ಳಬೇಕು.

'ಎನ್ನ ನುಡಿಯೊಂದು ಪರಿ, ಎನ್ನ ನಡೆಯೊಂದು ಪರಿ', ಎನ್ನೊಳಗೇನು ಶುದ್ಧವಿಲ್ಲ ನೋಡಯ್ಯ ಎಂದು ಮನಸ್ಸಿನ ಚಂಚಲಚಿತ್ತದ ನಡತೆಯನ್ನು ಪ್ರಶ್ನಿಸುತ್ತಾರೆ.

ದೇವಾಲಯಗಳನ್ನು ನಿರಾಕರಿಸದೆ 'ಎನ್ನ ಕಾಲೇ ಕಂಬ, ದೇಹವೇ ದೇಗುಲ' ಎಂದು ಕಾಯಕದಲ್ಲಿ ಕಾಣುವ ಹಾದಿಯನ್ನು ತೋರಿಸಿಕೊಟ್ಟರು.

ಎನ್ನ ಚಿತ್ತವು ಹತ್ತಿಹಣ್ಣು ನೋಡಯ್ಯ, ವಿಚಾರಿಸಿದೊಡೇನು ಹುರುಳಿಲ್ಲವಯ್ಯಾ ಎನ್ನುವ ಮಾತಿನಿಂದ ಆತ್ಮಸಾಕ್ಷಿಯನ್ನು ಪ್ರಶ್ನಿಸುತ್ತಾರೆ.

ಅನುಭಾವದ ಮೂಲಕ ಮನುಷ್ಯನ ಆಂತರಿಕ ಪ್ರಜ್ಞೆಯನ್ನು ಎಚ್ಚರಿಸುವ ಬಸವಣ್ಣ ಆನೆ, ಕುದುರೆಯನ್ನೇರಿಕೊಂಡು ಹೋದಿರಿ ನೀವು ಸತ್ಯದ ನಿಲುವನ್ನರಿಯದೆ ಹೋದಿರಲ್ಲಾ, ಮನುಷ್ಯನ ಭ್ರಮನಿರಸ ಜೀವನ ಶೈಲಿಯನ್ನು ಕಂಡು ಅವರು ವಿಷಾದಿಸುತ್ತಾರೆ.

ಕರ್ಮ-ಕಟ್ಟಳೆಗಳ ವಿರುದ್ಧ ಸಾತ್ವಿಕ ಸಿಟ್ಟು ಪ್ರದರ್ಶಿಸುತ್ತಲೇ, ಶೋಷಣೆಯ ಸಾಧನಗಳಾದ ವೇದಶಾಸ್ತ್ರಗಳನ್ನು ನಿರಾಕರಿಸಿ, ಶರಣ ಸಂಸ್ಕೃತಿಯ ಬೀಜವನ್ನಿಟ್ಟು ಬೆಳೆಸಿದರು. ವೇದಕ್ಕೆ ಒರೆಯ ಕಟ್ಟುವೆ, ಶಾಸ್ತ್ರಕ್ಕೆ ನಿಗಳ ನಿಕ್ಕುವೆ, ತರ್ಕದ ಬೆನ್ನಬಾರನೆತ್ತುವೆ, ಆಗಮದ ಮೂಗು ಕೊಯ್ಯುವೆ ಎಂದು ನುಡಿಯುತ್ತಾರೆ.

ಬಸವಣ್ಣ ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ, ಮುನಿಯಬೇಡ, ಅನ್ಯರಿಗೆ ಅಸಹ್ಯ ಪಡಬೇಡ, ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ ಎಂಬ ಬದುಕಿಗೆ ಮೌಲ್ಯಿಕವಾದ ಸಪ್ತಸೂತ್ರಗಳನ್ನು ನೀಡಿದ್ದಾರೆ.

ವ್ಯಕ್ತಿಯ ಧಾರ್ಮಿಕ, ಅಧ್ಯಾತ್ಮಿಕ ಉನ್ನತಿಗೆ ಕಾರಣವಾದ ಬಸವಣ್ಣನವರ ವಚನಗಳು ಕನ್ನಡದ 'ಉಪನಿಷತ್ತು' ಹಾಗೂ 'ಬದುಕಿನ ಸಂವಿಧಾನ' ಎಂಬ ಹೆಗ್ಗಳಿಕೆಗೆ ಪಾತ್ರವಾಗಿವೆ.

ನಮ್ಮ ಸಂವಿಧಾನದ ಎಲ್ಲಾ ಆಶಯಗಳು ಮತ್ತುವಿಶ್ವಸಂಸ್ಥೆ1948ನೇ (4ನೇ ಪುಟಕ್ಕೆ)

# ಕಾರ್ಮಿಕರು ತಮ್ಮ ಮಕ್ಕಳ ಶಿಕ್ಷಣಕ್ಕೆ ಆದ್ಯತೆ ನೀಡಿ

## ಜಗಳೂರು ಕಾರ್ಮಿಕ ದಿನಾಚರಣೆ ಕಾರ್ಯಕ್ರಮದಲ್ಲಿ ಶಾಸಕ ಎಸ್.ವಿ. ರಾಮಚಂದ್ರ ಸಲಹೆ

ಜಗಳೂರು, ಮೇ 1- ಅಸಂಘಟಿತ ವಲಯದಲ್ಲಿನ ಕಾರ್ಮಿಕರು ಕಾರ್ಡ್ ಪಡೆದು ಮಕ್ಕಳ ಶೈಕ್ಷಣಿಕ ಸೌಲಭ್ಯದ ಸದುಪಯೋಗ ಪಡೆದುಕೊಳ್ಳಬೇಕು ಎಂದು ಶಾಸಕ ಎಸ್.ವಿ.ರಾಮಚಂದ್ರ ಸಲಹೆ ನೀಡಿದರು.

ಪಟ್ಟಣದ ಶಾದಿಮಹಲ್‌ನಲ್ಲಿ ಕಾರ್ಮಿಕ ಸಂಘಟನೆ ವತಿಯಿಂದ ಹಮ್ಮಿಕೊಂಡಿದ್ದ ಕಾರ್ಮಿಕರ ದಿನಾಚರಣೆ ಉದ್ಘಾಟಿಸಿ ಅವರು ಮಾತನಾಡಿದರು.

ಕೊರೊನಾ ಸಂದರ್ಭದಲ್ಲಿ ತಾಲ್ಲೂಕಿನ 8 ಸಾವಿರ ಕಾರ್ಮಿಕರಿಗೆ ಉಚಿತ ಕಿಟ್ ಗಳನ್ನು ವಿತರಿಸಲಾಗಿದೆ. ಬಿಜೆಪಿ ಸರ್ಕಾರ ಸದಾ ಕಾರ್ಮಿಕರ ಹಿತ ಕಾಪಾಡುತ್ತದೆ. ಅರ್ಹ ಫಲಾನುಭವಿಗಳು ಕಾರ್ಮಿಕ ಮಂಡಳಿಯ ಪಿಂಚಣಿ, ವಿವಾಹ ಸಹಾಯಧನ, ವೈದ್ಯಕೀಯ, ಶೈಕ್ಷಣಿಕ, ವಸತಿ ಸೇರಿದಂತೆ ಇತರೆ



ಸೌಲಭ್ಯಗಳನ್ನು ಪಡೆದು ಆರ್ಥಿಕವಾಗಿ ಅಭಿವೃದ್ಧಿ ಯಾಗಬೇಕು ಎಂದರು.

ಪ್ರತಿನಿತ್ಯ ದುಡಿಮೆ ಹಣವನ್ನು ದುಂದು ವೆಚ್ಚ ಮಾಡದೆ ಕುಟುಂಬ ನಿರ್ವಹಣೆಗೆ ಬಳಸಬೇಕು. ಕೆಲಸ ನಿರತ ಕಟ್ಟಡ ಕಾರ್ಮಿಕರು ಜಾಗ್ರುತರಾಗಬೇಕು. ವೈಯಕ್ತಿಕ ಆರೋಗ್ಯಕ್ಕೆ ಕಾಳಜಿ ನೀಡ ಬೇಕು ಎಂದು ಸಲಹೆ ನೀಡಿದರು.

ಕಾರ್ಮಿಕರ ಕಲ್ಯಾಣಕ್ಕಾಗಿ ರಾಜ್ಯ ಸರ್ಕಾರ ಹಲವಾರು ಯೋಜನೆಗಳನ್ನು ಜಾರಿಗೊಳಿಸಿದೆ. ತಾಲ್ಲೂಕಿನಲ್ಲಿ ಕಟ್ಟಡ ಕಾರ್ಮಿಕರು ಸೇರಿದಂತೆ ಅಸಂಘಟಿತ ವಲಯದ ಕಾರ್ಮಿಕರು ಕಾರ್ಮಿಕರ ಕಾರ್ಡ್ ಪಡೆದು ಯೋಜನೆಗೆ ಫಲಾನುಭವಿಗಳಾಗಬೇಕು ಎಂದರು.

ಇದೇ ವೇಳೆ ಕಾರ್ಮಿಕ ಸಂಘಟನೆಯಿಂದ ಸ್ವಂತ ಕಚೇರಿ, ನಿವೇಶನಗಳು ಮತ್ತು ಸಮುದಾಯ ಭವನ ನೀಡಲು ಮನವಿ ಮಾಡಿದರು. ಮನವಿಗೆ ಸ್ಪಂದಿಸಿದ ಶಾಸಕರು, ತಮ್ಮ ಆಸೆಯಂತೆ 300 ಸೈಟುಗಳನ್ನು ಕಾರ್ಮಿಕರಿಗೆ ನೀಡಲಾಗುವುದು. ಮುಂದಿನ ದಿನಗಳಲ್ಲಿ ಭವನ ನಿರ್ಮಾಣಕ್ಕೆ ಕ್ರಮಕೈಗೊಳ್ಳಲಾಗುವುದು. ಸದಾ ನಿಮ್ಮ ಜೊತೆ ಇರುತ್ತೇನೆ ಎಂದು ಕಾರ್ಮಿಕರಿಗೆ ಆತ್ಮಸ್ಥೈರ್ಯ ತುಂಬಿದರು.

ಪಟ್ಟಣ ಪಂಚಾಯ್ತಿ ಮಾಜಿ ಅಧ್ಯಕ್ಷ ತಿಪ್ಪೇಸ್ವಾಮಿ ಮಾತನಾಡಿ, ಕಾರ್ಮಿಕ ಸಂಘಟನೆಗಳು ನೆಪಮಾತ್ರಕ್ಕೆ ಇರದೇ ಅರ್ಹ ಫಲಾನುಭವಿಗಳಿಗೆ ಸೌಲಭ್ಯ ಕೊಡಿಸಲು ಮುಂದಾಗಬೇಕು ಎಂದರು.

ಸಮಾರಂಭದಲ್ಲಿ ಮಾಜಿ ಶಾಸಕ ಎಚ್.ಪಿ.ರಾಜೇಶ್, ಕಾಂಗ್ರೆಸ್ ಮುಖಂಡರಾದ ಚಿಕ್ಕಮ್ಮನ ಹಟ್ಟಿ ದೇವೇಂದ್ರಪ್ಪ, ಕೆ.ಪಿ.ಪಾಲಯ್ಯ, ಕಾರ್ಮಿಕ ಸಂಘಟನೆ ಅಧ್ಯಕ್ಷ ಪ್ರಕಾಶ್. ಪಟ್ಟಣ ಪಂಚಾಯಿತಿ ಅಧ್ಯಕ್ಷ ರೇವಣ್ಣ, ಸದಸ್ಯರಾದ ಪಾಪಲಿಂಗಪ್ಪ, ರುದ್ರಮುನಿ ಸೇರಿದಂತೆ ಕಾರ್ಮಿಕ ಸಂಘಟನೆಯ ಪದಾಧಿಕಾರಿಗಳಿದ್ದರು.

ಜೈ ಶ್ರೀಮನ್ನಾರಾಯಣ
ವಿಕಾಸ ತರಂಗಿಣಿ, ದಾವಣಗೆರೆ
27ನೇ ವರ್ಷದ
ಉಚಿತ ಮಜ್ಜಿಗೆ ವಿತರಣೆ ಕಾರ್ಯಕ್ರಮ
ಏಪ್ರಿಲ್ 1 ರಿಂದ ಮೇ 15ರವರೆಗೆ.
ಸ್ಥಳ : ಮಹಾನಗರ ಪಾಲಿಕೆ ಆವರಣ
ಇಂದಿನ ಮಜ್ಜಿಗೆ ಪ್ರಾಯೋಜಕರು :
ದಿ. ಚಿಲಕೂರಿ ಸತ್ಯನಾರಾಯಣ (ಬಾಬುರಾವ್) ಶ್ಯಾಗಲೆ ಕ್ಯಾಂಪ್ ಇವರ ಪ್ರಥಮ ವರ್ಧಂತಿ ಪ್ರಯುಕ್ತ ಮತ್ತು ಕುಟುಂಬ ವರ್ಗದವರ ಸೇವಾರ್ಥ.

ಸೈಟುಗಳು ಮಾರಾಟಕ್ಕಿವೆ
30x43 ಪೂರ್ವ, 30x50 ಪೂರ್ವ, 40x60 ಪೂರ್ವ
ಸಂಪರ್ಕಿಸಿ :
ಲಿಂಗರಾಜ್ ಎಸ್. ಹಲಸೂರ್
97425 12125

ಬೇಕಾಗಿದ್ದಾರೆ
ಫುಡ್ ಮಾರ್ಟ್ ಸೂಪರ್ ಮಾರ್ಕೆಟ್, ದಾವಣಗೆರೆ ಇಲ್ಲಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
ವಿದ್ಯಾರ್ಹತೆ : ಯಾವುದೇ ಡಿಗ್ರಿ
M : 98864 63531

ಬೇಕಾಗಿದ್ದಾರೆ
ಅಟೆಂಡರ್ ಕೆಲಸಕ್ಕೆ ಡ್ರೈವಿಂಗ್ ಲೈಸೆನ್ಸ್ ಹೊಂದಿರುವ ಸ್ಥಳೀಯ ಯುವಕರು ಬೇಕಾಗಿದ್ದಾರೆ
ಅಂದನೂರು ಚಿಟ್ಸ್ (ರಿ)
ರಾಂ & ಕೋ ಸರ್ಕಲ್, ದಾವಣಗೆರೆ.

WORK FROM HOME
Male/Female, Full / Part time
Hand writing work. Small Letter to Capital Letter
Earn Per month
12,000/- to 15,000/-
89718 52431

ಸೈಟು ಮಾರಾಟಕ್ಕಿದೆ
ಬೈಪಾಸ್ ರಸ್ತೆಗೆ ಹೊಂದಿಕೊಂಡು ಇರುವ Daiwik Mothi Rama Rao ಲೇಔಟ್‌ನಲ್ಲಿ 40x60 ಅಡಿ West ಅಳತೆಯ ಸೈಟು ಮಾರಾಟಕ್ಕಿದೆ.
ಸಂಪರ್ಕಿಸಿ :
97424 34049

2 ಬೆಡ್ ರೂಂ ಮನೆ ಬಾಡಿಗೆಗೆ
ಡೋ.ನಂ. 240/2, 4 ನೇ ಮೇನ್, ಪಿ.ಜೆ ಬಡಾವಣೆ, ನರ್ಸರಿ ಜೈನ್ ವಿದ್ಯಾಲಯದ ಹತ್ತಿರ, ರಾಂ ಅಂಡ್ ಕೋ ಸರ್ಕಲ್ ಬಳಿ 2 ಬೆಡ್ ರೂಂ ಮನೆ ಬಾಡಿಗೆಗೆ ಇದೆ. ಸಂಪರ್ಕಿಸಿ.
97429 61169, 81974 00298

ಟ್ಯಾಂಕ್ ಕ್ಲೀನಿಂಗ್
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

ಕಿರಾಣಿ ಅಂಗಡಿ ಮಾರಾಟಕ್ಕಿದೆ
ಫರ್ನೀಚರ್ ಹಾಗೂ ಕಿರಾಣಿ ಸಾಮಾನುಗಳ ಜೊತೆ
79977 51925
77020 78904
80734 27149

ಬೇಕಾಗಿದ್ದಾರೆ
ಶ್ರೀ ಸಿದ್ಧೇಶ್ವರ ಪ್ರಾವಿಜನ್ ಸ್ಟೋರ್, ವಿದ್ಯಾನಗರ ಮೇನ್ ರೋಡ್, ಅನುಭವಿ ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ :
93430 37565

ಸೈಟ್ ಮಾರಾಟಕ್ಕೆ ಇದೆ
ಮಹಾಲಕ್ಷ್ಮಿ ಲೇಔಟ್, ಶಿವಗಂಗೆ ಕಲ್ಯಾಣ ಮಂಟಪದ ಹಿಂಭಾಗ
41x92 ದಕ್ಷಿಣ ಸೈಟ್ ಮಾರಾಟಕ್ಕಿದೆ.
98448 82366

ಬೇಕಾಗಿದ್ದಾರೆ
ಬೆಣ್ಣೆ ದೋಸೆ ಹೋಟೆಲ್‌ನಲ್ಲಿ ಕೆಲಸಗಾರರು ಬೇಕಾಗಿದ್ದಾರೆ.
ದೋಸೆ ಭಟ್ಟರು, ಸಪ್ಲೈಯರ್, ಕ್ಲೀನರ್
ಹಳೆ ಸಾಗರ್ ಬೆಣ್ಣೆ ದೋಸೆ ಹೋಟೆಲ್ ಮಹಿಳಾ ಸಮಾಜ ಕಾಂಪ್ಲೆಕ್ಸ್ ಪ್ರವಾಸಿ ಮಂದಿರ ರಸ್ತೆ, ದಾವಣಗೆರೆ.
98455 28898, 99642 62725

ಸೈಟುಗಳು ಮಾರಾಟಕ್ಕಿವೆ
KHBಯಲ್ಲಿ 40x60 ಪಶ್ಚಿಮ 40x60 ಪೂರ್ವ, 30x40 ಉತ್ತರ, 30x40 ಪಶ್ಚಿಮ, 30x40 ಪೂರ್ವ, 30x40 ಪೂರ್ವ ಈ ಅಳತೆಯ ಸೈಟುಗಳು ಯೋಗ್ಯ ಬೆಲೆಯಲ್ಲಿ ಮಾರಾಟಕ್ಕಿವೆ. ಸಂಪರ್ಕಿಸಿ :
98869 56452

ಮನೆ ಮಾರಾಟಕ್ಕಿದೆ
20x30 ಪೂರ್ವ ದಿಕ್ಕಿನ ಮನೆ ಎಸ್.ಎಸ್. ಹೈ-ಟೆಕ್ ಹಿಂಭಾಗ. ಮಾಲೀಕರು
97388 79753

ಜಾಗ ಬಾಡಿಗೆಗೆ ಇದೆ
20x100 ಅಳತೆಯ 15 HP Power Supply ಇರುವ ಜಾಗ ಕೈಗಾರಿಕಾ ಉಪಯೋಗಕ್ಕೆ ಬಾಡಿಗೆಗೆ ಇದೆ. ಪಿ.ಬಿ. ರೋಡ್, ಹುಂಡೈ ಶೋರೂಂ ಪಕ್ಕ ಆವರಗೆರೆ, ಪೂನಾ-ಬೆಂಗಳೂರು ರೋಡ್.
72045 77823

ಬೇಕಾಗಿದ್ದಾರೆ
ಕಂಪ್ಯೂಟರ್ ಆಪರೇಟರ್, ಆಫೀಸ್ ಅಸಿಸ್ಟೆಂಟ್ ಹುದ್ದೆಗೆ ಲೇಡಿಸ್ ಬೇಕಾಗಿದ್ದಾರೆ.
M : 91108 98377


## ದಾವಣಗೆರೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ., ದಾವಣಗೆರೆ

ನಂ. 311, 'ಎ' ಬ್ಯಾಂಕ್, ಶ್ರೀ ಡಿ. ದೇವರಾಜ ಅರಸ್ ಬಡಾವಣೆ, ಪಿ.ಬಿ. ರಸ್ತೆ, ದಾವಣಗೆರೆ – 577 006.
ದೂರವಾಣಿ: 08192–237691, ಫ್ಯಾಕ್ಸ್ ಸಂಖ್ಯೆ: 08192–232202, ಇ–ಮೇಲ್: ceo@ddccbank.co.in

ನಂ.: ಆಸಿವಿಭಾಗ/ನೇಮಕಾತಿ/ /2022–23. ದಿನಾಂಕ: 02.05.2022

### ಪ್ರಕಟಣೆ

ದಾವಣಗೆರೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ., ದಾವಣಗೆರೆ ಇದರಲ್ಲಿ ಖಾಲಿ ಇರುವ ಈ ಕೆಳಕಂಡ ಹುದ್ದೆಗಳ ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಮುಖಾಂತರ (online) ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಇಚ್ಛೆಯುಳ್ಳ ಅಭ್ಯರ್ಥಿಗಳು ಬ್ಯಾಂಕಿನ ಅಧಿಕೃತ ವೆಬ್‌ಸೈಟ್ **www.ddccbank.co.in** ನಲ್ಲಿ ನೀಡಿರುವ ಲಿಂಕ್ ಮುಖಾಂತರ ಅರ್ಜಿಯನ್ನು ಸಲ್ಲಿಸತಕ್ಕದ್ದು. ಅರ್ಜಿಗಳನ್ನು ಖುದ್ದಾಗಿ / ಅಂಚೆ / ಕೊರಿಯರ್ ಇತ್ಯಾದಿ ಮೂಲಕ ಕಳುಹಿಸಲು ಅವಕಾಶವಿರುವುದಿಲ್ಲ. ಅರ್ಜಿಯನ್ನು ಸಲ್ಲಿಸಲು ಕೊನೆಯ **ದಿನಾಂಕ: 01.06.2022ರ ರಾತ್ರಿ 11.59**ರವರೆಗೆ ಇರುತ್ತದೆ. ನೇಮಕಾತಿ ಮಾಡಲು ಉದ್ದೇಶಿಸಿರುವ 48 ವಿವಿಧ ಹುದ್ದೆಗಳನ್ನು ಸರ್ಕಾರಿ ಆದೇಶದ ಪ್ರಕಾರ ಈ ಕೆಳಕಂಡಂತೆ ವರ್ಗೀಕರಿಸಿ ಮೀಸಲಿರಿಸಲಾಗಿದೆ.

ಹುದ್ದೆಗಳ ವಿವರ

| ಕ್ರ. ಸಂ. | ಹುದ್ದೆಯ ಹೆಸರು | ಒಟ್ಟು ಹುದ್ದೆಗಳು | ವರ್ಗಗಳ ವಿವರ | ಒಟ್ಟು ಹುದ್ದೆಗಳು | ಸಾಮಾನ್ಯ | ಮಹಿಳಾ ಅಭ್ಯರ್ಥಿ | ಗ್ರಾಮೀಣ ಅಭ್ಯರ್ಥಿ | ಮಾಜಿ ಸೈನಿಕ | ಕ. ಮಾಧ್ಯಮ ಅಭ್ಯರ್ಥಿ | ಯೋ. ನಿರಾಶ್ರಿತ | ಅಂಗವಿಕಲ ಅಭ್ಯರ್ಥಿ | ತೃತೀಯ ಲಿಂಗ |
|---|---|---|---|---|---|---|---|---|---|---|---|---|
| 1 | ಕಿರಿಯ ಸಹಾಯಕರು / ಕಿರಿಯ ಕ್ಷೇತ್ರಾಧಿಕಾರಿಗಳು | 29 | ಸಾಮಾನ್ಯ | 15 | 2 | 5 | 3 | 2 | 1 | 1 | 1 | – |
| | | | ಪ. ಜಾತಿ | 4 | 1 | 1 | 1 | – | – | – | 1 | – |
| | | | ಪ. ಪಂಗಡ | 1 | – | 1 | – | – | – | – | – | – |
| | | | ಪ್ರವರ್ಗ–1 | 1 | – | 1 | – | – | – | – | – | – |
| | | | ಪ್ರವರ್ಗ–2ಎ | 5 | 1 | 1 | 2 | – | – | – | 1 | – |
| | | | ಪ್ರವರ್ಗ–2ಬಿ | 1 | – | 1 | – | – | – | – | – | – |
| | | | ಪ್ರವರ್ಗ–3ಎ | 1 | – | 1 | – | – | – | – | – | – |
| | | | ಪ್ರವರ್ಗ–3ಬಿ | 1 | – | 1 | – | – | – | – | – | – |
| | | | ಒಟ್ಟು | 29 | 4 | 12 | 6 | 2 | 1 | 1 | 3 | – |
| 2 | ಕಂಪ್ಯೂಟರ್ ಇಂಜಿನಿಯರ್ | 01 | ಪ. ಜಾತಿ | 1 | 1 | – | – | – | – | – | – | – |
| 3 | ಕಂಪ್ಯೂಟರ್ ಆಪರೇಟರ್ | 01 | ಸಾಮಾನ್ಯ | 1 | 1 | – | – | – | – | – | – | – |
| 4 | ವಾಹನ ಚಾಲಕರು | 01 | ಪ. ಪಂಗಡ | 1 | 1 | – | – | – | – | – | – | – |
| 5 | ಕಿರಿಯ ಸೇವಕರು (ಅಟೆಂಡರ್) | 16 | ಸಾಮಾನ್ಯ | 8 | 1 | 3 | 3 | 1 | – | – | – | – |
| | | | ಪ. ಜಾತಿ | 2 | – | – | 1 | – | – | – | 1 | – |
| | | | ಪ. ಪಂಗಡ | – | – | – | – | – | – | – | – | – |
| | | | ಪ್ರವರ್ಗ–1 | – | – | – | – | – | – | – | – | – |
| | | | ಪ್ರವರ್ಗ–2ಎ | 3 | – | 1 | 1 | – | – | – | 1 | – |
| | | | ಪ್ರವರ್ಗ–2ಬಿ | 1 | 1 | – | – | – | – | – | – | – |
| | | | ಪ್ರವರ್ಗ–3ಎ | 1 | 1 | – | – | – | – | – | – | – |
| | | | ಪ್ರವರ್ಗ–3ಬಿ | 1 | 1 | – | – | – | – | – | – | – |
| | | | ಒಟ್ಟು | 16 | 4 | 4 | 5 | 1 | – | – | 2 | – |
| | ಒಟ್ಟು | 48 | | | | | | | | | | |

**ವೇತನ ಶ್ರೇಣಿ:**

1) ಕಿರಿಯ ಸಹಾಯಕರು / ಕಿರಿಯ ಕ್ಷೇತ್ರಾಧಿಕಾರಿಗಳು: ರೂ. 30350–750–32600–850–36000–950–39800–1100–46400–1250–53900–1450–58250.
2) ಕಂಪ್ಯೂಟರ್ ಇಂಜಿನಿಯರ್: ರೂ. 33450–850–36000–950–39800–1100–46400–1250–53900–1450–62600.
3) ಕಂಪ್ಯೂಟರ್ ಆಪರೇಟರ್: ರೂ. 30350–750–32600–850–36000–950–39800–1100–46400–1250–53900–1450–58250.
4) ವಾಹನ ಚಾಲಕರು: ರೂ. 27650–650–29600–750–32600–850–36000–950–39800–1100–46400–1250–52650.
5) ಅಟೆಂಡರ್: ರೂ. 23500–550–24600–600–27000–650–29600–750–32600–850–36000–950–39800–1100–46400–1250–47650.

**ವಿದ್ಯಾರ್ಹತೆ:**

**1) ಕಿರಿಯ ಸಹಾಯಕರು/ಕಿರಿಯ ಕ್ಷೇತ್ರಾಧಿಕಾರಿಗಳು:**
1. ಹುದ್ದೆಗೆ ಅರ್ಜಿ ಸಲ್ಲಿಸಲು ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಯಾವುದೇ ಪದವಿಯಲ್ಲಿ ಉತ್ತೀರ್ಣರಾಗಿರಬೇಕು.
2. ಕಂಪ್ಯೂಟರ್ ಹಾಗೂ ಸಹಕಾರ ವಿಷಯದಲ್ಲಿ ಅಧ್ಯಯನ, ಜ್ಞಾನ ಮತ್ತು ಅನುಭವ ಪಡೆದವರಿಗೆ ಆದ್ಯತೆ ನೀಡಲಾಗುವುದು.
3. ಅಭ್ಯರ್ಥಿಗಳಿಗೆ ಕನ್ನಡ, ಇಂಗ್ಲೀಷ್ ಭಾಷಾ ಪರಿಜ್ಞಾನ ಹಾಗೂ ಕಂಪ್ಯೂಟರ್ ಪರಿಜ್ಞಾನ (ನಿರ್ವಹಣೆ) ಕುರಿತಂತೆ ತಿಳುವಳಿಕೆ ಕಡ್ಡಾಯವಾಗಿರುತ್ತದೆ.

**2) ಕಂಪ್ಯೂಟರ್ ಇಂಜಿನಿಯರ್:**
1. ಹುದ್ದೆಗೆ ಅರ್ಜಿ ಸಲ್ಲಿಸಲು ಮಾನ್ಯತೆ ಪಡೆದ ವಿಶ್ವವಿದ್ಯಾಲಯದ ಕಂಪ್ಯೂಟರ್ ಪ್ರೊಗ್ರಾಮರ್, ಬಿ.ಇ. ಸಿ.ಎಸ್., ಇ&ಸಿ ಮತ್ತು ಇ&ಇ ಇಂಜಿನಿಯರಿಂಗ್ / ಎಂ.ಸಿ.ಎ. ಪದವಿಯಲ್ಲಿ ಉತ್ತೀರ್ಣರಾಗಿರಬೇಕು.
2. ಅಭ್ಯರ್ಥಿಗಳಿಗೆ ಕನ್ನಡ, ಇಂಗ್ಲೀಷ್ ಭಾಷಾ ಪರಿಜ್ಞಾನ ಕುರಿತಂತೆ ತಿಳುವಳಿಕೆ ಕಡ್ಡಾಯವಾಗಿರುತ್ತದೆ. ಕಂಪ್ಯೂಟರ್ ಪರಿಜ್ಞಾನ, ನಿರ್ವಹಣೆ ಕುರಿತಂತೆ ತಿಳುವಳಿಕೆ ಕಡ್ಡಾಯವಾಗಿರುತ್ತದೆ.

**3) ಕಂಪ್ಯೂಟರ್ ಆಪರೇಟರ್:**
1. ದ್ವಿತೀಯ ಪಿ.ಯು.ಸಿ.ಯಲ್ಲಿ ಉತ್ತೀರ್ಣರಾಗಿರಬೇಕು ಅಥವಾ ಮೂರು ವರ್ಷದ ಡಿಪ್ಲೋಮಾ ಇನ್ ಕಮರ್ಷಿಯಲ್ ಪ್ರಾಕ್ಟೀಸ್‌ನಲ್ಲಿ ಉತ್ತೀರ್ಣರಾಗಿರಬೇಕು.
2. ಕನ್ನಡ ಮತ್ತು ಇಂಗ್ಲೀಷ್ ಬೆರಳಚ್ಚು ಮಾಡಲು ಕಂಪ್ಯೂಟರ್ ಜ್ಞಾನ ಹೊಂದಿರುವ ಬಗ್ಗೆ ಪ್ರಮಾಣ ಪತ್ರ ಹಾಜರುಪಡಿಸಬೇಕು / ಸಲ್ಲಿಸಬೇಕು.
3. ಕನ್ನಡ ಭಾಷೆ ಓದಲು ಮತ್ತು ಬರೆಯಲು ಕಡ್ಡಾಯವಾಗಿ ಬರತಕ್ಕದ್ದು.

**4) ವಾಹನ ಚಾಲಕರು:**
1. ಕನಿಷ್ಠ 10 ನೇ ತರಗತಿ/ಎಸ್.ಎಸ್.ಎಲ್.ಸಿ.ಯಲ್ಲಿ ಉತ್ತೀರ್ಣರಾಗಿರಬೇಕು ಹಾಗೂ ಊರ್ಜಿತ ಲಘು ವಾಹನ ಚಾಲನೆಯ ಲೈಸೆನ್ಸ್, ಬ್ಯಾಡ್ಜ್ ಹೊಂದಿರತಕ್ಕದ್ದು.
2. ಕನ್ನಡ ಭಾಷೆ ಕಡ್ಡಾಯವಾಗಿ ಕಲಿತಿರತಕ್ಕದ್ದು.

**5) ಕಿರಿಯ ಸೇವಕರು (ಅಟೆಂಡರ್) :**
1. ಹುದ್ದೆಗೆ ಅರ್ಜಿ ಸಲ್ಲಿಸಲು ಎಸ್.ಎಸ್.ಎಲ್.ಸಿ.ಯಲ್ಲಿ ಉತ್ತೀರ್ಣರಾಗಿರಬೇಕು.
2. ಅಭ್ಯರ್ಥಿಗಳು ಕನ್ನಡ ಭಾಷೆ ಕಡ್ಡಾಯವಾಗಿ ಕಲಿತಿರತಕ್ಕದ್ದು.

ಪರೀಕ್ಷಾ ವಿಧಾನ

| ಕ್ರ.ಸಂ. | ವಿವರಗಳು | ಅಂಕಗಳು |
|---|---|---|
| 1 | ಕನ್ನಡ ಭಾಷಾ ಜ್ಞಾನ | 50 |
| 2 | ಸಾಮಾನ್ಯ ಜ್ಞಾನ | 25 |
| 3 | ಇಂಗ್ಲೀಷ್ ಭಾಷಾ ಜ್ಞಾನ | 25 |
| 4 | ಸಹಕಾರಿ ವಿಷಯಗಳಿಗೆ ಸಂಬಂಧಪಟ್ಟಂತೆ | 50 |
| 5 | ಭಾರತದ ಸಂವಿಧಾನ | 25 |
| 6 | ಬ್ಯಾಂಕಿಂಗ್ ಕ್ಷೇತ್ರದ ಬಗ್ಗೆ. | 25 |
| | ಒಟ್ಟು | 200 |

**ವಯೋಮಿತಿ:**
ಅಭ್ಯರ್ಥಿಯು ಅರ್ಜಿಯನ್ನು ಸಲ್ಲಿಸಲು ನಿಗಧಿಪಡಿಸಿರುವ ಕೊನೆಯ ದಿನಾಂಕಕ್ಕೆ ಈ ಕೆಳಗಿನಂತೆ ವಯೋಮಿತಿಯನ್ನು ಹೊಂದಿರಬೇಕು ಹಾಗೂ ನಿಗಧಿತ ಗರಿಷ್ಠ ವಯೋಮಿತಿಯನ್ನು ಮೀರಿರಬಾರದು.

| ವರ್ಗೀಕರಣ ವಿವರ | ಕನಿಷ್ಠ | ಗರಿಷ್ಠ |
|---|---|---|
| ಸಾಮಾನ್ಯ ವರ್ಗ | 18 | 35 |
| ಇತರೆ ಹಿಂದುಳಿದ ವರ್ಗ | 18 | 38 |
| ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ–1ರ | 18 | 40 |

ಸರ್ಕಾರಿ ಆದೇಶದ ಅನುಸಾರ ಮಾಜಿ ಸೈನಿಕರಿಗೆ ಸೈನ್ಯದಲ್ಲಿ ಸಲ್ಲಿಸಿದ ಸೇವೆಯನ್ನು ಕಳೆದು ಆಯಾ ವರ್ಗಕ್ಕೆ ನಿಗದಿಪಡಿಸಿದ ವಯೋಮಿತಿಯೊಳಗಿರಬೇಕು. ವಿಧವೆಯರಿಗೆ ಮತ್ತು ದೈಹಿಕ ಅಂಗವಿಕಲರಿಗೆ ವಯೋಮಿತಿಯಲ್ಲಿ 10 ವರ್ಷಗಳ ಸಡಿಲಿಕೆ ಇರುತ್ತದೆ.

**ಆಯ್ಕೆ ವಿಧಾನ:**

**1) ಕಿರಿಯ ಸಹಾಯಕರು / ಕಂಪ್ಯೂಟರ್ ಇಂಜಿನಿಯರ್ / ಕಂಪ್ಯೂಟರ್ ಆಪರೇಟರ್.**
ಬ್ಯಾಂಕಿಗೆ ಬರುವ ಒಟ್ಟು ಅರ್ಜಿಗಳನ್ನು ಪರಿಶೀಲಿಸಿ, ಅರ್ಹ ಅಭ್ಯರ್ಥಿಗಳಿಗೆ ಲಿಖಿತ ಪರೀಕ್ಷೆ ನಡೆಸಲಾಗುವುದು. ಲಿಖಿತ ಪರೀಕ್ಷೆಯಲ್ಲಿ ಪಡೆದ ಅಂಕಗಳ ಆಧಾರದ ಮೇಲೆ ಅರ್ಹತಾ ಪಟ್ಟಿಯನ್ನು ತಯಾರಿಸಿ 1:5ರ ಅನುಪಾತದಲ್ಲಿ ಸಂದರ್ಶನಕ್ಕೆ ಕರೆಯಲಾಗುವುದು. ಸಂದರ್ಶನಕ್ಕೆ ನಿಗಧಿಪಡಿಸಲಾದ ಅಂಕಗಳು 15. ಲಿಖಿತ ಪರೀಕ್ಷೆಯಲ್ಲಿ ಪಡೆದ ಸರಾಸರಿ ಅಂಕಗಳನ್ನು ಶೇ.85% ಕ್ಕೆ ಇಳಿಸಿ, ಪ್ರಾಪ್ತವಾಗುವ ಅಂಕಗಳ ಜೊತೆಗೆ ಸಂದರ್ಶನದಲ್ಲಿ ಗಳಿಸಿದ ಅಂಕಗಳನ್ನು ಕೂಡಿಸಿ ಅರ್ಹತಾ ಪಟ್ಟಿಯನ್ನು ತಯಾರಿಸಿ (Merit List) ಮೀಸಲಾತಿ ನಿಯಮಗಳನ್ನು ಅನುಸರಿಸಿ ಆಯ್ಕೆ ಪಟ್ಟಿಯನ್ನು ಸಿದ್ಧಪಡಿಸಿ ನೇಮಕಾತಿ ಮಾಡಿಕೊಳ್ಳಲಾಗುವುದು.

**2) ವಾಹನ ಚಾಲಕರು/ಕಿರಿಯ ಸೇವಕರು (ಅಟೆಂಡರ್).**
ಬ್ಯಾಂಕಿಗೆ ಬರುವ ಒಟ್ಟು ಅರ್ಜಿಗಳನ್ನು ಪರಿಶೀಲಿಸಿ, ಮೇಲ್ಕಂಡ ಹುದ್ದೆಗಳಿಗಾಗಿ ನಿರ್ದಿಷ್ಟ ಪಡಿಸಲಾದ ವಿದ್ಯಾರ್ಹತೆಯ ಲಿಖಿತ ಪರೀಕ್ಷೆಯಲ್ಲಿ ಪಡೆದುಕೊಂಡ ಪ್ರತಿಶತ ಅಂಕಗಳ ಆಧಾರದ ಮೇಲೆ 1:5 ರ ಅನುಪಾತದಲ್ಲಿ ನೇರ ಸಂದರ್ಶನಕ್ಕೆ ಕರೆಯಲಾಗುವುದು. ಸಂದರ್ಶನಕ್ಕೆ ನಿಗಧಿಪಡಿಸಲಾದ ಅಂಕಗಳು 15. ಲಿಖಿತ ಪರೀಕ್ಷೆಯಲ್ಲಿ ಪಡೆದ ಸರಾಸರಿ ಅಂಕಗಳನ್ನು ಶೇ. 85% ಕ್ಕೆ ಇಳಿಸಿ, ಪ್ರಾಪ್ತವಾಗುವ ಅಂಕಗಳ ಜೊತೆಗೆ ಸಂದರ್ಶನದಲ್ಲಿ ಗಳಿಸಿದ ಅಂಕಗಳನ್ನು ಕೂಡಿಸಿ ಅರ್ಹತಾ ಪಟ್ಟಿಯನ್ನು ತಯಾರಿಸಿ (Merit List) ಮೀಸಲಾತಿ ನಿಯಮಗಳನ್ನು ಅನುಸರಿಸಿ ಆಯ್ಕೆ ಪಟ್ಟಿಯನ್ನು ಸಿದ್ಧಪಡಿಸಿ ನೇಮಕಾತಿ ಮಾಡಿಕೊಳ್ಳಲಾಗುವುದು.

**ಅರ್ಜಿ ಶುಲ್ಕ:**
ಸಾಮಾನ್ಯ / ಇತರೆ ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ ರೂ. 1000/–ಗಳನ್ನು ಮತ್ತು ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ / ಪ.ವರ್ಗ–1ಕ್ಕೆ ಸೇರಿದ ಅಭ್ಯರ್ಥಿಗಳಿಗೆ ರೂ. 500/–ಗಳ ಅರ್ಜಿ ಶುಲ್ಕವನ್ನು ಪಾವತಿಸುವುದಕ್ಕೆ ಈ ಕೆಳಕಂಡ ವಿಧಾನಗಳಲ್ಲಿ ಯಾವುದಾದರೊಂದನ್ನು ಆಯ್ಕೆ ಮಾಡಿಕೊಳ್ಳಬಹುದು. Payment using Net Banking, credit card, Debit card, UPI ಮೂಲಕ ಶುಲ್ಕವನ್ನು ನಿಗಧಿಪಡಿಸಿದ ಅಂತಿಮ ದಿನಾಂಕ **01.06.2022ರ ರಾತ್ರಿ 11.59** ರ ಒಳಗಾಗಿ ಪಾವತಿಸತಕ್ಕದ್ದು, ಇದನ್ನು ಹೊರತುಪಡಿಸಿ ಡಿಡಿ / ಪೋಸ್ಟಲ್ ಆರ್ಡರ್ / ಮನಿಯಾರ್ಡರ್ ಇವುಗಳನ್ನು ಸ್ವೀಕರಿಸಲಾಗುವುದಿಲ್ಲ ಹಾಗೂ ಅರ್ಜಿ ಶುಲ್ಕ ನಿಗಧಿಪಡಿಸಿದ **ದಿನಾಂಕ** ಮತ್ತು ಸಮಯದೊಳಗಾಗಿ ಸಲ್ಲಿಸದೇ ಇರುವಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

**–: ಸೂಚನೆಗಳು :–**

1) ಅಭ್ಯರ್ಥಿಗಳಿಗೆ ಕನ್ನಡ ಭಾಷಾ ಪರಿಜ್ಞಾನ ಅತ್ಯವಶ್ಯಕವಾಗಿರುತ್ತದೆ.
2) ಅರ್ಜಿದಾರರು ಪ್ರತಿಯೊಂದು ದಾಖಲಾತಿಗಳನ್ನು ಪತ್ರಾಂಕಿತ (ಗೆಜೆಟೆಡ್ ಅಧಿಕಾರಿ) ಅಧಿಕಾರಿಗಳಿಂದ ದೃಢೀಕರಿಸಿ ಆನ್‌ಲೈನ್ ಮೂಲಕ ಸಲ್ಲಿಸಬೇಕು.
3) ಅರ್ಜಿದಾರರು ತಪ್ಪು ಮಾಹಿತಿ ನೀಡಿದ್ದಲ್ಲಿ ಅಥವಾ ಸಮರ್ಪಕ ಮಾಹಿತಿ ನೀಡದಿದ್ದಲ್ಲಿ ಅಂತಹ ಅರ್ಜಿಗಳು ತಿರಸ್ಕೃತವಾಗುತ್ತವೆ.
4) ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗದ ಹಾಗೂ ಇನ್ನಿತರೆ ಮೀಸಲಾತಿ ಸೌಲಭ್ಯ ಪಡೆಯಲು ಇಚ್ಛಿಸುವವರು, ಸರ್ಕಾರ ನಿಗಧಿಪಡಿಸಿದ ನಮೂನೆಯಲ್ಲಿ ಸಂಬಂಧಿಸಿದ ಪ್ರಾಧಿಕಾರದಿಂದ ದೃಢೀಕರಣ ಪತ್ರ ಪಡೆದು ಅದರ ಪ್ರತಿಯನ್ನು ಪತ್ರಾಂಕಿತ (ಗೆಜೆಟೆಡ್ ಅಧಿಕಾರಿ) ಅಧಿಕಾರಿಗಳಿಂದ ದೃಢೀಕರಿಸಿ ಅನ್‌ಲೈನ್ ಮೂಲಕ ಸಲ್ಲಿಸಬೇಕು.
5) ಕಿರಿಯ ಸಹಾಯಕರು/ಕಿರಿಯ ಕ್ಷೇತ್ರಾಧಿಕಾರಿಗಳ ಮತ್ತು ಕಂಪ್ಯೂಟರ್ ಇಂಜಿನಿಯರ್ ಹುದ್ದೆಗೆ ಸಲ್ಲಿಸುವ ಅಭ್ಯರ್ಥಿಗಳು ಪದವಿಯ ಎಲ್ಲಾ ವರ್ಷಗಳ / ಸೆಮಿಸ್ಟರ್‌ಗಳ ಅಂಕಪಟ್ಟಿಗಳ ಪ್ರತಿಗಳನ್ನು ಪತ್ರಾಂಕಿತ (ಗೆಜೆಟೆಡ್ ಅಧಿಕಾರಿ) ಅಧಿಕಾರಿಗಳಿಂದ ದೃಢೀಕರಿಸಿ ಆನ್‌ಲೈನ್ ಮೂಲಕ ಸಲ್ಲಿಸಬೇಕು.
6) ಕಂಪ್ಯೂಟರ್ ಆಪರೇಟರ್, ವಾಹನ ಚಾಲಕರು ಮತ್ತು ಕಿರಿಯ ಸೇವಕರು (ಅಟೆಂಡರ್) ಹುದ್ದೆಗೆ ಸಲ್ಲಿಸುವ ಅಭ್ಯರ್ಥಿಗಳು ಅಂಕಪಟ್ಟಿಗಳ ಪ್ರತಿಗಳನ್ನು ಪತ್ರಾಂಕಿತ (ಗೆಜೆಟೆಡ್ ಅಧಿಕಾರಿ) ಅಧಿಕಾರಿಗಳಿಂದ ದೃಢೀಕರಿಸಿ ಆನ್‌ಲೈನ್ ಮೂಲಕ ಸಲ್ಲಿಸಬೇಕು.
7) ಜನ್ಮ ದಿನಾಂಕದ ದೃಢೀಕರಣಕ್ಕಾಗಿ ಎಸ್.ಎಸ್.ಎಲ್.ಸಿ. ಅಂಕಪಟ್ಟಿ / ಶಾಲಾ ವರ್ಗಾವಣೆ ಪ್ರಮಾಣ ಪತ್ರ ಅಥವಾ ಕ್ಯುಮ್ಯೂಲೇಟಿವ್ ರೆಕಾರ್ಡ್ ಅದರ ಪ್ರತಿಯನ್ನು ಪತ್ರಾಂಕಿತ (ಗೆಜೆಟೆಡ್ ಅಧಿಕಾರಿ) ಅಧಿಕಾರಿಗಳಿಂದ ದೃಢೀಕರಿಸಿ ಆನ್‌ಲೈನ್ ಮೂಲಕ ಸಲ್ಲಿಸಬೇಕು.
8) ಅಭ್ಯರ್ಥಿಗಳು ಈಗಾಗಲೇ ಯಾವುದಾದರೂ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಲ್ಲಿ ಅಂತಹ ಸಂಸ್ಥೆಯ ಮುಖ್ಯಸ್ಥರ ಅನುಮತಿ ಪತ್ರದ ಪ್ರತಿಯನ್ನ ಅನ್‌ಲೈನ್ ಮೂಲಕ ಸಲ್ಲಿಸಬೇಕು.
9) ಗ್ರಾಮೀಣ / ಮಾಜಿ ಸೈನಿಕ / ಕನ್ನಡ ಮಾಧ್ಯಮ / ಯೋಜನಾ ನಿರಾಶ್ರಿತ / ಅಂಗವಿಕಲ / ವಿಧವಾ ಅಭ್ಯರ್ಥಿಗಳು ಪ್ರಸ್ತುತ ಚಾಲ್ತಿಯಲ್ಲಿರುವ ನಿಬಂಧನೆಗೊಳಪಟ್ಟು ಸಕ್ಷಮ ಪ್ರಾಧಿಕಾರದಿಂದ ಪಡೆದ ಪ್ರಮಾಣ ಪತ್ರ ಆನ್‌ಲೈನ್ ಮೂಲಕ ಸಲ್ಲಿಸಬೇಕು.
10) ಅಭ್ಯರ್ಥಿಗಳು ಕಿರಿಯ ಸಹಾಯಕರು/ಕಿರಿಯ ಕ್ಷೇತ್ರಾಧಿಕಾರಿಗಳು, ಕಂಪ್ಯೂಟರ್ ಇಂಜಿನಿಯರ್, ಕಂಪ್ಯೂಟರ್ ಆಪರೇಟರ್, ವಾಹನ ಚಾಲಕರು ಮತ್ತು ಕಿರಿಯ ಸೇವಕರು (ಅಟೆಂಡರ್) ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಇಚ್ಛಿಸಿದಲ್ಲಿ ಆಯಾ ಹುದ್ದೆಗಳಿಗೆ ಪ್ರತ್ಯೇಕ ಅರ್ಜಿ ಮತ್ತು ನಿಗಧಿತ ಶುಲ್ಕವನ್ನು ಪಾವತಿಸತಕ್ಕದ್ದು.
11) ಅಭ್ಯರ್ಥಿಗಳು ಇಬ್ಬರು ಸ್ಥಳೀಯ ಗಣ್ಯ ವ್ಯಕ್ತಿಗಳಿಂದ ಗುಣ ನಡತೆಯ ಬಗ್ಗೆ ಪಡೆದ ಪ್ರಮಾಣ ಪತ್ರವನ್ನು ಆನ್‌ಲೈನ್ ಮೂಲಕ ಸಲ್ಲಿಸಬೇಕು.
12) ನೇಮಕಾತಿ ಪ್ರಕ್ರಿಯೆಯನ್ನು ಯಾವುದೇ ಸಂದರ್ಭದಲ್ಲಿ ಯಾವುದೇ ಕಾರಣವನ್ನು ನೀಡದೇ ಮುಂದೂಡುವ, ರದ್ದುಗೊಳಿಸುವ ಮತ್ತು ನಿಬಂಧನೆಗಳನ್ನು ಬದಲಾಯಿಸುವ ಅಧಿಕಾರವನ್ನು ಬ್ಯಾಂಕಿನ ನೇಮಕಾತಿ ಸಮಿತಿ ಹೊಂದಿರುತ್ತದೆ.
13) ಅಭ್ಯರ್ಥಿಗಳು ಅರ್ಜಿಯನ್ನು ಅವಶ್ಯ ದಾಖಲಾತಿಗಳೊಂದಿಗೆ ಆನ್‌ಲೈನ್ ಮೂಲಕ ಅಪ್‌ಲೋಡ್ ಮಾಡಿದ ಬಳಿಕ ಅರ್ಜಿಯ ಪ್ರತಿಯನ್ನು ಡೌನ್‌ಲೋಡ್ ಮಾಡಿ ಇಟ್ಟುಕೊಳ್ಳತಕ್ಕದ್ದು.
14) ಅರ್ಹ ಅಭ್ಯರ್ಥಿಗಳಿಗೆ ಲಿಖಿತ ಪರೀಕ್ಷೆ / ಸಂದರ್ಶನಕ್ಕೆ ಹಾಜರಾಗಲು ದಿನಾಂಕ, ಸ್ಥಳ ಮತ್ತು ಇತ್ಯಾದಿಗಳ ಮಾಹಿತಿಯನ್ನು ಎಸ್‌ಎಂಎಸ್ ಅಥವಾ ಈಮೇಲ್ ಮೂಲಕ ಕಳುಹಿಸಲಾಗುವುದು. ಅಭ್ಯರ್ಥಿಗಳು ಲಿಖಿತ ಪರೀಕ್ಷೆ / ಸಂದರ್ಶನಕ್ಕೆ ತಮ್ಮ ಸ್ವಂತ ಖರ್ಚಿನಲ್ಲಿ ಹಾಜರಾಗತಕ್ಕದ್ದು.
15) ಆಯ್ಕೆಗೊಂಡ ಅಭ್ಯರ್ಥಿಗಳು ಎರಡು ವರ್ಷ ಅವಧಿಯ ಪರೀಕ್ಷಾರ್ಹ (ಪ್ರೊಬೇಷನರಿ) ಸೇವೆಯಲ್ಲಿರಬೇಕಾಗುತ್ತದೆ.
16) ಆಯ್ಕೆಗೊಂಡ ಅಭ್ಯರ್ಥಿಗಳು ಬ್ಯಾಂಕಿನಿಂದ ಸೂಚಿಸಲ್ಪಟ್ಟಂತೆ ಭದ್ರತಾ ಠೇವಣಿ ಹಾಗೂ ವೈಯುಕ್ತಿಕ ಭದ್ರತೆ ನೀಡಬೇಕಾಗುತ್ತದೆ.
17) ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಏನಾದರೂ ತಾಂತ್ರಿಕ ತೊಂದರೆ ಇದ್ದಲ್ಲಿ **9347510242** ಈ ಸಹಾಯವಾಣಿಗೆ **ಬೆಳಿಗ್ಗೆ 9.00** ರಿಂದ **ಸಂಜೆ 6.00**ರ ವರೆಗೆ ಕರೆ ಮಾಡಬಹುದು. ಹೆಚ್ಚಿನ ವಿವರಗಳಿಗಾಗಿ ವೆಬ್‌ಸೈಟ್ **www.ddccbank.co.in** ನಿಂದ ಪಡೆದುಕೊಳ್ಳಬಹುದು.

**ಸ್ಥಳ: ದಾವಣಗೆರೆ**
**ದಿನಾಂಕ: 02.05.2022**

**ಸಹಿ/– ಸದಸ್ಯ ಕಾರ್ಯದರ್ಶಿ ಸಿಬ್ಬಂದಿ ನೇಮಕಾತಿ ಸಮಿತಿ ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ದಾವಣಗೆರೆ ಜಿಲ್ಲಾ ಕೇಂದ್ರ ಸಹಕಾರ ನಿ., ದಾವಣಗೆರೆ**

# ಜಗಜ್ಯೋತಿ ಬಸವೇಶ್ವರ : ಪ್ರಸ್ತುತತೆ

**(3ನೇ ಪುಟದಿಂದ)** ಡಿಸೆಂಬರ್ 10 ರಂದು ಘೋಷಿಸಿದ 30 ಮಾನವ ಹಕ್ಕುಗಳ ಅಂಶಗಳು ವಚನಗಳಲ್ಲಿ ಹುದುಗಿಕೊಂಡಿರುವುದು, ವಚನಗಳ ಶ್ರೇಷ್ಠತೆಗೆ ನಿದರ್ಶನವಾಗಿದೆ.

**ಪ್ರಸ್ತುತತೆ :** ಬಸವಣ್ಣನವರು ಕಲ್ಪಿಸಿದ್ದು ಕಲ್ಯಾಣ ರಾಜ್ಯ, ಅವರ ವಿಶ್ವ ಸಂದೇಶದಲ್ಲಿ ಜಾತಿ-ಮತ, ಪಂಥ-ಪಂಗಡಗಳ ಜಂಜಾಟವಿಲ್ಲ. ಮೇಲು-ಕೀಳುಗಳ ಮಡಿವಂತಿಕೆ ಇಲ್ಲ, ವರ್ಣ-ವರ್ಗಗಳ ಭೇದವಿಲ್ಲ; ಪೂಜಾರಿ-ಪುರೋಹಿತರ ಪಾರುಪತ್ಯೆಯಿಲ್ಲ; ಹೆದರಿಕೆ-ಬೆದರಿಕೆಗಳ ಹಿಂಸೆಯಿಲ್ಲ; ಗುಡಿ-ಗುಂಡಾರಗಳ ಗ್ರಹಣವಿಲ್ಲ, ಶಾಸ್ತ್ರ-ಸಂಪ್ರದಾಯಗಳ ಸಂಕೋಲೆ ಇಲ್ಲ, ಪೂರ್ವಾಗ್ರಹ ಪೀಡೆಯಲ್ಲ, ಅದು ಪೂರ್ಣ ಮುಕ್ತ; ಪಾರದರ್ಶಕ; ಪ್ರಜಾಸತ್ತಾತ್ಮಕ.

ಬಸವಣ್ಣನವರ ಪ್ರಗತಿಪರ ಮತ್ತು ವೈಚಾರಿಕ ಚಿಂತನೆಗಳು 21ನೇ ಶತಮಾನಕ್ಕೆ ಪ್ರಸ್ತುತವಾಗಿವೆ. ಬೌದ್ಧಿಕ ದಾರಿದ್ರ್ಯ ಮತ್ತು ಹೈಬ್ರಿಡ್ ಚಿಂತನೆಗಳಿಂದ ಮಾನವನ ವರ್ತನೆಗಳು ಅನಾಗರಿಕವಾಗುತ್ತಾ ಇವೆ. ಮುಖವಾಡದ ವ್ಯಕ್ತಿಗಳೇ ವಿಜೃಂಭಿಸುತ್ತಿರುವ ಈ ಸಂದರ್ಭದಲ್ಲಿ, ಆದರ್ಶದ ಬೀಜಗಳು ಮೊಳಕೆಯೊಡೆದು ಬೆಳೆಯಬೇಕಾದ ತೇವಾಂಶದ ಕೊರತೆ ಇದೆ.

ಜಾತಿಯನ್ನಿಡಿದುಕೊಂಡು ಮೈಲಿಗೆಯನ್ನು ಮತ್ತು ದೀಪವನ್ನಿಡಿದುಕೊಂಡು ಕತ್ತಲೆಯನ್ನುಡುಕುತ್ತಿರುವ ಹುಚ್ಚ ಮನಸ್ಸಿನ ಮಾನವರ ಅಂತರಂಗದ ಅರಿವಿಗೆ ಮತ್ತು ರೋಗಗ್ರಸ್ತ ಸಮಾಜಕ್ಕೆ ಬಸವ ತತ್ವ ದಿವ್ಯೌಷಧಿ.

ಬಸವಣ್ಣನವರ 800ನೇ ಲಿಂಗೈಕ್ಯ ದಿನಾಚರಣೆಯ ನಿಮಿತ್ತ ಭಾರತ ಸರ್ಕಾರದ ಅಂಚೆ ಇಲಾಖೆ ಮೇ 11, 1967 ರಲ್ಲಿ 15 ಪೈಸೆ ಮುಖಬೆಲೆಯುಳ್ಳ 1997 ರಲ್ಲಿ 2 ರೂಪಾಯಿ ಮುಖಬೆಲೆಯುಳ್ಳ ಅಂಚೆಚೀಟಿಗಳನ್ನು ಮುದ್ರಿಸಿತು. ಬಸವಣ್ಣನವರ ಭಾವಚಿತ್ರವುಳ್ಳ 5 ಮತ್ತು 100 ರೂಪಾಯಿ ನಾಣ್ಯಗಳನ್ನು ಡಾ. ಮನಮೋಹನ್‌ಸಿಂಗ್‌ರವರು ಬೆಂಗಳೂರಿನಲ್ಲಿ ಬಿಡುಗಡೆ ಮಾಡಿದರು. ಬಸವಣ್ಣನವರ ಅಶ್ವಾರೂಢ ಮೂರ್ತಿಯನ್ನು ದೆಹಲಿಯ ಪಾರ್ಲಿಮೆಂಟ್ ಭವನದ ಮುಂದೆ 2003 ರ ಏಪ್ರಿಲ್‌ನಲ್ಲಿ ಅನಾವರಣಗೊಳಿಸಲಾಯಿತು. ಸಿದ್ಧರಾಮಯ್ಯ ನವರ ಕರ್ನಾಟಕ ಸರ್ಕಾರ ಎಲ್ಲಾ ಸಾರ್ವಜನಿಕ ಕಛೇರಿ ಮತ್ತು ಸಂಘ-ಸಂಸ್ಥೆಗಳಲ್ಲಿ ಬಸವಣ್ಣನವರ ಫೋಟೋವನ್ನು ಕಡ್ಡಾಯಗೊಳಿಸಿದರು.

ಹರ್ಡೇಕರ್ ಮಂಜಪ್ಪನವರು ದಾವಣಗೆರೆಯಲ್ಲಿದ್ದಾಗ ಶ್ರೀ ಮೃತ್ಯುಂಜಯ ಮಹಾಸ್ವಾಮಿಗಳ ಒಡನಾಟದಿಂದಾಗಿ 1913 ರ ವೈಶಾಖ ಶುದ್ಧ ರೋಹಿಣಿ ನಕ್ಷತ್ರದಂದು ಹಳೆಪೇಟೆಯ ಮಠದಲ್ಲಿ ಪ್ರಥಮ ಬಾರಿಗೆ 'ಬಸವ ಜಯಂತಿ'ಯನ್ನು ಆಚರಿಸಲಾಯಿತು ಎಂದು ಅವರು ತಮ್ಮ ಆತ್ಮಚರಿತ್ರೆಯಲ್ಲಿ ಉಲ್ಲೇಖಿಸಿದ್ದಾರೆ.

ಬಸವ ಜಯಂತಿ ಕೇವಲ ಉಪಚಾರವಾಗಬಾರದು, ಪ್ರದರ್ಶನವಾಗ ಬಾರದು, ಅದು ಅರ್ಥಪೂರ್ಣವಾಗಬೇಕಾದರೆ ಅವರ ತತ್ವಾದರ್ಶಗಳು ನಮ್ಮ ಜೀವನ ಪದ್ಧತಿಯಾಗಬೇಕು. 'ನದಿಯನ್ನು ಹಿಂಬಾಲಿಸಿದರೆ ಸಮುದ್ರವು ದೊರಕುವುದು ಹೇಗೆಯೋ ಹಾಗೆ ಶರಣರ ನುಡಿಗಳನ್ನು ಅನುಸರಿಸಿದರೆ ನಮ್ಮ ಬದುಕು ಅಲ್ಪ ಸತ್ಯದಿಂದ, ಪೂರ್ಣ ಸತ್ಯದೆಡೆಗೆ ಸಾಗುತ್ತದೆ. ''ನುಡಿ ಸಿದ್ಧಾಂತಕ್ಕಿಂತ ನಡೆ ಸಿದ್ಧಾಂತ ಶ್ರೇಷ್ಠ''

# ಹಗರಣಗಳನ್ನು ಮುಚ್ಚಿ ಹಾಕುವ ಪ್ರಶ್ನೆಯೇ ಇಲ್ಲ

**ಪ್ರಾದೇಶಿಕ ಭಾಷೆ ಅವಹೇಳನ ಸಲ್ಲದು**
**- ರವಿಕುಮಾರ್,** ಪರಿಷತ್ ಸದಸ್ಯ

ದಾವಣಗೆರೆ, ಮೇ 1 - ಹಗರಣಗಳನ್ನು ಮುಚ್ಚಿ ಹಾಕುವ ಪ್ರಶ್ನೆ ಇಲ್ಲ. ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ಹುದ್ದೆಗಳ ನೇಮಕಾತಿ ಅಕ್ರಮದ ತನಿಖೆಯನ್ನು ಸರ್ಕಾರ ಮುಕ್ತ ಮನಸ್ಸಿನಿಂದ ಮಾಡುತ್ತಿದೆ ಎಂದು ವಿಧಾನ ಪರಿಷತ್ ಸದಸ್ಯ ಎನ್. ರವಿಕುಮಾರ್ ಹೇಳಿದ್ದಾರೆ.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಯಾವುದೇ ಪಕ್ಷಕ್ಕೆ ಸೇರಿದವರಿದ್ದರೂ ನಿಷ್ಪಕ್ಷಪಾತ ವಾಗಿ ವಿಚಾರಣೆ ನಡೆಸಲಾಗುತ್ತಿದೆ ಎಂದು ತಿಳಿಸಿದರು. ಶಾಸಕ ಪ್ರಿಯಾಂಕ್ ಖರ್ಗೆ ಪ್ರಕರಣದ ತನಿಖೆಗೆ ಸಹಕರಿಸಬೇಕು. ನೋಟಿಸ್ ಕೊಟ್ಟಿದ್ದಕ್ಕೆ ತಾವೇಕೆ ವಿಚಾರಣೆಗೆ ಹಾಜರಾಗಬೇಕು ಎಂದ ವರು ಕೇಳುತ್ತಿದ್ದಾರೆ. ತಮ್ಮಲ್ಲಿರುವ ಮಾಹಿತಿ ಒದಗಿಸಲು ಏಕೆ ಹಿಂದೇಟು ಹಾಕುತ್ತಿದ್ದಾರೆ? ಎಂದವರು ಪ್ರಶ್ನಿಸಿದರು.

ಹಿಂದಿ ಭಾಷೆಯ ವಿಚಾರವಾಗಿ ನಟ ಸುದೀಪ್ ಅವರ ನಿಲುವನ್ನು ಸಮರ್ಥಿಸಿದ ಅವರು, ಭಾಷೆಯ ವಿಷಯದಲ್ಲಿ ವಿವಾದ ಸರಿಯಲ್ಲ ಎಂದು ಹೇಳಿದರು. ಯಾವುದೇ ಪ್ರಾದೇಶಿಕ ಭಾಷೆಯನ್ನು ಅವಹೇಳನ ಅಥವಾ ನಿರ್ಲಕ್ಷ್ಯ ಮಾಡಬಾರದು. ಬಹಳಷ್ಟು ರಾಜ್ಯಗಳ ಪ್ರಾದೇಶಿಕ ಭಾಷೆಗಳು ಒಂದು ರೀತಿಯಲ್ಲಿ ರಾಷ್ಟ್ರೀಯ ಭಾಷೆಗಳೇ ಆಗಿವೆ ಎಂದು ತಿಳಿಸಿದರು.

## ಕಾರ್ಮಿಕರ ಬದುಕು...

ಒಂದೊತ್ತಿನ ಗಂಜಿಗೆ ಮುಂಜಾವಿನಿಂದ
ಸಂಜೆವರೆಗೂ ದುಡಿಯೋರು
ದೇಹದ ಕಣ ಕಣದಿಂದ ಹರಿಸೋರು ಬೆವರು
ದೂರದ ಕೆಲಸಕ್ಕೆ ತೊರೆದೊರು ತವರು
ಕಾಣದ ಊರಲ್ಲಿ ತಮಗೆ ತಾವೇ ಅಪರಿಚಿತರು

ಭಾಷೆ ಬರದ ಸೀಮೆಯಲ್ಲಿ
ಕಾಸಿಗಾಗಿ ದುಡಿಯೋರು
ವಾಸ ಸಿಗದ ಜಾಗದಲ್ಲಿ ಬೀಸೋ ಗಾಳಿಗೆ
ಒಗ್ಗಿಕೊಂಡವರು

ನೆರೆ ಬಂದ ಊರಲ್ಲಿ ಸೆರೆಯಾಗಿ ನಿಂತವರು
ಇದ್ದವರ ಮನೆ ಮುಂದೆ ಇಲ್ಲದಂತೆ ನಿಂತವರು
ಉಳ್ಳವರ ಮಾತಿನಿಂದ ಬಳ್ಳಿಯಂತೆ ಬದುಕಿದವರು
ಎಲ್ಲ ಗೊತ್ತಿದ್ದೂ ಗೊತ್ತಿಲ್ಲದಂತೆ ಬದುಕಿದವರು..

**- ಬಸವರಾಜ ಕರುವಿನ,** ಬಸವನಾಳು.

# ರಾಣೇಬೆನ್ನೂರು ಲಯನ್ಸ್‌ನಿಂದ ಉಚಿತ ಫೂಟ್ ಪಲ್ಸ್ ಥೆರಪಿ ಶಿಬಿರ



ರಾಣೇಬೆನ್ನೂರು, ಮೇ 1- ಇಲ್ಲಿನ ಲಯನ್ಸ್ ಕ್ಲಬ್ ಹಾಗೂ ಕಂಪಾನಿಯೋ ದವರು ಜಂಟಿಯಾಗಿ ಏರ್ಪಡಿಸಿ, ಲಯನ್ಸ್ ಶಾಲೆಯಲ್ಲಿ ವಿವಿಧ ಕಾಯಿಲೆಗಳಿಗೆ ಉಚಿತವಾಗಿ 15 ದಿನಗಳ ಕಾಲ ಚಿಕಿತ್ಸೆ ನೀಡಲು ಫೂಟ್ ಪಲ್ಸ್ ಥೆರಪಿ ಶಿಬಿರವನ್ನು ಶಾಲೆಯ ಅಧ್ಯಕ್ಷ ಎಂ.ಎಸ್. ಅರಕೇರಿ ಉದ್ಘಾಟಿಸಿದರು.

ನಿನ್ನೆ ಆರಂಭಗೊಂಡಿರುವ ಈ ಶಿಬಿರವು ಇದೇ ದಿನಾಂಕ 17 ರವರೆಗೆ ನಡೆಯಲಿದೆ. ಶಿಬಿರದಲ್ಲಿ ಮಧುಮೇಹ, ಅಧಿಕ ರಕ್ತದೊತ್ತಡ, ಸಂಧಿವಾತ, ವೆರಿಕೋಸ್ ವೇನ್, ಸ್ನಾಯು ಸೆಳೆತ, ನಿದ್ರಾಹೀನತೆ, ಬೆನ್ನು ನೋವು, ಬೊಜ್ಜು ನಿವಾರಣೆ ಮುಂತಾದ ಕಾಯಿಲೆಗಳಿಗೆ ಚಿಕಿತ್ಸೆ ಪಡೆಯಬಹುದಾಗಿದೆ ಎಂದು ಎಂ.ಎಸ್. ಅರಕೇರಿ ಹೇಳಿದರು.

ರಕ್ತ ಪರಿಚಲನೆ, ನರಗಳ ಸರಳ ಮತ್ತು ದೀರ್ಘಕಾಲದ ಸಮಸ್ಯೆಗಳನ್ನು ಔಷಧಿ ಹಾಗೂ ಅಡ್ಡ ಪರಿಣಾಮಗಳಿಲ್ಲದೇ ಈ ಚಿಕಿತ್ಸೆಯಿಂದ ನಿವಾರಿಸಬಹುದಾದ ಈ ಥೆರಪಿ 30 ನಿಮಿಷದ ಟಿಇಎನ್‌ಎಸ್ ಮತ್ತು ಇಎಂಎಸ್ ನಿಂದ 5 ಕಿ.ಮೀ. ವಾಕಿಂಗ್ ಮಾಡಿದಷ್ಟು ರಕ್ತ ಸಂಚಾರವಾಗಲಿದೆ ಎಂದು ಕಂಪಾನಿಯೋದ ಅಶೋಕ ವಿವರಿಸಿದರು.

ಶಾಲಾ ಮಂಡಳಿಯ ನಿರ್ದೇಶಕ ರಾಜು ಅಡಿವೆಪ್ಪನವರ, ಲಯನ್ಸ್ ಅಧ್ಯಕ್ಷ ಬಸವರಾಜ ಬಡಿಗೇರ, ಪ್ರಭು ಹಲಗೇರಿ, ಟಿ.ಸಿ.ಪಾಟೀಲ ಮತ್ತಿತರರಿದ್ದರು.

# ಪಾಕ್ ಮಾಜಿ ಪ್ರಧಾನಿ ಖಾನ್ ವಿರುದ್ಧ ಧರ್ಮ ನಿಂದನೆ ಪ್ರಕರಣ

ಲಾಹೋರ್, ಮೇ 1 – ಪಾಕಿಸ್ತಾನದ ಮಾಜಿ ಪ್ರಧಾನ ಮಂತ್ರಿ ಇಮ್ರಾನ್ ಖಾನ್ ಹಾಗೂ ಅವರ ಸಂಪುಟದಲ್ಲಿ ಸಚಿವರಾಗಿದ್ದ ಕೆಲವರೂ ಸೇರಿದಂತೆ 150 ಜನರ ವಿರುದ್ಧ ಪಾಕಿಸ್ತಾನದಲ್ಲಿ ಧರ್ಮ ನಿಂದನೆ ಪ್ರಕರಣ ದಾಖಲಿಸಲಾಗಿದೆ. ಪಾಕ್ ಪ್ರಧಾನ ಮಂತ್ರಿ ಶೆಬಾಜ್ ಷರೀಫ್ ಹಾಗೂ ನಿಯೋಗ ಸೌದಿ ಅರೇಬಿಯಾದಲ್ಲಿರುವ ಮಸ್ಜಿದ್ - ಎ – ನಬ್ವಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಅವರ ವಿರುದ್ಧ ಘೋಷಣೆ ಕೂಗಿ ಸುತ್ತುವರಿದಿದ್ದಕ್ಕೆ ಸಂಬಂಧಿಸಿದಂತೆ ಈ ಪ್ರಕರಣ ದಾಖಲಿಸಲಾಗಿದೆ.

ಖಾನ್ ಬೆಂಬಲಿಗರು ಎನ್ನಲಾದ ಕೆಲವರು ಪಾಕಿಸ್ತಾನದ ಪ್ರಧಾನ ಮಂತ್ರಿ ವಿರುದ್ಧ ಕಳ್ಳ ಹಾಗೂ ದೇಶದ್ರೋಹಿ ಎಂಬ ಘೋಷಣೆ ಕೂಗುತ್ತಿದ್ದ ವಿಡಿಯೋಗಳು ವೈರಲ್ ಆಗಿವೆ. ನಿಯೋಗದ ಸದಸ್ಯರ ವಿರುದ್ಧ ಕೆಲ ಮಾತುಗಳನ್ನು ಆಡಲಾಗಿದೆ. ಈ ಬಗ್ಗೆ ಪಾಕಿಸ್ತಾನದ ಐವರನ್ನು ಪೊಲೀಸರು ಬಂಧಿಸಿದ್ದಾರೆ.

ಘಟನೆಯ ಬಗ್ಗೆ ಪಾಕಿಸ್ತಾನದ ಪಂಜಾಬ್ ಪೊಲೀಸರು ಖಾನ್ ಹಾಗೂ 150 ಇತರರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.

ಶನಿವಾರ ಹೇಳಿಕೆ ನೀಡಿದ್ದ ಖಾನ್, ಪಾಕ್ ಪ್ರಧಾನಿ ವಿರುದ್ಧ ಘೋಷಣೆ ಕೂಗಿದವರಿಗೂ ನನಗೂ ಸಂಬಂಧವಿಲ್ಲ. ಯಾರಾದರೂ ಪವಿತ್ರ ಸ್ಥಳದಲ್ಲಿ ಈ ರೀತಿ ಮಾಡುತ್ತಾರೆ ಎಂಬುದನ್ನು ಊಹಿಸಲೂ ಸಾಧ್ಯವಾಗದು ಎಂದಿದ್ದಾರೆ. ಘಟನೆಯ ಬಗ್ಗೆ ಪಾಕಿಸ್ತಾನದಲ್ಲಿ ವ್ಯಾಪಕ ಖಂಡನೆ ವ್ಯಕ್ತವಾಗಿದೆ.

# ಪಿ.ಎಸ್.ಐ. ಹಗರಣ 12 ಜನರ ಬಂಧನ

ಬೆಂಗಳೂರು, ಮೇ 1 – ಪಿ.ಎಸ್‌ಐ. ನೇಮಕ ಹಗರಣಕ್ಕೆ ಸಂಬಂಧಿಸಿದಂತೆ ಪೊಲೀಸರು ಇನ್ನೂ ಹನ್ನೆರಡು ಜನರನ್ನು ಬಂಧಿಸಿದ್ದಾರೆ. ಇದರೊಂದಿಗೆ ಹಗರಣಕ್ಕೆ ಸಂಬಂಧಿಸಿದಂತೆ ಪ್ರಮುಖ ಆರೋಪಿತೆ ದಿವ್ಯಾ ಹಾಗರಗಿ ಸೇರಿದಂತೆ 30ಕ್ಕೂ ಹೆಚ್ಚು ಜನರನ್ನು ಬಂಧಿಸಲಾಗಿದೆ.

ಪಿ.ಎಸ್.ಐ. ಹುದ್ದೆಗಾಗಿ ಲಂಚ ನೀಡಿದವರನ್ನೂ ಸಹ ಬಂಧಿಸಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.


ಬೇಲರ್ ದಾರ ದೊರೆಯುತ್ತದೆ
ದಾವಣಗೆರೆಯ ಈರುಳ್ಳಿ ಮಾರುಕಟ್ಟೆ ರಸ್ತೆಯಲ್ಲಿರುವ ಅಕ್ಕಿ ಮಳಿಗೆ ಹಿಂಭಾಗದ
ಕುಶಾಲ್ ಎಂಟರ್ ಪ್ರೈಸಸ್
ಮಳಿಗೆ ಸಂಖ್ಯೆ 7 ರಲ್ಲಿ ಭತ್ತ, ರಾಗಿ, ಹುಲ್ಲು ಬಂಡಲ್ ಕಟ್ಟುವ ಬೇಲರ್ ದಾರ ದೊರೆಯುತ್ತದೆ.
ಸಂಪರ್ಕಿಸಿ : ಶಿವರಾಜ್ ಕುಂಕೋದ್
90081 22113

ತಕ್ಷಣ ಬೇಕಾಗಿದ್ದಾರೆ
ದಾವಣಗೆರೆ ಸುತ್ತ-ಮುತ್ತ ರೂಂ ಬಾಯ್ಸ್, ರಿಸೆಪ್ಷನಿಸ್ಟ ಸೆಕ್ಯೂರಿಟಿ ಗಾರ್ಡ್ ಮತ್ತು ಫೈನಾನ್ಸ್ ಮಾಡಲು ಗಾಡಿ ಇರುವ ಹುಡುಗರು ಬೇಕಾಗಿದ್ದಾರೆ. ಕೆಲವು ಕಡೆ ಊಟದ ವ್ಯವಸ್ಥೆ ಇರುತ್ತದೆ. ಆಕರ್ಷಕ ಸಂಬಳವಿರುತ್ತದೆ. ಕೂಡಲೇ ಸಂಪರ್ಕಿಸಿ :
74113 07071, 91085 09541

STAFF REQUIRED
For PU College
Subjects=computer science & English. Address : JH patel Badavane , Nagnur Road Shamnuru. Contact no :
99168 18369

New Commercial Building For Rent
3 Floor Commercial Building at Chowkipete (Beside Gowdara Jayadevappa Cloth Shop) each floor 1000 sq.ft Total 3000 sq.ft. (3 floors)
98441 41049, 98440 64712

ಹೆಬ್ಬೇವು ಮರಗಳು ಮಾರಾಟಕ್ಕಿವೆ
ದಾವಣಗೆರೆ ತಾ. ಕ್ಯಾತನಹಳ್ಳಿ ಸಮೀಪ ಅಂದಾಜು 250 ಮರಗಳು ಮಾರಾಟಕ್ಕಿವೆ. ಸಂಪರ್ಕಿಸಿ :
99804 46808

ಪ್ರವೇಶ ಪ್ರಕಟಣೆ
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2 ವರ್ಷ
ವಿದ್ಯಾರ್ಹತೆ: SSLC/PUC/ ITI ಪಾಸ್/ಫೇಲ್
6 ತಿಂಗಳ ತರಬೇತಿ ನಂತರ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು.
ಯಶಸ್ವಿ 15 ನೇ ವರ್ಷದಲ್ಲಿ
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276

LITTLE MILLENNIUM PRE SCHOOL
WANTED TEACHERS
Siddaveerappa Layout, beside BIET Engineering collage
83100 69167

ಶ್ರೀ ರಾಘವೇಂದ್ರ ಜ್ಯೋತಿಷ್ಯಾಲಯ
ನಂ.1 ವಶೀಕರಣ ಸ್ಪೆಷಲಿಸ್ಟ್
ಸ್ತ್ರೀ-ಪುರುಷ ವಶೀಕರಣ, ಗುಪ್ತ ಲೈಂಗಿಕ ದಾಂಪತ್ಯ ಸಮಸ್ಯೆ, ಇಷ್ಟಪಟ್ಟವರು ನಿಮ್ಮಂತಾಗಲು 100% ಶೀಘ್ರದಲ್ಲೇ ಪರಿಹಾರ ಮಾಡುತ್ತಾರೆ. ಗಾಂಧಿ ಸರ್ಕಲ್, ದಾವಣಗೆರೆ.
ಪಂಡಿತ್ ಜಿ.ವಿ. ಭಟ್ಟರ್
89716 99826

ಭೂಮಿಕಾ ಮ್ಯಾಟ್ರಿಮೊನಿ
ಲಿಂಗಾಯಿತ ವಧು-ವರರ ಕೇಂದ್ರ
Near Coffee day, Nutana College Road, Vidyanagara, 2nd Main, Davangere
77603 16576
81054 20867

SSLC/PUC/ITI
ಪಾಸ್/ಫೇಲ್ ಮುಂದೇನು? ಡಿಪ್ಲೋಮಾ ಪೇಷೆಂಟ್ ಕೇರ್ ನರ್ಸಿಂಗ್- 2 ವರ್ಷ
NTC - ನರ್ಸರಿ ಟೀಚರ್ಸ್ ಟ್ರೇನಿಂಗ್
ವಿಳಾಸ: ಶ್ರೀ ಗಂಗೋತ್ರಿ ಎಜುಕೇಶನ್ ಟ್ರಸ್ಟ್ ಲಾಯರ್ ರೋಡ್ ದಾವಣಗೆರೆ.
86602 35013
ರಿಸೆಪ್ಷನಿಸ್ಟ್ ಕೆಲಸಕ್ಕೆ ಮಹಿಳೆ ಬೇಕಾಗಿದ್ದಾರೆ.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ಬೇಕಾಗಿದ್ದಾರೆ
ದಾವಣಗೆರೆ, ಹರಿಹರ ತಾಲ್ಲೂಕಿಗೆ ಶೋ ರೂಂ ನಲ್ಲಿ ಕೆಲಸ ಮಾಡಲು ಡಿಪ್ಲೋಮಾ / ಐಟಿಐ/ ಪಿಯುಸಿ / ಡಿಗ್ರಿ ಆದಂತಹ ಅಭ್ಯರ್ಥಿಗಳು- 04 ಬೇಕಾಗಿದ್ದಾರೆ.
ಸಂಪರ್ಕಿಸಿ:
ಶಾರದಾ ಆಟೋಸ್
KSRTC ಬಸ್ ಸ್ಟ್ಯಾಂಡ್ ಹತ್ತಿರ, ದಾವಣಗೆರೆ.
sharadaautosdavangere@gmail.com
99002 56457,98457 76457

ಮಳಿಗೆ ಬಾಡಿಗೆಗೆ ಇದೆ
ಮಾಮಾಸ್ ಜಾಯಿಂಟ್ ರೋಡ್,
ಫೋ. : 82177 72482

15 ದಿನಗಳಲ್ಲಿ ಸುಲಭ ಪರಿಹಾರ
ಥೆರಪಿ ಉಚಿತ. ಬಿಪಿ, ಶುಗರ್, ವೆರಿಕೋಸ್ ವೇನ್ , ಬೆನ್ನು/ ಸೊಂಟ/ಮಂಡಿ ನೋವು,ಗ್ಯಾಸ್ಟ್ರಿಕ್, ಪಾದದಲ್ಲಿ ಉರಿ ಇತರೆ ಯಾವುದೇ ಸಮಸ್ಯೆ ಗಳಿಗೆ ನೇರ ಪರಿಹಾರ.HOME DEMO ಸೌಲಭ್ಯ ಇದೆ.T&C ಕಂಪ್ಯಾನಿಯೋ ಮೆಡಿಟೆಕ್, ಲಾಯರ್ ರೋಡ್.
86602 35013

WANTED TEACHERS
Walk In interview
PU-TCH / Degree B.Ed
Timing : 10.30 Am To 1pm. UGAM Central School, Davangere.
Contact :
85499 22048

TO-LET
Commercial Space 2400 Sft for Rent G+1 with 80ft road facing near RTO office on Kondajji Main road. available in different size suitable for Bank/ATM/Supermarket/Showroom/ Poly clinic/Office/Parlour/GYM/ Studio/Yoga Centre etc.
99864 52968

ನಂದಿನಿ ಹೋಟೆಲ್
ಹೋಟೆಲ್‌ನಲ್ಲಿ ಕೆಲಸ ಮಾಡಲು ಅಡುಗೆ ಭಟ್ಟರು ಬೇಕಾಗಿದ್ದಾರೆ. ಸಪ್ಲೈಯರ್ ಬೇಕಾಗಿದ್ದಾರೆ. ಪಾತ್ರೆ ತೊಳೆಯಲು ಮಹಿಳೆಯರು ಬೇಕಾಗಿದ್ದಾರೆ. ಚಪಾತಿ ಮಾಡಲು ಮಹಿಳೆಯರು ಬೇಕಾಗಿದ್ದಾರೆ. ಅಡುಗೆ ಭಟ್ಟರು ಉಳಿದುಕೊಳ್ಳುವುದಕ್ಕೆ ರೂಂ ವ್ಯವಸ್ಥೆ ಇದೆ.
ಶಕ್ತಿನಗರ, 2 ನೇ ಮುಖ್ಯರಸ್ತೆ, ದಾವಣಗೆರೆ.
94835 32186

ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ
ಪ್ರತಿ ತಿಂಗಳು 7 ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

# 28, 37ನೇ ವಾರ್ಡುಗಳಲ್ಲಿ ಕಾಮಗಾರಿಗಳಿಗೆ ಚಾಲನೆ




ದಾವಣಗೆರೆ, ಮೇ 1- ಮಹಾನಗರ ಪಾಲಿಕೆ ವಾರ್ಡ್ 28 ಮಹಾತ್ಮ ಗಾಂಧಿ ನಗರ ವಿಕಾಸ ಯೋಜನೆಯಲ್ಲಿ 270 ಲಕ್ಷ ರೂ. ಹಾಗೂ ಯು.ಐ.ಡಿ. ಎಸ್.ಎಸ್.ಎಂ.ಟಿ ಯೋಜನೆಯಲ್ಲಿ 310 ಲಕ್ಷ ರೂ. ಮತ್ತು 37ನೇ ವಾರ್ಡಿನಲ್ಲಿ ಮಹಾತ್ಮ ಗಾಂಧಿ ನಗರ ವಿಕಾಸ ಯೋಜನೆಯಲ್ಲಿ 250.40 ಲಕ್ಷ ರೂ. ಹಾಗೂ ಯು.ಐ.ಡಿ. ಎಸ್.ಎಸ್.ಎಂ.ಟಿ ಯೋಜನೆಯಲ್ಲಿ 310 ಲಕ್ಷ ರೂ.ನ ವಿವಿಧ ಕಾಮಗಾರಿಗಳಿಗೆ ಸಂಸದ ಜಿ.ಎಂ.ಸಿದ್ದೇಶ್ವರ, ಶಾಸಕ ಎಸ್.ಎ.ರವೀಂದ್ರನಾಥ್ ಅವರುಗಳು ಭೂಮಿ ಪೂಜೆ ನೆರವೇರಿಸುವುದರ ಮೂಲಕ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ 28ನೇ ವಾರ್ಡಿನ ಮಾಜಿ ಸದಸ್ಯ ಜೆ.ಎನ್.ಶ್ರೀನಿವಾಸ್, 37ನೇ ವಾರ್ಡಿನ ಮಾಜಿ ಸದಸ್ಯರಾದ ಶ್ರೀಮತಿ ಶ್ವೇತಾ ಜಿ.ಎನ್.ಶ್ರೀನಿವಾಸ್, ಮಹಾಪೌರರಾದ ಜಯಮ್ಮ ಗೋಪಿನಾಯ್ಕ, ಉಪ ಮಹಾಪೌರರಾದ ಗಾಯತ್ರಿ ಬಾಯಿ ಖಂಡೋಜಿರಾವ್, ಸ್ಥಾಯಿ ಸಮಿತಿ ಅಧ್ಯಕ್ಷರುಗಳಾದ ಸೋಗಿ ಶಾಂತಕುಮಾರ್, ಮಂಜುನಾಯ್ಕ, ರಾಕೇಶ್ ಜಾಧವ್, ದೂಡಾ ಅಧ್ಯಕ್ಷ ಕೆ.ಎಂ.ಸುರೇಶ್, ದೂಡಾ ಮಾಜಿ ಅಧ್ಯಕ್ಷ ಯಶವಂತ್ ರಾವ್ ಜಾಧವ್, ದೇವರಮನಿ ಶಿವಕುಮಾರ್, ಜಿಲ್ಲಾ ಬಿಜೆಪಿ ಅಧ್ಯಕ್ಷ ಹನಗವಾಡಿ ವೀರೇಶ್, ಪ್ರಧಾನ ಕಾರ್ಯದರ್ಶಿ ಬಿ.ಎಸ್.ಜಗದೀಶ್, ಜಿಲ್ಲಾ ಬಿಜೆಪಿ ಉಪಾಧ್ಯಕ್ಷರುಗಳಾದ ಶ್ರೀನಿವಾಸ್ ದಾಸಕರಿಯಪ್ಪ, ಶಿವರಾಜ್ ಪಾಟೀಲ್, ಜಿಲ್ಲಾ ಉತ್ತರ ವಿಧಾನಸಭಾ ಕ್ಷೇತ್ರದ ಅಧ್ಯಕ್ಷ ಸಂಗನಗೌಡ್ರು, ಮಾಜಿ ಮಹಾಪೌರರಾದ ಅಜಯ್‌ಕುಮಾರ್, ಎಸ್.ಟಿ. ವೀರೇಶ್, ಬಿಜೆಪಿ ಮುಖಂಡರಾದ ನರೇಂದ್ರಕುಮಾರ್, ರಮೇಶ್, ಪಾಲಿಕೆ ಆಯುಕ್ತ ವಿಶ್ವನಾಥ್ ಪಿ.ಮುದಜ್ಜಿ ಹಾಗೂ ಮತ್ತಿತರರು ಉಪಸ್ಥಿತರಿದ್ದರು.

## ನಗರದ ದೊಡ್ಡಪೇಟೆಯಲ್ಲಿ ಬಸವೇಶ್ವರರ ಜಯಂತಿ

ದೊಡ್ಡಪೇಟೆಯ ಶ್ರೀ ಬಸವೇಶ್ವರ ನಗರದಲ್ಲಿ ಇಂದಿನಿಂದ ಶ್ರೀ ಜಗಜ್ಯೋತಿ ಬಸವೇಶ್ವರರ ಜಯಂತ್ಯೋತ್ಸವವನ್ನು ಆಚರಿಸಲಾಗುತ್ತದೆ.

ಇಂದು ರಾತ್ರಿ 8 ಗಂಟೆಗೆ ಸಂಗೀತ ಮಾಸ್ತರ್ (ಸೊನ್ನ) ದಿ. ಹೆಚ್. ಬಸಪ್ಪನವರ ಮಕ್ಕಳಿಂದ ಭಜನೆ.

ನಾಳೆ ಮಂಗಳವಾರ ಬೆಳಿಗ್ಗೆ 9 ಗಂಟೆಗೆ ಮಹಿಳೆಯರಿಂದ ತೊಟ್ಟಿಲ ಪೂಜೆ ಕಾರ್ಯಕ್ರಮ. ಸಾಯಂಕಾಲ 6 ಗಂಟೆಯಿಂದ ಹೂವಿನ ಅಲಂಕಾರ, ಅಡ್ಡಪಲ್ಲಕ್ಕಿಯಲ್ಲಿ ಶ್ರೀ ಬಸವೇಶ್ವರರ ಬೆಳ್ಳಿ ಪುತ್ಥಳಿಯ ಭವ್ಯ ಮೆರವಣಿಗೆ ರಾಜ ಬೀದಿಗಳಲ್ಲಿ ನಡೆಯುವುದು. ಜಾನಪದ ಮೇಳಗಳು, ಕೀಲುಕುದುರೆ ಮತ್ತು ವಾದ್ಯಮೇಳಗಳು ಭಾಗವಹಿಸುವವು. ದಿನಾಂಕ 4 ರ ಬುಧವಾರ ಮಧ್ಯಾಹ್ನ 12.30 ಕ್ಕೆ ಸಾರ್ವಜನಿಕರಿಗೆ 'ಮಹಾದಾಸೋಹ' ಏರ್ಪಡಿಸಲಾಗಿದೆ. ಶ್ರೀ ಬಸವೇಶ್ವರ ಸೇವಾ ಸಂಘದ ಅಧ್ಯಕ್ಷ ಅಥಣಿ ಎಸ್. ವೀರಣ್ಣ ಮತ್ತು ಸಹೋದರರು ದಾಸೋಹ ಸೇವಾರ್ಥಿಗಳಾಗಿರುವರು.

## ನಗರದಲ್ಲಿ ಬೇಸಿಗೆ ಶಿಬಿರ

ರಾಮಕೃಷ್ಣ ಮಿಷನ್ ವತಿಯಿಂದ ಮಕ್ಕಳಿಗೆ ಇಂದಿನಿಂದ ವಸಂತ ವಿಹಾರ ಬೇಸಿಗೆ ಶಿಬಿರ ಆಯೋಜಿಸಿದೆ. 5ರಿಂದ 8ನೇ ತರಗತಿ ಮಕ್ಕಳು ಭಾಗವಹಿಸ ಬಹುದು. ಭಜನೆ ಮತ್ತು ಶ್ಲೋಕ ಅಭ್ಯಾಸ, ಯೋಗಾಸನ ಭಾರತೀಯ ಪರಂಪರೆ, ಉತ್ತಮ ವಿದ್ಯಾರ್ಥಿ ಜೀವನ, ಆಧ್ಯಾತ್ಮದ ಮೌಲ್ಯಗಳು, ಆತ್ಮ ವಿಶ್ವಾಸ, ನೈತಿಕತೆ, ವ್ಯಕ್ತಿತ್ವ ನಿರ್ಮಾಣ ಕುರಿತು ಕಲಿಕೆ ಇರಲಿದೆ. ಆಸಕ್ತರು 6363009634 ಸಂಪರ್ಕಿಸಿ.

# ಬಸವ ಜಯಂತಿ, ರಂಜಾನ್ ಹಬ್ಬವನ್ನು ಸೌಹಾರ್ದತೆಯಿಂದ ಆಚರಿಸಬೇಕು

ಹರಿಹರ, ಮೇ 1- ನಗರದಲ್ಲಿ ಬಸವ ಜಯಂತಿ ಹಾಗೂ ರಂಜಾನ್ ಹಬ್ಬವನ್ನು ಸೌಹಾರ್ದತೆ ಮತ್ತು ಸಹಬಾಳ್ವೆಯಿಂದ ಆಚರಿಸಿ ಎಂದು ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಾಮಗೊಂಡ ಆರ್. ಬಸರಗಿ ಹೇಳಿದರು.



ಹರಿಹರದಲ್ಲಿನ ಸೌಹಾರ್ದ ಸಭೆಯಲ್ಲಿ ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಾಮಗೊಂಡ ಆರ್. ಬಸರಗಿ ಕರೆ

ನಗರದ ಪೊಲೀಸ್ ಠಾಣೆಯ ಕಚೇರಿ ಸಭಾಂಗಣದಲ್ಲಿ ನಡೆದ ಶಾಂತಿ ಸೌಹಾರ್ದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕಳೆದ ಎರಡು ವರ್ಷಗಳಿಂದ ಕಾಡಿದ್ದ ಕೊರೊನಾ ರೋಗ ಮತ್ತೆ ಉಲ್ಬಣಿಸುವ ಲಕ್ಷಣವಿದ್ದು, ಪ್ರತಿಯೊಬ್ಬ ನಾಗರಿಕನು ಕಡ್ಡಾಯವಾಗಿ ಮಾಸ್ಕ್ ಧರಿಸಬೇಕು ಮತ್ತು ಸಾಮಾಜಿಕ ಅಂತರವನ್ನು ಕಾಯ್ದುಕೊಂಡು ಹಬ್ಬ ಆಚರಿಸಬೇಕು ಎಂದರು.

ಕೆಲವು ದುಷ್ಟವ್ಯಕ್ತಿಗಳು ಧರ್ಮಗಳ ಮಧ್ಯೆ ಕಲಹ ಸೃಷ್ಟಿಸುವುದಕ್ಕೆ ಮುಂದಾಗುತ್ತಾರೆ. ಹಿರಿಯರು ಹಾಗೂ ಮುಖಂಡರುಗಳು ಅಂಥವರನ್ನು ಮಟ್ಟಹಾಕಿದರೆ, ಸಮಾಜಕ್ಕೂ ಹಾಗೂ ಊರಿಗೂ ಗೌರವ ತಂದಂತಾಗುತ್ತದೆ ಎಂದರು.

ಸಿಪಿಐ ಯು.ಸತೀಶ್ ಕುಮಾರ್ ಮಾತನಾಡಿ, ಹರಿಹರ ನಗರವು ಬಹಳ ಕಾಲದಿಂದ ಶಾಂತಿ, ಸೌಹಾರ್ದತೆ, ಸಹಬಾಳ್ವೆಗೆ ಹೆಸರುವಾಸಿಯಾಗಿದೆ. ಅದನ್ನು ಉಳಿಸುವಲ್ಲಿ ಎಲ್ಲಾ ಧರ್ಮದ ಹಿರಿಯರು ಮತ್ತು ಮುಖಂಡರ ಸಹಕಾರ ಇರಲಿ ಎಂದರು.

ನಗರಸಭೆ ಪೌರಾಯುಕ್ತ ಐ. ಬಸವರಾಜ್ ಮಾತನಾಡಿ, ಹಬ್ಬ ಆಚರಣೆಯ ಸಂದರ್ಭದಲ್ಲಿ ನಗರಕ್ಕೆ ಅವಶ್ಯವಿರುವ ಸ್ವಚ್ಛತೆ, ಬೀದಿ ದೀಪದ ವ್ಯವಸ್ಥೆ, ಕುಡಿಯುವ ನೀರಿನ ಸರಬರಾಜು ವ್ಯವಸ್ಥೆಗಳನ್ನು ಮಾಡಲಾಗುವುದು ಎಂದು ಹೇಳಿದರು.

ಈ ಸಂದರ್ಭದಲ್ಲಿ ಪಿಎಸ್ಐ ಸುರೇಶ್ ಗುತ್ತೂರು, ಗ್ರಾಮಾಂತರ ಠಾಣೆಯ ಪಿಎಸ್ಐ ವೀರಬಸಪ್ಪ ಕುಸಲಾಪುರ, ಗ್ರೇಡ್ 2 ತಹಶೀಲ್ದಾರ್ ಶಶಿಧರಯ್ಯ, ಅಖಿಲ ಭಾರತ ವೀರಶೈವ ಮಹಾಸಭಾದ ಅಧ್ಯಕ್ಷ ಡಿ.ಜಿ. ಶಿವಾನಂದಪ್ಪ, ಮೊಹಮ್ಮದ್ ಫೈರೋಜ್, ತಾ.ಪಂ. ಮಾಜಿ ಅಧ್ಯಕ್ಷ ಟಿ.ಜೆ. ಮುರುಗೇಶಪ್ಪ, ದಾದಾಪೀರ್ ಭಾನುವಳ್ಳಿ, ನಗರಸಭೆ ಸದಸ್ಯರಾದ ಎಂ.ಎಸ್. ಬಾಬುಲಾಲ್, ಅಶ್ವಿನಿ ಕೃಷ್ಣ, ನಾಗರತ್ನಮ್ಮ, ನಗರಸಭೆ ಮಾಜಿ ಸದಸ್ಯ ನಾಗರಾಜ್ ಮೆಹರ್ವಾಡೆ, ಬಿಎಸ್‌ಪಿ ಮುಖಂಡ ಹನುಮಂತಪ್ಪ, ಪೊಲೀಸ್ ಸಿಬ್ಬಂದಿಗಳಾದ ಸತೀಶ್, ದೇವರಾಜ್, ನಾಗರಾಜ್, ನಿಂಗರಾಜ್, ಸಿದ್ದೇಶ್, ಮುರುಳಿಧರ್ ಮತ್ತಿತರರು ಉಪಸ್ಥಿತರಿದ್ದರು.

# 7ರಂದು ಹರಿಹರದಲ್ಲಿ ಜೆಡಿಎಸ್ ಜಲಧಾರೆ ಸಮಾವೇಶ



**ಕಾರ್ಯಕ್ರಮಕ್ಕೆ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ, ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಮತ್ತಿತರೆ ನಾಯಕರು**

**(1ನೇ ಪುಟದಿಂದ)** ಡಿ.ದೇವೇಗೌಡ, ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ, ಜೆಡಿಎಸ್ ನೂತನ ರಾಜಾಧ್ಯಕ್ಷ ಸಿ.ಎಂ. ಇಬ್ರಾಹಿಂ, ಮಾಜಿ ಅಧ್ಯಕ್ಷ ಹೆಚ್.ಕೆ. ಕುಮಾರಸ್ವಾಮಿ, ನಿಖಿಲ್ ಕುಮಾರಸ್ವಾಮಿ, ಬಂಡೆಪ್ಪ ಕಾಶೆಂಪೂರ್ ಸೇರಿದಂತೆ ಹಲವಾರು ಗಣ್ಯರು ಆಗಮಿಸಲಿದ್ದಾರೆ.

ಇವರನ್ನು ಸುಮಾರು ಐದು ಸಾವಿರ ಬೈಕ್ ರ್‍ಯಾಲಿ ಮೂಲಕ ಸ್ವಾಗತಿಸಿ, ನಗರದ ಶಿವಮೊಗ್ಗ ರಸ್ತೆಯಲ್ಲಿರುವ ನೀರಾವರಿ ಇಲಾಖೆಯ ಗಣೇಶ ದೇವಸ್ಥಾನದಿಂದ ತೆರೆದ ವಾಹನದಲ್ಲಿ ಸಾವಿರ ಕುಂಭ, ಭಾಜಾ ಭಜಂತ್ರಿ ಸೇರಿದಂತೆ ವಿವಿಧ ಕಲಾ ತಂಡಗಳು ಮೆರವಣಿಗೆ ಮೂಲಕ ನಗರದ ಗಾಂಧಿ ಮೈದಾನಕ್ಕೆ ಕರೆತರಲಾಗುವುದು. ಸಂಜೆ 5ಕ್ಕೆ ಬೃಹತ್ ಸಮಾವೇಶ ಹಮ್ಮಿಕೊಂಡಿದ್ದು, ಸಾರ್ವಜನಿಕರನ್ನು ಉದ್ದೇಶಿಸಿ ಪಕ್ಷದ ನಾಯಕರು ಮಾತನಾಡಲಿದ್ದಾರೆ ಎಂದು ಮಾಹಿತಿ ನೀಡಿದರು.

ಹರಪನಹಳ್ಳಿ ತಾಲ್ಲೂಕಿನಿಂದ ಜನತಾ ಜಲಧಾರೆ ರಥವು ನಾಡಿದ್ದು ದಿನಾಂಕ 3ಕ್ಕೆ ಹರಿಹರ ತಾಲ್ಲೂಕಿಗೆ ಆಗಮಿಸುವುದು. ಈ ರಥವನ್ನು ಕುರುಬರಹಳ್ಳಿ ಕ್ರಾಸ್ ಬಳಿ ಪಕ್ಷದ ಮುಖಂಡರು ಸ್ವಾಗತ ಮಾಡುವರು. ನಂತರ ಗುತ್ತೂರು ಗಣೇಶ ದೇವಸ್ಥಾನ ಹತ್ತಿರ ಮತ್ತು ಎ.ಕೆ. ಕಾಲೋನಿ ಭಜನಾ ಮಂದಿರ ಬಳಿಯು ಸ್ವಾಗತ ಮಾಡಿದ ನಂತರ ರಾಘವೇಂದ್ರ ದೇವಸ್ಥಾನದಲ್ಲಿ ಮೇ 7ರ ತನಕ ವಾಸ್ತವ್ಯ ಮಾಡಲಿದ್ದಾರೆ ಎಂದರು.

ಮೇ 7ಕ್ಕೆ ಬೆಳಗ್ಗೆ ತುಂಗಭದ್ರಾ ನದಿಯ ಜಲವನ್ನು ಜನತಾ ಜಲಧಾರೆ ರಥಕ್ಕೆ ಸಮರ್ಪಣೆ ಮಾಡಿದ ನಂತರ ಮಲೇಬೆನ್ನೂರಿನ ವಿವಿಧ ಬಡಾವಣೆಗಳಿಗೆ ತೆರಳಿ ಜೀವಜಲದ ಬಗ್ಗೆ ಜಾಗೃತಿ ಮೂಡಿಸುವುದು. ಮಧ್ಯಾಹ್ನ 3ರ ನಂತರ ಹರಿಹರಕ್ಕೆ ಆಗಮಿಸುವ ರಥ ನಗರದ ವಿವಿಧ ವಾರ್ಡ್‌ಗಳಲ್ಲಿ ಸಂಚಾರ ಮಾಡಿದ ನಂತರ ಮೆರವಣಿಗೆಯಲ್ಲಿ ಭಾಗವಹಿಸುವುದು ಎಂದವರು ತಿಳಿಸಿದರು.

ಹರಿಹರ ತಾಲ್ಲೂಕಿನಲ್ಲಿ ಹಲವಾರು ಕೆರೆಗಳಿದ್ದು, ಇವುಗಳಿಗೆ ತುಂಗಭದ್ರಾ ನದಿಯಿಂದ ನೀರು ತುಂಬಿಸುವ ಯೋಜನೆಯನ್ನು ಇಂದಿಗೂ ಕಾರ್ಯಗತಗೊಳಿಸಿಲ್ಲ. ಚುನಾವಣಾ ಸಂದರ್ಭದಲ್ಲಿ ಬಿಜೆಪಿ ಹಾಗೂ ಕಾಂಗ್ರೆಸ್ ಮುಖಂಡರು ಅಗಸನಕಟ್ಟೆ ಕೆರೆ, ಭೈರನಪಾದ ಯೋಜನೆಯ ಬಗ್ಗೆ ಮಾತನಾಡುತ್ತಾರೆ. ಚುನಾವಣೆಯ ಅಸ್ತ್ರವಾಗಿ ಬಳಸಿಕೊಂಡು ನಂತರ ಮರೆಯುತ್ತಾರೆ ಎಂದು ಆರೋಪಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾ ಜೆಡಿಎಸ್ ಅಧ್ಯಕ್ಷ ಬಿ.ಚಿದಾನಂದಪ್ಪ, ನಗರಸಭಾ ಸದಸ್ಯರು ಗಳಾದ ದಿನೇಶ್ ಬಾಬು, ಬಿ. ಅಲ್ತಾಫ್, ಮುಖಂಡರಾದ ದೀಟೂರ್ ಶೇಖರಪ್ಪ, ತಾವರಗುಂದಿ ಬಸವರಾಜಪ್ಪ, ನಾಗರಾಜ್, ಪ್ರೇಮ್‌ಕುಮಾರ್, ಮಂಜುನಾಥ್, ಹಬೀಬ್‌ವುಲ್ಲಾ, ಆರ್. ಸುರೇಶ್, ಮಂಜುನಾಥ ಸ್ವಾಮಿ, ಜಗದೀಶ್, ಮನ್ಸೂರು ಮದ್ದಿ, ರೆಹಮತ್ ಉಲ್ಲಾ, ಆಶ್ಫಾಕ್, ಇಸಾಕ್, ಸುಪ್ರೀತ್ ಮತ್ತಿತರರು ಉಪಸ್ಥಿತರಿದ್ದರು.

# ಕೊಡುಗೆ ನೀಡದ ಡಬಲ್ ಇಂಜಿನ್ ಸರ್ಕಾರಗಳು

**(1ನೇ ಪುಟದಿಂದ)** ನೀಡಲೇಬೇಕೆಂದು ಹಣ ಪಡೆದು ಚುನಾವಣೆ ನಡೆಸುವ ಲಜ್ಜೆಗೇಡಿ ಪಕ್ಷವೊಂದಿದ್ದರೆ ಅದು ಬಿಜೆಪಿ ಪಕ್ಷ ಎಂದು ಹರಿಹಾಯ್ದರು.

ದೇಶಭಕ್ತಿ ಬಗ್ಗೆ ಮಾತನಾಡುವ ಬಿಜೆಪಿ ಪಕ್ಷದವರಿಗೆ ದೇಶಭಕ್ತಿ ಇದ್ದರೆ ಇಂದು ಕಮೀಷನ್ ಪಡೆಯದೇ ಅಭಿವೃದ್ಧಿ ನಡೆಸುತ್ತಿದ್ದರು. 10 ಕೋಟಿ ಸದಸ್ಯರನ್ನು ಹೊಂದಿರುವ ದೊಡ್ಡ ಪಕ್ಷ ಎಂದು ಹೇಳಿಕೊಳ್ಳುವ ಬಿಜೆಪಿಯವರಿಗೆ ಸದಸ್ಯರು ಆಗಿರುವ ಬಗ್ಗೆ ಸರಿಯಾದ ದಾಖಲೆಗಳು ಇಲ್ಲ. ಇವರದ್ದೇನಿದ್ದರೂ ಮಿಸ್ಡ್ ಕಾಲ್ ಸದಸ್ಯತ್ವ ಎಂದು ವ್ಯಂಗ್ಯವಾಡಿದರು. ನ್ಯಾಯಾಲಯಗಳು ಇರುವುದರಿಂದಲೇ ದೇಶದಲ್ಲಿ ಸಂವಿಧಾನ ಮತ್ತು ಪ್ರಜಾಪ್ರಭುತ್ವ ಉಳಿದುಕೊಂಡಿದೆ. ಇಲ್ಲವಾದರೆ ಜನವಿರೋಧಿಯಾಗಿ ಸರ್ಕಾರ ಅಧಿಕಾರ ನಡೆಸುತ್ತಿತ್ತು. ಕಾರ್ಮಿಕರಿಗೆ ಮುಂದಿನ ದಿನಗಳು ವಿರೋಧವಾಗಿರಲಿದ್ದು, ಕಾರ್ಮಿಕರು ತೀವ್ರಗತಿಯ ಹೋರಾಟಕ್ಕೆ ಸಜ್ಜಾಗಬೇಕಿದೆ ಎಂದರು.

ದೇಶದ ರಕ್ಷಣೆಯ ಜವಾಬ್ದಾರಿ ಕಾರ್ಮಿಕ ವರ್ಗಕ್ಕಿದೆ. ಕಾರ್ಮಿಕ ಸಂಘಟನೆಗಳು ಕೇವಲ ಆರ್ಥಿಕ ಸಮಾನತೆಗಾಗಿ ನಡೆಸುವ ಹೋರಾಟಕ್ಕೆ ಮಾತ್ರ ಸೀಮಿತವಾಗದೆ ಸಾಮಾಜಿಕ ಬದಲಾವಣೆಗೂ ಚಳುವಳಿಗಳನ್ನು ನಡೆಸಬೇಕಿದೆ ಎಂದು ಕರೆ ನೀಡಿದರು.

ವಿರಕ್ತ ಮಠದ ಬಸವಪ್ರಭು ಶ್ರೀಗಳು ಮಾತನಾಡಿ, ಕಾಯಕದಿಂದ ಮಾತ್ರ ದೇಶ ಮತ್ತು ವ್ಯಕ್ತಿ ಉದ್ಧಾರವಾಗಲು ಸಾಧ್ಯ. ಶ್ರಮಿಕರು ಇಲ್ಲವಾದರೆ ದೇಶದ ಅಭಿವೃದ್ಧಿಯೂ ಅಸಾಧ್ಯವಾಗುತ್ತದೆ. ಆದ ಕಾರಣವೇ ಬಸವಣ್ಣನವರು ಆ ಕಾಲದಲ್ಲಿ ದಾರ್ಶನಿಕರಿಗಿಂತ ಶ್ರಮಿಕರ ಪಾದ ನೋಡಬೇಕೆಂದು ಹೇಳುತ್ತಿದ್ದರು ಎಂದು ತಿಳಿಸಿದರು.

ಎಐಟಿಯುಸಿ ಜಿಲ್ಲಾ ಸಮಿತಿ ಅಧ್ಯಕ್ಷ ಕೆ. ರಾಘವೇಂದ್ರ ನಾಯರಿ ಮಾತನಾಡಿ, ಪ್ರಸ್ತುತ ಕಾರ್ಮಿಕರಿಗೆ ಸಮರ್ಪಕವಾದ ಕನಿಷ್ಠ ವೇತನವನ್ನು ಜಾರಿಗೆ ತಂದು ಕಾರ್ಮಿಕರ ಹಸಿದ ಹೊಟ್ಟೆಗೆ ನ್ಯಾಯ ನೀಡುವಲ್ಲಿ, ದುಡಿಯುವ ಕೈಗಳಿಗೆ ಉದ್ಯೋಗ ನೀಡುವಲ್ಲಿ ನಮ್ಮನ್ನಾಳುವ ಸರ್ಕಾರಗಳು ಸೋತಿವೆ ಎಂದು ದೂರಿದರು.

ಕಾರ್ಮಿಕ ವರ್ಗ ನಮ್ಮ ಸಮಾಜದ ಬಹು ಮುಖ್ಯ ಭಾಗ ಎನ್ನುವುದನ್ನು ಅರಿತು ಸರ್ಕಾರ ಆಡಳಿತ ನಡೆಸಬೇಕು. ಆದರೆ, ಕಾರ್ಮಿಕರ ಕೂಗು ಸರ್ಕಾರಕ್ಕೆ ಕೇಳಿಸುತ್ತಿಲ್ಲ, ಕಷ್ಟ ಕಾಣಿಸುತ್ತಿಲ್ಲ. ಕಾರ್ಮಿಕರ ಕುರಿತಾದ ಸಂವೇದನೆಯನ್ನೇ ಕಳೆದುಕೊಂಡಿರುವ ಈ ಸರ್ಕಾರಗಳಿಗೆ ಬಿಸಿ ಮುಟ್ಟಿಸಬೇಕಾದರೆ ಈ ದೇಶದಲ್ಲಿ ಅಮೇರಿಕಾದ ಚಿಕಾಗೋ ಹೋರಾಟದ ಮಾದರಿಯ ಚಳುವಳಿ ಪುನರಾವರ್ತನೆ ಆಗಬೇಕಾಗಿದೆ. ಈ ನಿಟ್ಟಿನಲ್ಲಿ ಕಾರ್ಮಿಕರನ್ನು ಸಜ್ಜುಗೊಳಿಸುವುದು ಕಾರ್ಮಿಕ ಸಂಘಟನೆಗಳ ಈ ದಿನದ ತುರ್ತು ಅಗತ್ಯತೆ ಇದೆ ಎಂದರು.

ಸಭೆಯಲ್ಲಿ ಸಿಪಿಐ ಜಿಲ್ಲಾ ಮಂಡಳಿ ಖಜಾಂಚಿ ಆನಂದರಾಜ್ ಅಧ್ಯಕ್ಷತೆ ವಹಿಸಿದ್ದರು. ಕಾರ್ಯದರ್ಶಿ ಆವರಗೆರೆ ಚಂದ್ರು, ಹೆಚ್.ಜಿ. ಉಮೇಶ್, ಟಿ. ಎಸ್. ನಾಗರಾಜ್, ಎಂ.ಬಿ. ಶಾರದಮ್ಮ, ವಿ. ಲಕ್ಷ್ಮಣ್, ಟಿ.ಹೆಚ್. ನಾಗರಾಜ್, ಮಹಮದ್ ಬಾಷಾ, ಮಹ್ಮದ್ ರಫೀಕ್, ಆವರಗೆರೆ ವಾಸು, ಐರಣಿ ಚಂದ್ರು, ಪಾಲಿಕೆ ಸದಸ್ಯ ಬಿ.ಜಿ. ಅಜಯಕುಮಾರ್ ಸೇರಿದಂತೆ ಇತರರು ಇದ್ದರು.

## ವಚನ ಗೀತೆ ಸ್ಪರ್ಧೆ : ವಿಜೇತರಿಗೆ ನಾಳೆ ಬಹುಮಾನ ವಿತರಣೆ

ದಾವಣಗೆರೆ, ಮೇ 1- ಬಸವ ಜಯಂತ್ಯೋತ್ಸವ ಸಮಿತಿ, ಲಿಂಗಾಯತ ತರುಣ ಸಂಘದ ಸಂಯಯುಕ್ತಾಶ್ರಯದಲ್ಲಿ ಬಸವ ಜಯಂತಿ ಅಂಗವಾಗಿ ಮಕ್ಕಳಿಗಾಗಿ ಏರ್ಪಡಿಸಲಾಗಿದ್ದ ವಚನ ಗೀತೆ ಸ್ಪರ್ಧೆಯ ವಿಜೇತರ ವಿವರ :

2 ರಿಂದ 4 ವರ್ಷ: ವೀರೇಶ್ ಕುಮಾರ್ (ಪ್ರಥಮ), ಪಿ.ಜೆ. ಯಶವಂತ (ದ್ವಿತೀಯ), ಎ.ಎಸ್. ವಿರಾಟ್ (ತೃತೀಯ).

5 ರಿಂದ 10 ವರ್ಷ : ಭಗತ್ ಆಯುಷ್ (ಪ್ರಥಮ), ಹೆಚ್.ಎನ್. ನಿಹಾರಿಕ (ದ್ವಿತೀಯ), ಇಂಪನ (ತೃತೀಯ).

11 ರಿಂದ 15 ವರ್ಷ : ಕೆ.ಎನ್. ಚಿರತಂತನ (ಪ್ರಥಮ), ಜೀವಿತ ಮೌನೇಶ್ (ದ್ವಿತೀಯ), ಶ್ರೇಯಾ ಎಂ. ಪಟ್ಟೇರ ಇನ್ನೂ ಮುಂತಾದವರು.

ಭಾಗವಹಿಸಿದ್ದ ಎಲ್ಲಾ ಮಕ್ಕಳಿಗೂ ಬಹುಮಾನ ನೀಡಲಾಗುವುದು. ನಾಡಿದ್ದು ದಿನಾಂಕ 3 ರ ಮಂಗಳವಾರ ಸಂಜೆ 6.30 ಕ್ಕೆ ಶಿವಯೋಗಾಶ್ರಮದ ಆವರಣದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ವಿತರಣೆ ಮಾಡಲಾಗುವುದು ಎಂದು ಲಿಂಗಾಯತ ತರುಣ ಸಂಘದ ಸಂಚಾಲಕರಾದ ಕಣಕುಪ್ಪಿ ಮುರುಗೇಶಪ್ಪ ತಿಳಿಸಿದ್ದಾರೆ.

# ವಚನ ಸಾಹಿತ್ಯ ಪ್ರಸಾರದ ಕ್ರಾಂತಿಯೋಗಿ

**(3ನೇ ಪುಟದಿಂದ)** ಪೂಜ್ಯರದ್ದು. ಅದಕ್ಕಾಗಿ ಬಸವಣ್ಣನವರ ವಚನಗಳನ್ನು ಇಂಗ್ಲಿಷಿಗೆ ಅನುವಾದಿಸಲು ಕರ್ನಾಟಕ ವಿಶ್ವವಿದ್ಯಾಲಯದ ಪ್ರೊ. ಎಲ್.ಎಮ್.ಎ. ಮೆನೆಜಿಸ್ ಮತ್ತು ಎಸ್.ಎಂ. ಅಂಗಡಿಯವರಿಗೆ ವಹಿಸಿದರು. ಅವರು ಪ್ರಾಯೋಗಿಕವಾಗಿ ಒಂದು ನೂರು ವಚನಗಳನ್ನು ಅನುವಾದಿಸಿದರು. ಆ ನೂರು ವಚನಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಿ, 1965ರಲ್ಲಿ ಚಿತ್ರದುರ್ಗದಲ್ಲಿ ನಡೆದ ತರಳಬಾಳು ಹುಣ್ಣಿಮೆ ಮಹೋತ್ಸವದಲ್ಲಿ ಮೈಸೂರು ಮಹಾರಾಜರಾದ ಡಾ. ಜಯಚಾಮರಾಜೇಂದ್ರ ಒಡೆಯರ್‌ರಿಂದ ಬಿಡುಗಡೆ ಮಾಡಿಸಿದರು. ನಂತರ ಮೇಲ್ಕಂಡ ವಿದ್ವಾಂಸರ ಪರಿಶ್ರಮದಿಂದ ಬಸವಣ್ಣನವರ ಸಮಗ್ರ ವಚನಗಳನ್ನು ಇಂಗ್ಲಿಷ್ ಭಾಷೆಗೆ ಅನುವಾದ ಮಾಡಿಸಿ 1967ರಲ್ಲಿ 'Vachanas of Basavanna' ಎಂಬ ಪುಸ್ತಕವನ್ನು ಪ್ರಕಟಿಸಿದರು. ಹಾಗೆಯೇ ಹಿಂದಿ ಭಾಷೆಗೆ ಅನುವಾದಿಸಲು ಮೈಸೂರು ವಿಶ್ವವಿದ್ಯಾಲಯಕ್ಕೆ ಒಂದು ಲಕ್ಷ ರೂಪಾಯಿಗಳನ್ನು ಪುದುವಟ್ಟಾಗಿಟ್ಟರು. ಆದರೆ, ಆ ಕಾರ್ಯ ಮುಂದುವರಿಯದೆ ಹಣ ವಾಪಸ್ ನೀಡಿದರು. ಹಿಂದಿ ಪ್ರೊಫೆಸರ್ ಆಗಿದ್ದ ಕೊಟ್ಟೂರಿನ ಪ್ರೊ. ಬಣಕಾರ ಗೌಡಪ್ಪನವರು ಶ್ರೀಗಳವರ ಸಂಪರ್ಕಕ್ಕೆ ಬಂದರು. ಆಗ ಶ್ರೀಗಳವರ ಆಶಯದಂತೆ ಬಸವಣ್ಣನವರ ವಚನಗಳನ್ನು ಹಿಂದಿ ಭಾಷೆಗೆ ಅನುವಾದ ಮಾಡಿದರು. ಆದರೆ ಪ್ರೊ. ಬಣಕಾರ ಗೌಡಪ್ಪನವರ ಅನುವಾದ ಕೃತಿ ಹಲವಾರು ವರ್ಷಗಳ ಕಾಲ ಪ್ರಕಟವಾಗದೆ ಅಜ್ಞಾತವಾಗಿತ್ತು. ಈ ಹಸ್ತಪ್ರತಿ ಈಗಿನ ಪೂಜ್ಯರ ಕಣ್ಣಿಗೆ ಬಿದ್ದು, ಈಗ ಪ್ರಕಟಣಾ ಭಾಗ್ಯವನ್ನು ಕಾಣುತ್ತಿದೆ. ಹಾಗೆಯೇ ತೆಲುಗು ಭಾಷೆಗೆ ಅನುವಾದಿಸಲು ಮೈಸೂರು ವಿಶ್ವವಿದ್ಯಾಲಯದಲ್ಲಿ ತೆಲುಗು ಭಾಷಾ ಪ್ರಾಧ್ಯಾಪಕರಾಗಿದ್ದ ಪ್ರೊ. ಬಾಡಾಲು ರಾಮಯ್ಯನವರಿಗೆ ವಹಿಸಿದರು. ಡಾ. ಬಾಡಾಲು ರಾಮಯ್ಯನವರು ಬಸವಣ್ಣನವರ ಸಮಗ್ರ ವಚನಗಳನ್ನು ತೆಲುಗು ಭಾಷೆಗೆ ಅನುವಾದಿಸಿಕೊಟ್ಟರು. 1977ರಲ್ಲಿ ಮೊದಲ ಮುದ್ರಣವನ್ನು ಕಂಡ ಈ ಕೃತಿಯ ಪ್ರತಿಗಳು ಮುಗಿದು ಹೋಗಿದ್ದವು. ಆದುದರಿಂದ ತೆಲುಗು ಅನುವಾದದ ಎರಡನೆಯ ಆವೃತ್ತಿಯೂ ಈಗ ಲೋಕಾರ್ಪಣೆಗೊಳ್ಳುತ್ತಿದೆ.

ಈ ಎಲ್ಲಾ ಕಾರ್ಯಗಳು ಬಸವ ಜಯಂತಿಯೆಂದೇ ನೆರವೇರುತ್ತಿರುವುದೊಂದು ವಿಶೇಷ.

## ಬಸವ ಜಯಂತಿಯಲ್ಲಿ ಲೋಕಾರ್ಪಣೆ

**(3ನೇ ಪುಟದಿಂದ)** ವಿಶ್ವವಿದ್ಯಾಲಯದ ವಿಶ್ರಾಂತ ತೆಲುಗು ಭಾಷಾ ಪ್ರಾಧ್ಯಾಪಕ ಬಾಡಾಲು ರಾಮಯ್ಯನವರು ತೆಲುಗು ಭಾಷೆಗೆ ಅನುವಾದಿಸಿದ 'ಬಸವೇಶ್ವರ ವಚನಾಲು' ಕೃತಿ ಮತ್ತು ಮೈಸೂರಿನ ವಿಶ್ರಾಂತ ಪ್ರಾಂಶುಪಾಲ ಪ್ರೊ. ಚಂದ್ರಶೇಖರಯ್ಯ ನವರು ಶ್ರೀ ತರಳಬಾಳು ಜಗದ್ಗುರು ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳ ಜೀವನವನ್ನಾಧರಿಸಿ ರಚಿಸಿರುವ 'ಧೀರ ಸನ್ಯಾಸಿ' ಕಾದಂಬರಿಯು ಲೋಕಾ ರ್ಪಣೆಗೊಳ್ಳಲಿವೆ.

ಇದೇ ವೇದಿಕೆಯಲ್ಲಿ ಶ್ರೀ ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾ ಚಾರ್ಯ ಮಹಾಸ್ವಾಮಿಗಳು ಅಭಿವೃದ್ಧಿಪಡಿಸಿರುವ ತಂತ್ರಾಂಶ 'ಶಿವಶರಣರ ವಚನ ಸಂಪುಟ' ಅಂತರ್ಜಾಲತಾಣವು ಅನಾವರಣಗೊಳ್ಳಲಿದೆ.

ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಅಂತರ ರಾಷ್ಟ್ರೀಯ ಭರತನಾಟ್ಯ ಕಲಾವಿದೆ ಚಿತ್ರಾ ಚಂದ್ರ ಶೇಖರ್ ಮತ್ತು ಕು. ಪೃಥ್ವಿ ಬೇಲೂರು ಇವರಿಂದ ಭರತನಾಟ್ಯ ಮತ್ತು ವಚನ ನೃತ್ಯ ಪ್ರದರ್ಶನವಿರುತ್ತದೆ.

## ಅನುವಾದ ಕೃತಿಗಳ ಲೋಕಾರ್ಪಣೆ

**(3ನೇ ಪುಟದಿಂದ)** ಸಾಹಿತ್ಯ ಮತ್ತು ಸಾಂಸ್ಕೃತಿಕ ಕ್ಷೇತ್ರದಲ್ಲಿ ಹೀಗೂ ಬಳಸಿಕೊಳ್ಳು ಬಹುದು ಎಂಬುದನ್ನು ಮೊದಲು ಜಗತ್ತಿಗೆ ತೋರಿಸಿ ಕೊಟ್ಟಿದ್ದು ಶ್ರೀ ತರಳಬಾಳು ಜಗದ್ಗುರುಗಳು. ಪೂಜ್ಯರ ದೂರದೃಷ್ಟಿಯ ಫಲವಾಗಿ ಶಿವಶರಣರ ವಚನ ಸಾಹಿತ್ಯ ಮತ್ತು ಪಾಣಿನಿಯ ಅಷ್ಟಾಧ್ಯಾಯಿ ಕೃತಿಯು ಕ್ಷಣಮಾತ್ರದಲ್ಲಿ ಜಗತ್ತಿನ ಆಸಕ್ತರಿಗೆ ದೊರಕುವಂತಾಯಿತು.

## ಸಂಪುಟದ ಜಾಲತಾಣದಲ್ಲಿ ಏನೇನಿದೆ ?

**(3ನೇ ಪುಟದಿಂದ)** ಹೆಚ್ಚು ವಚನಕಾರರ 21000ಕ್ಕೂ ಹೆಚ್ಚು ವಚನಗಳಿವೆ. ಕನ್ನಡ ಮತ್ತು ಇಂಗ್ಲಿಷ್ ಲಿಪಿಯಲ್ಲಿ ಮೂಲ ಪಠ್ಯ ಲಭ್ಯವಿದ್ದು, ಆ ವಚನ ಇತರೆ ಭಾಷೆಗಳಿಗೆ ಅನುವಾದಗೊಂಡಿದ್ದರೆ ಅದೇ ಲಿಪಿಯಲ್ಲಿ ಕಾಣಬಹುದು. ಉದಾಹರಣೆಗೆ, ಬಸವಣ್ಣನವರ ವಚನಗಳು ಈಗಾಗಲೇ ಇಂಗ್ಲಿಷ್, ಹಿಂದಿ, ತೆಲುಗು, ತಮಿಳು ಭಾಷೆಗಳಿಗೆ ಅನುವಾದಗೊಂಡಿವೆ. ಈಗಿನ ತಂತ್ರಾಂಶದಲ್ಲಿ ಇಂಗ್ಲಿಷ್, ಹಿಂದಿ, ತೆಲುಗು, ತಮಿಳು ಭಾಷಿಗರು ಸಹ ಬಸವಣ್ಣನವರ ವಚನಗಳನ್ನು ತಮ್ಮ ತಮ್ಮ ಭಾಷೆಗಳಲ್ಲಿ ಓದಬಹುದಾಗಿದೆ. ಅಲ್ಲದೆ ಆ ವಚನದ ಧ್ವನಿ(ಆಡಿಯೋ)ಯನ್ನು ಹಾಗೂ ಆ ವಚನ ರಾಗ ಸಂಯೋಜನೆಗೊಂಡು ಹಾಡಲ್ಪಟ್ಟಿದ್ದರೆ, ಅದನ್ನು ಸಹ ಆಲಿಸಬಹುದು. ಈ ನೂತನ ತಂತ್ರಾಂಶದಿಂದ ಮೊಬೈಲ್ ಸೆಟ್ಟಿನಲ್ಲೂ ನಮಗೆ ಬೇಕಾದ ವಚನವನ್ನು ಹುಡುಕಬಹುದು.

## ನಗರದಲ್ಲಿ ಇಂದಿನಿಂದ ಬೇಸಿಗೆ ಶಿಬಿರ

ದಾವಣಗೆರೆ ಜಿಲ್ಲಾ ಬ್ಯಾಡ್ಮಿಂಟನ್ ಅಸೋಸಿಯೇಷನ್ ವತಿಯಿಂದ 2 ನೇ ಬೇಸಿಗೆ ಶಿಬಿರದ ಭಾಗವಾಗಿ ಇಂದಿನಿಂದ ಇದೇ ದಿನಾಂಕ 23 ರವರೆಗೆ ನಗರದ ನೇತಾಜಿ ಸುಭಾಷ್ ಚಂದ್ರಬೋಸ್ ಒಳಾಂಗಣ ಕ್ರೀಡಾಂಗಣದಲ್ಲಿ ಬ್ಯಾಡ್ಮಿಂಟನ್ ತರಬೇತಿ ಶಿಬಿರ (ಬೇಸಿಗೆ ಶಿಬಿರ)ವನ್ನು ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗಾಗಿ ತರಬೇತುದಾರರಾದ ಎಂ. ಪ್ರಕಾಶ್ (99862-22140), ಜೆ. ರಾಘವೇಂದ್ರ (94488-06339) ಇವರನ್ನು ಸಂಪರ್ಕಿಸಲು ಅಸೋಸಿಯೇಷನ್ ಅಧ್ಯಕ್ಷ ಎಸ್.ಎನ್. ಬಸವರಾಜ್, ಪ್ರಧಾನ ಕಾರ್ಯದರ್ಶಿ ಡಿ.ಆರ್. ಗಿರಿರಾಜ್ ಕೋರಿದ್ದಾರೆ.

## ಬಸವರಾಜಪೇಟೆ : ನಾಳೆ ಬಸವ ಜಯಂತಿ



ದಾವಣಗೆರೆ,ಮೇ 1- ಸ್ಥಳೀಯ ಬಸವರಾಜ ಪೇಟೆಯ ಶ್ರೀ ಬಸವೇಶ್ವರ ಮತ್ತು ಶ್ರೀ ವೀರೇಶ್ವರ ದೇವಸ್ಥಾನದಲ್ಲಿ ನಾಡಿದ್ದು ದಿನಾಂಕ 3ರ ಮಂಗಳವಾರ ಬಸವ ಜಯಂತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ದೇವಸ್ಥಾನ ಸಮಿತಿ ಅಧ್ಯಕ್ಷ ಪ್ರಭು ಕಲಬುರಗಿ ತಿಳಿಸಿದ್ದಾರೆ. ದಿನಾಂಕ 3ರ ಮಂಗಳವಾರ ಬೆಳಿಗ್ಗೆ ವಿಶೇಷ ಪೂಜಾ ಕಾರ್ಯಕ್ರಮಗಳು, ಮಧ್ಯಾಹ್ನ 12.30ಕ್ಕೆ ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ ಎಂದು ಪ್ರಧಾನ ಕಾರ್ಯದರ್ಶಿ ಎಂ. ದೊಡ್ಡಪ್ಪ ವಿವರಿಸಿದ್ದಾರೆ.


**REQUIRED**

MARKETING / SALES PERSON - 04
SALES PERSONS (Counter) - 02
OFFICE INCHARGE - 01
Degree holders and experienced preferred.
Contact with relevant documents.

**VISHWAS SCIENTIFIC Co.**
491/3B, Naganagowdru Complex, Hadadi Road, Davanagare -2
Mob : 9620586349, 9900096349
Timings : 11 AM to 2 PM, 6 PM to 7-30 PM


ಸಿವಿಲ್ ಮೀಸಲೇನಿಯಸ್ ನಂಬರ್ : 43/2019

**ಮಾನ್ಯ 2ನೇ ಹೆಚ್ಚುವರಿ ಜಿಲ್ಲಾ ವ ಸತ್ರ ನ್ಯಾಯಾಧೀಶರು ರಾಣೇಬೆನ್ನೂರು ಇವರ ನ್ಯಾಯಾಲಯದಲ್ಲಿ**

ಅರ್ಜಿದಾರರು : 1) **ಭೈರಪ್ಪ ತಂದೆ ನೀಲಕಂಠಪ್ಪ ಜಾಡರ** ಹಾಗೂ ಇತರರು

ವಿರುದ್ಧ

ಎದುರುದಾರರು : 1) **ಬಸವರಾಜ ತಂದೆ ಗಣೇಶಪ್ಪ ಗಂಜಿ** ಹಾಗೂ ಇತರರು.

**ಇಸ್ತಿಹಾರ ನಾಮೆ**

ಈ ಮೇಲ್ಕಾಣಿಸಿದ ಕೇಸಿನಲ್ಲಿ 6ನೇ ಎದುರುಗಾರಳು ಶ್ರೀಮತಿ ಕರಬಸಮ್ಮ ಕೋಂ ವೀರೇಶ ಶಿರೂರ ಸಾ|| ಶಿವಕುಮಾರ ಬಡಾವಣೆ, ಹದಡಿ ರಸ್ತೆ ದಾವಣಗೆರೆ ತಾ. ದಾವಣಗೆರೆ, ಜಿ. ದಾವಣಗೆರೆ ಇವರ ಮೇಲೆ ಹಾಗೂ ಇನ್ನೂ ಇತರೆ ಎದುರದಾರರ ಮೇಲೆ ಮಾನ್ಯ 2ನೇ ಹೆಚ್ಚುವರಿ ಜಿಲ್ಲಾ ವ ಸತ್ರ ನ್ಯಾಯಾದೀಶರು ರಾಣೇಬೆನ್ನೂರು ಇವರ ನ್ಯಾಯಾಲಯದಲ್ಲಿ ಸಿವಿಲ್ ಮಿಸಲೇನಿಯಸ್ ನಂಬರ್ : 43 / 2019ನೇದ್ದನ್ನು ದಾಖಲ್ ಪಡಿಸಿದ್ದು, ಇರುತ್ತದೆ. ಕಾರಣ 6ನೇ ಎದುರುಗಾರಳು ಶ್ರೀಮತಿ ಕರಬಸಮ್ಮ ಕೋಂ ವೀರೇಶ ಶಿರೂರ ನೀವಾಗಲೀ ಅಥವಾ ನಿಮ್ಮ ಪರವಾಗಿ ವಕೀಲರಾಗಲೀ ದಿನಾಂಕ : 6.6.2022 ರಂದು ಮುಂಜಾನೆ 10.30 ಗಂಟೆಗೆ ಮಾನ್ಯ ನ್ಯಾಯಾಲಯಕ್ಕೆ ಹಾಜರ್ ಆಗಿ ನಿಮ್ಮ ತಕರಾರು ಸಲ್ಲಿಸಬೇಕು. ತಪ್ಪಿದ್ದಲ್ಲಿ ಸದರ ಸಿವಿಲ್ ಮೀಸಲೇನಿಯಸ್ ನಂಬರ : 43/ 2019ನೇದ್ದರಲ್ಲಿ ನಿಮ್ಮ ವಿರುದ್ಧ ಮುಂದಿನ ಆದೇಶ ಮಾಡಲಾಗುವುದು.

ಈ ದಿವಸ ದಿನಾಂಕ : 28 ನೇ ಏಪ್ರಿಲ್ 2022 ರಂದು ತಮ್ಮ ಸಹಿ ಹಾಗೂ ಕೋರ್ಟಿನ ಮೊಹರಿನೊಂದಿಗೆ ಕೊಡಲ್ಪಟ್ಟಿತು.

ನ್ಯಾಯಾಲಯದ ಆದೇಶದ ಮೇರೆಗೆ
**ಶಿರಸ್ತೇದಾರರು**
ಮಾನ್ಯ 2ನೇ ಹೆಚ್ಚುವರಿ ಜಿಲ್ಲಾ ವ ಸತ್ರ ನ್ಯಾಯಾಧೀಶರ ನ್ಯಾಯಾಲಯ
ರಾಣೇಬೆನ್ನೂರು

ಅರ್ಜಿದಾರರ ಪರ ನ್ಯಾಯವಾದಿಗಳು
**ಶ್ರೀ ಆರ್ ಸಿ ಶಿಡೇನೂರು**
ನ್ಯಾಯವಾದಿಗಳು, ರಾಣೇಬೆನ್ನೂರು


Bapuji Educational Association (Regd)

**B. E. A Nursery, Higher Primary & High School**

P.J. Extension, Davangere – 577 002, Office : 08192 252624 Mob: 97318 77156

**Admissions Open from LKG to 10th Standard**
**English Medium Co - Education**
**Located in the heart of the city.**
*** Unique Features of our School ***

- Admirable, Hygienic Environment with Children safety.
- Well equipped Building, Teaching aids.
- Well experienced skilled permanent teaching faculty.
- Exquisite Library and Laboratory.
- We provide Computer Education from 1st std to 10th standard.
- Specious Play Ground, Encouragement to sports items.
- Special attention to Co-curricular activities.
- Remedial Classes and Special Coaching.
- Scout and Guides Training.
- Gold Medals for Meritorious outstanding SSLC Performers.
- Valued Based Education.
- Fee Concession for deserving candidates.
- Special Talks from Guest – Lecturers.

*School President*
Smt. Kiruwadi Girijamma

*School Head Master*
Sri Ravi. G. S.

ssims SPARSH
CENTRE FOR ACCIDENTS BONE & JOINT CARE

## ಸ್ಪರ್ಶ್ ಆಸ್ಪತ್ರೆ - ಬೆಂಗಳೂರು,

### ಇಲ್ಲಿನ ಪ್ರಮುಖ ಮೂಳೆ ಹಾಗೂ ಕೀಲು ಶಸ್ತ್ರಚಿಕಿತ್ಸಕರು

ನಿಮ್ಮ ದಾವಣಗೆರೆಗೆ ಭೇಟಿ ನೀಡುತ್ತಾರೆ

| ಡಾ. ರವಿಕುಮಾರ್ ಮುಕಾರ್ತಿಹಾಳ್ | ಡಾ. ನವೀನ್ ತಹಶೀಲ್ದಾರ್ |
|---|---|
| D'Ortho, DNB (Ortho), Fellowship in Arthroplasty (Depuy, SPARSH India), Fellowship in Septic & Aseptic Revision Joint Replacement surgery (EndoKlinik, Germany)<br>ಮೂಳೆ ಮತ್ತು ಕೀಲು ಮರುಜೋಡಣಾ ಶಸ್ತ್ರಚಿಕಿತ್ಸಕರು | MS(Ortho), AOA Fellow (Melbourne, Australia), Combined Neurosurgery & Orthopedic Spine Fellowship (Amrita Institute, Kochi)<br>ಬೆನ್ನುಹುರಿ ಶಸ್ತ್ರಚಿಕಿತ್ಸಕರು |
| ದಿನಾಂಕ: ಗುರುವಾರ, 5ನೇ ಮೇ 2022 | ದಿನಾಂಕ: ಗುರುವಾರ, 5ನೇ ಮೇ 2022 |

ಸಮಯ: ಬೆಳಿಗ್ಗೆ 11ರಿಂದ ಸಂಜೆ 4ರವರೆಗೆ

ಹೊರ ರೋಗಿಗಳ ಕ್ಲಿನಿಕ್ ವಿಳಾಸ: ಎಸ್. ಎಸ್. ಸ್ಪೆಷಾಲಿಟಿ ಕ್ಲಿನಿಕ್, ಮೋದಿ ಕಾಂಪೌಂಡ್, ಎಂ.ಸಿ.ಸಿ. 'ಎ' ಬ್ಲಾಕ್, ಮೋತಿ ವೀರಪ್ಪ ಕಾಲೇಜು ಹತ್ತಿರ, ದಾವಣಗೆರೆ - 577 002

**ನೋಂದಣಿಗಾಗಿ ಕರೆಮಾಡಿ: 96869 29090**

ಸ್ಪರ್ಶ್ ಆಸ್ಪತ್ರೆ ಎಲ್ಲಾ ಆರೋಗ್ಯ ವಿಮಾ(TPA) ಯೋಜನೆಯಡಿಯಲ್ಲಿ ಅಂಗೀಕೃತವಾಗಿದೆ


## ಪ್ರಥಮ ವರ್ಷದ ಪುಣ್ಯಸ್ಮರಣೆ



ಅಂದನೂರು ನಿರಂಜನ ಮುರುಗೇಂದ್ರ ಅವರ ಧರ್ಮಪತ್ನಿಯಾದ ದಿ. ಶ್ರೀಮತಿ

**ಎ.ಎನ್ ಸುವರ್ಣ**

ಅವರ ಪುಣ್ಯ ಸ್ಮರಣೆಯನ್ನು ದಿ. 2.5.2022 ರಂದು ಸೋಮವಾರ ಮಧ್ಯಾಹ್ನ 12.00 ಗಂಟೆಗೆ ಎಸ್.ಎಸ್. ಬಡಾವಣೆ, ದಾವಣಗೆರೆಯಲ್ಲಿರುವ ಸ್ವಗೃಹದಲ್ಲಿ ನೆರವೇರಿಸಲಾಗುವುದು.

**ಇಂತಿ ದುಃಖತಪ್ತ ಕುಟುಂಬ ವರ್ಗ**

ಮಕ್ಕಳು, ಅಳಿಯಂದಿರು ಹಾಗೂ ಮೊಮ್ಮಕ್ಕಳು
ಮಗಳು : ಶ್ರೀಮತಿ ಎ.ಎನ್ ಶ್ರೀದೇವಿ (ಶ್ವೇತ) & ಅನಿಲ್ ಡಿ.ವಿ ಚಿತ್ರದುರ್ಗ
ಶ್ರೀಮತಿ ಎ.ಎನ್ ಚಂದ್ರಕಲಾ & ವಿಶ್ವನಾಥ ಕೆ.ಆರ್, ಬೆಂಗಳೂರು.
ಅಂದನೂರು ಎ.ಎನ್ ಕಾವ್ಯ (ಬಿ.ಇ)
ಅಂದನೂರು ಬಂಧುಗಳು ಮತ್ತು ಅಂದನೂರು ಬಳಗ

## ಸಂಭವ್ ಜ್ಯೂಯಲರ್ಸ್ ಮಾಲೀಕರಾದ ಪ್ರಕಾಶ್ ಕುಮಾರ್ ತಾರಾಚಂದ್‌ಜೀ ನಿಧನ



ದಾವಣಗೆರೆ ಹಾಸಬಾವಿ ಸರ್ಕಲ್‌ನಲ್ಲಿರುವ ಸಂಭವ್ ಜ್ಯೂಯಲರ್ಸ್ ಮಾಲೀಕರಾದ

**ಶ್ರೀ ಪ್ರಕಾಶ್ ತಾರಾಚಂದ್‌ಜೀ**

ಅವರು ದಿನಾಂಕ 01.05.2022ರ ಭಾನುವಾರ ಮಧ್ಯಾಹ್ನ 12.15ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 64 ವರ್ಷ ವಯಸ್ಸಾಗಿತ್ತು. ಪತ್ನಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 01.05.2022ರ ಭಾನುವಾರ ಸಂಜೆ 5 ಗಂಟೆಗೆ ನಗರದ ಜೈನ್ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು.

ದುಃಖತಪ್ತ ಕುಟುಂಬ ವರ್ಗ ಮತ್ತು ಸಿಬ್ಬಂದಿ ವರ್ಗದವರು

**ಸಂಭವ್ ಜ್ಯೂಯಲರ್ಸ್,** ಹಾಸಬಾವಿ ಸರ್ಕಲ್, ದಾವಣಗೆರೆ.

॥ ಕುಲದೇವತಾ ಪ್ರಸನ್ನ ॥ ॥ ಶ್ರೀ ಗ್ರಾಮ ದೇವತಾ ಕೃಪೆ ॥

## ಪ್ರಥಮ ವರ್ಷದ ಪುಣ್ಯಸ್ಮರಣೆ ಆಹ್ವಾನ ಪತ್ರಿಕೆ



ಶ್ರೀಮತಿ ಮೀನಾಕ್ಷಿ ದತ್ತಾತ್ರೇಯ ರೇವಣಕರ್ ಮತ್ತು ಮಕ್ಕಳು

ಇವರು ಮಾಡುವ ವಿಜ್ಞಾಪನೆಗಳು. ದಾವಣಗೆರೆ ದಿನಾಂಕ 02.05.2021 ಸೋಮವಾರ ಮಧ್ಯಾಹ್ನ 1 ಗಂಟೆಗೆ ನನ್ನ ಪೂಜ್ಯ ಪತಿಯವರಾದ

**ದಿ॥ ಶ್ರೀ ದತ್ತಾತ್ರೇಯ ಆರ್.ರೇವಣಕರ್**

ಇವರ **ಪ್ರಥಮ ವರ್ಷದ ಪುಣ್ಯ ಸ್ಮರಣೆಯನ್ನು**

ದಿನಾಂಕ: 02.5.2022ರ ಸೋಮವಾರ ದೈವಜ್ಞ ಕಲ್ಯಾಣ ಮಂಟಪ, ಪಿ.ಬಿ. ರಸ್ತೆ ದಾವಣಗೆರೆ ಇಲ್ಲಿ ನೆರವೇರಿಸಲು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

**ಸಂಗೀತ ಕಾರ್ಯಕ್ರಮ:** ಮಧ್ಯಾಹ್ನ 12.30 ರಿಂದ 3 ಗಂಟೆವರೆಗೆ ಯು. ನಾಗರಾಜ್ ಶೇಟ್ ಉಡುಪಿ ಮತ್ತು ಬಳಗದಿಂದ "ಭಕ್ತಿಗಾನ ಸುಧಾ" ಸಂಗೀತ ಕಾರ್ಯಕ್ರಮ ಏರ್ಪಡಿಸಲಾಗಿದೆ.

ಶ್ರೀಮತಿ ಮೀನಾಕ್ಷಿ ದತ್ತಾತ್ರೇಯ ರೇವಣಕರ್, ಸುರೇಂದ್ರ ಡಿ. ರೇವಣಕರ್ ಮತ್ತು ರವೀಂದ್ರ ಡಿ. ರೇವಣಕರ್ ಮತ್ತು ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು.

**ನ್ಯೂ ಎಂ.ಜಿ.ಎಸ್. ಜ್ಯೂಯಲರ್ಸ್**

ಮೊ: 94489 29897, 94813 08777

ಈ ಕಾರ್ಯಕ್ರಮದ ನಿಮಿತ್ತ ಮಧ್ಯಾಹ್ನ 3 ಗಂಟೆ ನಂತರ "ನ್ಯೂ ಎಂ.ಜಿ.ಎಸ್ ಅಂಗಡಿ" ತೆರೆದಿರುತ್ತದೆ.

ವಿ.ಸೂ: ಪತ್ರಿಕೆ ತಲುಪದವರು ಇದ್ದನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಲು ಕೋರಿದೆ




ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಲೋಕೋಪಯೋಗಿ ಇಲಾಖೆಗಳ ವತಿಯಿಂದ ದಾವಣಗೆರೆ ಜಿಲ್ಲೆ ಮಾಯಕೊಂಡ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಕೆಳಕಂಡ ಗ್ರಾಮಗಳಲ್ಲಿ ರಸ್ತೆಗಳ ಅಭಿವೃದ್ಧಿ ಕಾಮಗಾರಿಗಳ

## ಭೂಮಿ ಪೂಜೆ ಕಾರ್ಯಕ್ರಮ



ದಿನಾಂಕ : 02.05.2022, ಸೋಮವಾರ



**ಕಾಮಗಾರಿಗಳ ವಿವರ :**

- ದಾವಣಗೆರೆ ತಾಲ್ಲೂಕು ಆನಗೋಡು ಗ್ರಾಮದ ಪಶುವೈದ್ಯ ಆಸ್ಪತ್ರೆ ಉದ್ಘಾಟನೆ ಅಂದಾಜು ಮೊತ್ತ: ರೂ.35.00 ಲಕ್ಷಗಳು
- ದಾವಣಗೆರೆ ತಾಲ್ಲೂಕು ಆನಗೋಡು ಗ್ರಾಮದ ಮುಖ್ಯರಸ್ತೆಯಿಂದ ಶ್ರೀ ಮರುಳ ಸಿದ್ದೇಶ್ವರ ದೇವಸ್ಥಾನದ ರಸ್ತೆ ಅಭಿವೃದ್ಧಿ (ದ್ವಿ-ಮುಖ ರಸ್ತೆ) ಅಂದಾಜು ಮೊತ್ತ: 75.00 ಲಕ್ಷಗಳು
- ದಾವಣಗೆರೆ ತಾಲ್ಲೂಕು ಸಿದ್ದನೂರು ಗ್ರಾಮದಿಂದ ಕೊಗ್ಗನೂರು ರಸ್ತೆ ಅಭಿವೃದ್ಧಿ (ಮಾರ್ಗ ಮರುಳಸಿದ್ದೇಶ್ವರ ದೇವಸ್ಥಾನ) ಅಂದಾಜು ಮೊತ್ತ: ರೂ.53.00 ಲಕ್ಷಗಳು
- ದಾವಣಗೆರೆ ತಾಲ್ಲೂಕು ಕಂದನಕೋವಿ -ಮೂಡೇನಹಳ್ಳಿ ರಸ್ತೆ ಅಭಿವೃದ್ಧಿ ಅಂದಾಜು ಮೊತ್ತ: ರೂ.55.00 ಲಕ್ಷಗಳು
- ದಾವಣಗೆರೆ ತಾಲ್ಲೂಕು ಗುಡಾಳು ಗ್ರಾಮದ ಬಹುರಸ್ತೆಗಳು ಕೂಡುವ ವೃತ್ತದ ಅಭಿವೃದ್ಧಿ ಅಂದಾಜು ಮೊತ್ತ: ರೂ.52.00 ಲಕ್ಷಗಳು
- ದಾವಣಗೆರೆ ತಾಲ್ಲೂಕು ಮಲ್ಪೆ-ಮೊಳಕಾಲ್ಮೂರು (ಎಸ್.ಹೆಚ್.-65) ರಸ್ತೆಯಿಂದ ಹೈವೆ ಕೂಡು ರಸ್ತೆ 278.40 ಕಿ.ಮೀ. 279.60 ಕಿ.ಮೀ (ಅಣಜಿ ಟ್ಯಾಂಕ್ ಬಂಡ್ ಹತ್ತಿರ) ಅಭಿವೃದ್ಧಿ ಅಂದಾಜು ಮೊತ್ತ: ರೂ.225.00 ಲಕ್ಷಗಳು
- ದಾವಣಗೆರೆ ತಾಲ್ಲೂಕು ಆಲೂರು ಗ್ರಾಮದಿಂದ ಆಲೂರುಹಟ್ಟಿ ಕೂಡು ರಸ್ತೆವರೆಗೆ ಸಿ.ಸಿ. ರಸ್ತೆ ನಿರ್ಮಾಣ ಅಂದಾಜು ಮೊತ್ತ: ರೂ.100.00 ಲಕ್ಷಗಳು
- ದಾವಣಗೆರೆ -ಜಗಳೂರು ರಸ್ತೆಯಿಂದ ಆಲೂರು ಕ್ರಾಸ್‌ವರೆಗೆ ರಸ್ತೆ ಅಭಿವೃದ್ಧಿ: ಅಂದಾಜು ಮೊತ್ತ: ರೂ.250.00 ಲಕ್ಷಗಳು
- ಆಲೂರು ಗ್ರಾಮದಿಂದ ಮಲ್ಲಾಪುರದ ಕಡೆಗೆ ರಸ್ತೆ ಅಭಿವೃದ್ಧಿ.: ಅಂದಾಜು ಮೊತ್ತ: ರೂ.60.00 ಲಕ್ಷಗಳು

**ಒಟ್ಟು ಮೊತ್ತ : 905 ಲಕ್ಷ ರೂಗಳು**



ಮೇಲಿನ ಎಲ್ಲಾ ಕಾಮಗಾರಿಗಳ ಭೂಮಿ ಪೂಜೆಗೆ ಆಗಮಿಸುತ್ತಿರುವ
**ಸನ್ಮಾನ್ಯ ಶ್ರೀ ಡಾ. ಜಿ.ಎಂ. ಸಿದ್ದೇಶ್ವರ,** ಮಾನ್ಯ ಸಂಸದರು, ದಾವಣಗೆರೆ
**ಸನ್ಮಾನ್ಯ ಶ್ರೀ ಪ್ರೊ॥ ಎನ್. ಲಿಂಗಣ್ಣ,** ಶಾಸಕರು ಹಾಗು ಅಧ್ಯಕ್ಷರು, ಕರ್ನಾಟಕ ಲಿಡ್‌ಕರ್ ಅಭಿವೃದ್ಧಿ ನಿಗಮ
**ಶ್ರೀ ಹನಗವಾಡಿ ವೀರೇಶ್,** ಬಿಜೆಪಿ ಜಿಲ್ಲಾಧ್ಯಕ್ಷರು, ದಾವಣಗೆರೆ
**ಶ್ರೀ ಅಣಬೇರು ಜೀವನ್‌ಮೂರ್ತಿ,** ಅಧ್ಯಕ್ಷರು, ಕರ್ನಾಟಕ ಬಯಲು ಸೀಮೆ ಅಭಿವೃದ್ಧಿ ನಿಗಮ
**ಶ್ರೀ ದೇವೇಂದ್ರಪ್ಪ ಶ್ಯಾಗಲೆ,** ಬಿಜೆಪಿ ಅಧ್ಯಕ್ಷರು ಮಾಯಕೊಂಡ ಕ್ಷೇತ್ರ
ಮತ್ತು ಬಿ.ಜೆ.ಪಿ.ಯ ಎಲ್ಲಾ ಕಾರ್ಯಕರ್ತರುಗಳಿಗೂ ಹಾಗೂ ಮುಖಂಡರುಗಳಿಗೂ, ಅಭಿಮಾನಿಗಳಿಗೂ ಹಾಗೂ ಸಂಬಂಧ ಪಟ್ಟ ಎಲ್ಲಾ ಗ್ರಾಮದ ಗ್ರಾಮಸ್ಥರುಗಳಿಗೂ

**ಹೃದಯ ಪೂರ್ವಕ ಸುಸ್ವಾಗತ**



## ಶ್ರೀ ಕನ್ನಿಕಾಪರಮೇಶ್ವರಿ ಕೋ-ಆಪ್.ಬ್ಯಾಂಕ್ ಲಿಮಿಟೆಡ್

#165/1-2, ವಾಸವಿ ರಸ್ತೆ, 3ನೇ ಮುಖ್ಯರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ-2. (ಕರ್ನಾಟಕ)



### ಸರ್ವರಿಗೂ ವಾಸವಿ ಜಯಂತಿ ಹಬ್ಬದ ಶುಭಾಶಯಗಳು




ವಾಸವಿ ಜಯಂತಿಯ ಅಂಗವಾಗಿ ದಿನಾಂಕ 04.05.2022ರಿಂದ ದಿನಾಂಕ 04.06.2022ರವರೆಗೆ ಠೇವಣಿ ಮಾಸಾಚರಣೆಯನ್ನು ಆಚರಿಸುತ್ತಿದ್ದೇವೆ. ಈ ಅವಧಿಯಲ್ಲಿ ಸ್ವೀಕರಿಸುವ ನೂತನ "ವಾಸವಿ-450" ಠೇವಣಿಗೆ ಶೇ.7.50ರ ಬಡ್ಡಿದರದಲ್ಲಿ ಬಡ್ಡಿಯನ್ನು ಠೇವಣಿಗೆ ಆಕರಣೆ ಮಾಡಲಾಗುತ್ತದೆ. ಪ್ರಯುಕ್ತ ನೂತನ ಠೇವಣಿ ಯೋಜನೆಯಲ್ಲಿ ಮಾನ್ಯ ಸಾರ್ವಜನಿಕರು, ಸದಸ್ಯಬಾಂಧವರು, ಗ್ರಾಹಕರು, ಠೇವಣಿದಾರರು ತಮ್ಮ ಅಮೂಲ್ಯವಾದ ಹಣವನ್ನು ತೊಡಗಿಸುವ ಮೂಲಕ ಆಕರ್ಷಕ ಬಡ್ಡಿಯನ್ನು ಪಡೆಯಲು ವಿನಂತಿಸುತ್ತೇವೆ.

ಈ ಶುಭ ಸಂದರ್ಭದಲ್ಲಿ ಬ್ಯಾಂಕಿನ ಷೇರುದಾರ ಬಾಂಧವರಿಗೆ, ಗ್ರಾಹಕರಿಗೆ, ಠೇವಣಿದಾರರಿಗೆ ಹಾಗೂ ದಾವಣಗೆರೆ ಜಿಲ್ಲೆಯ ಸಮಸ್ತ ಬಾಂಧವರಿಗೆ ಲೋಕ ಮತ್ತು ಮಾನವ ಜನಾಂಗದ ಕಲ್ಯಾಣಕ್ಕಾಗಿ ಅಶ್ವಿನಿ ದೇವತೆಗಳು ಸರ್ವರಿಗೂ ಆರೋಗ್ಯವನ್ನು ದಯಪಾಲಿಸಲಿ ಎಂದು ಪ್ರಾರ್ಥಿಸುತ್ತೇವೆ.

ವೈಶ್ಯ ಕುಲಮಾತೆ ಶ್ರೀಮತ್ ವಾಸವಿ ಕನ್ನಿಕಾಪರಮೇಶ್ವರಿ ಅಮ್ಮನವರು ಸಮಸ್ತ ಜೀವಕೋಟಿಗೆ ಸನ್ಮಂಗಳವನ್ನು ಉಂಟು ಮಾಡಲಿ ಹಾಗೂ ಸಮಸ್ತ ಸಸ್ಯ ಕೋಟಿಯು ನಳನಳಿಸುವಂತೆ ಅನುಗ್ರಹಿಸಲಿ ಎಂದು ಆಶಿಸುತ್ತಾ ವಾಸವಿ ಜಯಂತಿಯ ಶುಭಾಷಯಗಳನ್ನು ಸರ್ವರಿಗೂ ಕೋರುತ್ತೇವೆ.

ಆಡಳಿತ ಮಂಡಳಿ ಪರವಾಗಿ
ಸಹಿ/-
ಆರ್.ಜಿ. ಶ್ರೀನಿವಾಸಮೂರ್ತಿ, ಅಧ್ಯಕ್ಷರು

ನೂತನ ಠೇವಣಿ ಯೋಜನೆ "ವಾಸವಿ-450" ಠೇವಣಿಗೆ **ಶೇ.7.50** ರಷ್ಟು ಆಕರ್ಷಕ ಬಡ್ಡಿದರ

| ಪಿ.ಜೆ. ಬಡಾವಣೆ ಶಾಖೆ | ಎಂ.ಜಿ. ರಸ್ತೆ ಶಾಖೆ | ಚನ್ನಗಿರಿ ಶಾಖೆ | ಹರಪನಹಳ್ಳಿ ಶಾಖೆ |
|---|---|---|---|
| # 165/1-2, ಶ್ರೀ ವಾಸವಿ ರಸ್ತೆ,3ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-02<br>08192-251653 08192-257260 | #395/1-2, ಸೂರ್ಯ ಆರ್ಕೆಡ್, ಮೊದಲನೇ ಮಹಡಿ, ಎಂ.ಜಿ. ರಸ್ತೆ, ದಾವಣಗೆರೆ-01<br>08192-252656 | #809/705/706/707, ತಾಲ್ಲೂಕು ಕ್ರೀಡಾಂಗಣ ಕಟ್ಟಡ, ಹೊಳೆಹೊನ್ನೂರು-ಶಿವಮೊಗ್ಗ ರಸ್ತೆ, ಚನ್ನಗಿರಿ-577213<br>08189-227142 | #57, ಜ್ಯೋತಿ ಕಾಂಪ್ಲೆಕ್ಸ್, ವಾರ್ಡ್ ನಂ.10, ಗೌಳಿ ರಸ್ತೆ, ಹರಪನಹಳ್ಳಿ-583131<br>08398-281886 |


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte